# ಕೆ.ಎನ್.ನಾಗೇಗೌಡರ ಜೀವನ ಸಾಧನೆ

(ಇತಿಹಾಸ ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ
ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕ :
ಶ್ರೀ ಲಿಂಗಪ್ಪ ಎಂ.
REG.NO: KRSMH - 00566

ಮಾರ್ಗದರ್ಶಕರು :
ಡಾ. ಎಸ್.ಶಿವರಾಮು
ಇತಿಹಾಸ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಪಿರಿಯಾಪಟ್ಟಣ, ಮೈಸೂರು ಜಿಲ್ಲೆ.

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ)., ಮಂಡ್ಯ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)
2011-2012

984

# ಕೆ.ಎನ್.ನಾಗೇಗೌಡರ ಜೀವನ ಸಾಧನೆ

(ಇತಿಹಾಸ ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ
ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ನಿಬಂಧ)


ಸಂಶೋಧಕ :
ಶ್ರೀ ಲಿಂಗಪ್ಪ ಎಂ.
REG.NO: KRSMH - 00566

ಮಾರ್ಗದರ್ಶಕರು :
ಡಾ. ಎಸ್.ಶಿವರಾಮು
ಇತಿಹಾಸ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಪಿರಿಯಾಪಟ್ಟಣ, ಮೈಸೂರು ಜಿಲ್ಲೆ.



ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ)., ಮಂಡ್ಯ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)
2011-2012

# ಸಂಶೋಧಕನ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2011–12ನೇ ಸಾಲಿಗೆ ಇತಿಹಾಸ ಎಂ.ಫಿಲ್., ಅಭ್ಯರ್ಥಿಯಾಗಿ ನಾನು ಪ್ರವೇಶಪಡೆದಿರುತ್ತೇನೆ. ನನ್ನ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ಕೆ.ಎನ್.ನಾಗೇಗೌಡರ ಜೀವನ – ಸಾಧನೆ"** ವಿಷಯವನ್ನು ಆಯ್ಕೆ ಮಾಡಿಕೊಂಡು **ಡಾ. ಎಸ್.ಶಿವರಾಮುರವರ** ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತ ಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವವಿದ್ಯಾನಿಲಯವು ನೀಡುವ ಎಂ.ಫಿಲ್ ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತೇನೆ.

M. Lingappa

**(ಲಿಂಗಪ್ಪ .ಎಂ)**
ಸಂಶೋಧಕರು, ಚರಿತ್ರೆ ವಿಭಾಗ
ಎಂ.ಎಲ್.ಶ್ರೀ ಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ

ದಿನಾಂಕ : 23/06/2012
ಸ್ಥಳ : ಮಂಡ್ಯ

## ಮಾರ್ಗದರ್ಶಕರ ಪ್ರಮಾಣ ಪತ್ರ

**"ಕೆ.ಎನ್.ನಾಗೇಗೌಡರ ಜೀವನ-ಸಾಧನೆ"** ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವ ವಿದ್ಯಾನಿಲಯದ ಚರಿತ್ರೆ ಎಂ.ಫಿಲ್ ಪದವಿಗಾಗಿ ಶ್ರೀ ಲಿಂಗಪ್ಪ. ಎಂ. ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

**ಡಾ. ಎಸ್.ಶಿವರಾಮು**
ಇತಿಹಾಸ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಪಿರಿಯಾಪಟ್ಟಣ 571107,
ಮೈಸೂರು ಜಿಲ್ಲೆ.

ದಿನಾಂಕ : 23.6.2012
ಸ್ಥಳ : ಮಂಡ್ಯ

# ವಿಷಯಾನುಕ್ರಮ


| | | ಪುಟಗಳ ಸಂಖ್ಯೆ |
|---|---|---|
| ಅಧ್ಯಾಯ–ಒಂದು | ಪೀಠಿಕೆ | 1–7 |
| ಅಧ್ಯಾಯ–ಎರಡು | ಕೆ.ಎನ್.ನಾಗೇಗೌಡರ ವ್ಯಕ್ತಿ ಜೀವನ | 8–11 |
| ಅಧ್ಯಾಯ–ಮೂರು | ರಾಜಕಾರಣಿಯಾಗಿ ಕೆ.ಎನ್.ನಾಗೇಗೌಡರು | 12–51 |
| ಅಧ್ಯಾಯ–ನಾಲ್ಕು | ಶಿಕ್ಷಣ ಕ್ಷೇತ್ರಕ್ಕೆ ನಾಗೇಗೌಡರ ಕೊಡುಗೆಗಳು | 52–61 |
| ಅಧ್ಯಾಯ–ಐದು | ಉಪ ಸಂಹಾರ | 62–65 |
| | I) ಪರಮಾರ್ಶನ ಗ್ರಂಥಗಳು | 66–68 |
| | II) ಅನುಬಂಧಗಳು | 69 |
| | III) ಛಾಯಾಚಿತ್ರಗಳು | |

# ಅಧ್ಯಾಯ–ಒಂದು
## ಪೀಠಿಕೆ

ನಮ್ಮ ನಾಡಿನಲ್ಲಿ ಪ್ರಾಚೀನಕಾಲದಿಂದಲೂ ಜನರು ಕೃಷಿಯನ್ನೇ ತಮ್ಮ ಬದುಕನ್ನಾಗಿಸಿ ಹಾಗೂ ಉಸಿರನ್ನಾಗಿಸಿ ಕೊಂಡಿದ್ದಾರೆ. ಇಂತಹ ಕ್ರಿಯಾಶೀಲವಾದ ಕೃಷಿಕರು ತಮ್ಮ ಕಷ್ಟ–ಸುಖಗಳನ್ನು ಹಬ್ಬಹರಿದಿನ ಜಾತ್ರೆಗಳ ಮೂಲಕ ವ್ಯಕ್ತಪಡಿಸುತ್ತಿದ್ದಾರೆ. ಅದೇ ರೀತಿ ಕೃಷಿಕರು ತಮ್ಮ ಮೇಲಾಗುತ್ತಿದ್ದ ಅನ್ಯಾಯ ದೌರ್ಜನ್ಯಗಳನ್ನು ಖಂಡಿಸಿ, ಅದರ ವಿರುದ್ಧ ಹೋರಾಟಗಳನ್ನು ನಡೆಸಿದ್ದರು. ಇಂತಹ ರೈತ ಕುಟುಂಬದಿಂದ ಬಂದು ರೈತಪರ ಹೋರಾಟಗಳ ಮೂಲಕ ಗುರುತಿಸಿಕೊಂಡು ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿ, ಪಶುಸಂಗೋಪನೆ, ನೀರಾವರಿ ಮುಂತಾದ ಖಾತೆಗಳ ಮಂತ್ರಿಯಾಗಿ ಕಾರ್ಯನಿರ್ವಹಿಸಿ, ನಾಡಿನ ರೈತ ಹಾಗೂ ಜನ ಸಮುದಾಯಕ್ಕೆ ಅವರು ಅಪಾರ ಕೊಡುಗೆ ನೀಡಿದ್ದಾರೆ. ಇಂತಹ ಜೀವನ–ಸಾಧನೆ ಮಾಡಿರುವ ವ್ಯಕ್ತಿಗಳ ಮೌಲ್ಯಗಳನ್ನು ನಾಗರೀಕ ಸಮಾಜಕ್ಕೆ ತಿಳಿಸಿ, ಅವರ ಮೌಲ್ಯಗಳನ್ನು ಗೌರವಿಸುವುದು ಪ್ರಸ್ತುತ ಸಮಾಜದ ಆದ್ಯ ಕರ್ತವ್ಯವಾಗಿದೆ.[1] ಇಂತಹ ಪ್ರಮುಖ ವ್ಯಕ್ತಿಗಳ ಸಾಲಿನಲ್ಲಿ ನಿಲ್ಲಬಹುದಾದ ಹೆಸರೆಂದರೆ, ಕೆ.ಎನ್. ನಾಗೇಗೌಡರು.

ಇವರು ಮಂಡ್ಯ ಜಿಲ್ಲೆಯ ಜನಪರ ಚಳುವಳಿಗಾರರಾಗಿ, ರಾಜಕಾರಣಿಯಾಗಿ, ನೀರಾವರಿ ತಜ್ಞರಾಗಿ, ಶಿಕ್ಷಣ ಸಂಸ್ಥೆಯ ಸ್ಥಾಪಕರಾಗಿ ಜನಮಾನಸದಲ್ಲಿ ಹಸಿರಾಗಿದ್ದರು. ಇವರು ಕಾಂಗ್ರೆಸ್ ಪಕ್ಷದ ಮುಖಂಡರಾಗಿ, ಜನತಾದಳ ರಾಜ್ಯಾಧ್ಯಕ್ಷರಾಗಿ, ಪಶುಸಂಗೋಪನೆ, ನೀರಾವರಿ ಸಚಿವರಾಗಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದರು. ಅಲ್ಲದೆ ಇವರನ್ನು ಮಂಡ್ಯ ರಾಜಕಾರಣದ ಮರೆಯಲಾಗದ ನಕ್ಷತ್ರ ಎಂದೂ ಕೂಡ ಕರೆಯಬಹುದು.

ಕೆ.ನ್.ನಾಗೇಗೌಡರು ಜನಪರ ಚಳುವಳಿಯಲ್ಲಿ ನಿತ್ಯವೃಂದರು ಹಾಗೂ ಪ್ರಾಂತ ಸ್ಮರಣಿಯರು, ತಮ್ಮ ನಿಸ್ವಾರ್ಥ ಸೇವೆಯಿಂದ ಜನಮನ್ನಣೆ ಗಳಿಸಿದರು. ರೈತ ಹಾಗೂ ದಿನದಲಿತರ ಬದುಕನ್ನು ಹಸನುಗೊಳಿಸಬೇಕೆಂಬ ಹಂಬಲದಿಂದ ಆದರ್ಶ ಮೌಲ್ಯಗಳನ್ನು ಮೈಗೂಡಿಸಿಕೊಂಡಿದ್ದರು. ಗೌಡರು ಕುಯುಕ್ತಿ, ಕುತಂತ್ರ, ಪಿತೂರಿ ಶಬ್ದಗಳ ಅರಿವಿಲ್ಲದೆ ಟೀಕೆ ಟಿಪ್ಪಣಿಗಳಿಗೆ ಕಿವಿಗೊಡದೆ ವೈಯಕ್ತಿಕ ಜೀವನದಲ್ಲಿ ನೇರವಾದ ಬದುಕನ್ನು ಅವಲಂಬಿಸಿದ ವ್ಯಕ್ತಿ.

**ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳ ಸಮೀಕ್ಷೆ :**

ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಪುಸ್ತಕಗಳು, ಅಭಿನಂದನಾ ಗ್ರಂಥಗಳು, ಸಂಚಿಕೆಗಳು ಪ್ರಕಟವಾಗಿವೆ. ಕೆ.ಎನ್. ನಾಗೇಗೌಡರ ದಿನಚರಿ ಹಾಗೂ ಹಲವು ದಾಖಲೆಗಳು ಉಪಯುಕ್ತವಾಗಿವೆ. ಕೆ.ಎನ್.ನಾಗೇಗೌಡರನ್ನು ಕುರಿತಂತೆ ಸಮಕಾಲೀನ ಹಲವು ಗ್ರಂಥಗಳಲ್ಲಿ ಅವರ ಹೋರಾಟದ ಬಗ್ಗೆ ವಿವರಣೆಯನ್ನು ಪಡೆಯಬಹುದಾಗಿದೆ. 2005 ರಲ್ಲಿ **ಹೆಚ್.ಎಸ್.ಮುದ್ದೇಗೌಡರ** ಪ್ರಧಾನಸಂಪಾದಕತ್ವದಲ್ಲಿ ಪ್ರಕಟಣೆಗೊಂಡ **"ಛಲಗಾರ"**

(ಕೆ.ಎನ್.ನಾಗೇಗೌಡರ ಸಂಸ್ಮರಣ ಗ್ರಂಥ) ದಲ್ಲಿ ನಾಗೇಗೌಡ ಜೀವನದ ಬಗ್ಗೆ ತಿಳಿಸಲಾಗಿದೆ. **ದೇ. ಜವರೇಗೌಡ** ಸಂಪಾದಕತ್ವದಲ್ಲಿ ಮಂಡ್ಯದಲ್ಲಿ 1994ರಲ್ಲಿ ನಡೆದ 63ನೇ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಪುಟ **"ಸಿರಿಯೊಡಲು"** ಗ್ರಂಥದಲ್ಲಿ ವರುಣಾನಾಲಾ ವಿರೋಧಿ ಚಳುವಳಿ ಹಾಗೂ ಮಂಡ್ಯ ಜಿಲ್ಲೆ ಶಿಕ್ಷಣದ ಬಗ್ಗೆ ತಿಳಿಸಲಾಗಿದೆ. 1994ರಲ್ಲಿ **ದೇಜಗೌ** ಸಂಪಾದಕತ್ವದ **"ಸುವರ್ಣ ಮಂಡ್ಯ"** ಗ್ರಂಥದಲ್ಲಿ ಮಂಡ್ಯ ಜಿಲ್ಲೆಯ ಜನಪರ ಚಳುವಳಿಗಳು ಹಾಗೂ ಕೆ.ಎನ್.ನಾಗೇಗೌಡರು ಆ ಚಳುವಳಿಯಲ್ಲಿ ವಹಿಸಿದ ಪಾತ್ರದ ಬಗ್ಗೆ ಸವಿವರವಾದ ವಿವರಣೆ ಇದೆ.

2006ರಲ್ಲಿ ಪ್ರತಿಭಾವಂತ ಸಂಸದೀಯಪಟು ಪುಸ್ತಕ ಮಾಲಿಕೆಯಲ್ಲಿ **ಹೆಚ್.ಎಸ್.ಮುದ್ದೇಗೌಡ** ರಚಿಸಿರುವ **"ಕೆ.ಎನ್.ನಾಗೇಗೌಡ"** ಕೃತಿಯಲ್ಲಿ ನಾಗೇಗೌಡರ ಜೀವನ ಮತ್ತು ಶಾಸಕರಾಗಿ ಸಚಿವರಾಗಿ ಅವರ ಕಾರ್ಯ ಸಾಧನೆಯ ಬಗ್ಗೆ ತಿಳಿಸಲಾಗಿದೆ. 2006ರಲ್ಲಿ **ಎಂ.ಜಿ.ನಾಗರಾಜು**ರವರು ರಚಿಸಿರುವ **"ಕರ್ನಾಟಕ ರೈತ ಚಳುವಳಿ–ಸತ್ಯಾಗ್ರಹಗಳು"** ಕೃತಿಗಳಲ್ಲಿ ನಾಗೇಗೌಡರು ವರುಣಾನಾಲಾ ವಿರೋಧಿ ಚಳುವಳಿಯಲ್ಲಿ ಭಾಗವಹಿಸಿದ ಹಾಗೂ ರೈತಪರ ಧ್ವನಿ ಎತ್ತಿ ಗಮನ ಸೆಳದ ಬಗ್ಗೆ ತಿಳಿಸಲಾಗಿದೆ. 2007ರಲ್ಲಿ **ಬಿ.ಟಿ. ಶ್ರೀನಿವಾಸಗೌಡರು** ಬರೆದಿರುವ **"ಕಾವೇರಿ–ಕಣ್ಣೆರು ತಣ್ಣೀರು"** ಕೃತಿಯಲ್ಲಿ ವರುಣಾ ನಾಲಾ ವಿರೋಧಿ ಚಳುವಳಿಯ ಬಗ್ಗೆ ತಿಳಿಸಲಾಗಿದೆ. **ಹೆಚ್.ಎಸ್.ಮುದ್ದೇಗೌಡರ "ಜೀವನಾಡಿ"** ಕೃತಿಯಲ್ಲಿ ನಾಗೇಗೌಡರು ನೀರಾವರಿ ಸಚಿವರಾಗಿದ್ದಾಗ ಕೈಗೊಂಡ ವಿಶ್ವೇಶ್ವರನಾಲಾ ಆಧುನೀಕರಣದ ಬಗ್ಗೆ ತಿಳಿಸಲಾಗಿದೆ. 2006ರಲ್ಲಿ **ಪಿ.ಕೆ.ರಾಜಶೇಖರ** ಪ್ರಧಾನಸಂಪಾದಕತ್ವದ **"ಮಣ್ಣಿನ ಹಣತೆ"** ಗ್ರಂಥದಲ್ಲಿ **ಎಂ.ಸಿ.ವೀರಭದ್ರಸ್ವಾಮಿ**ಯವರ **"ವರ್ಣರಂಜಿತ ರಾಜಕಾರಣಿ ಕೆ.ಎನ್.ನಾಗೇಗೌಡರು"** ಎಂಬ ಲೇಖನವು ನಾಗೇಗೌಡರ ಸಂಕ್ಷಿಪ್ತ ಜೀವನದ ಬಗ್ಗೆ ವಿವರಣೆ ನೀಡುತ್ತದೆ.

2011ರಲ್ಲಿ **ಕೃಷ್ಣೇಗೌಡ ಹುಸ್ಕೂರು** ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಣೆಗೊಂಡಿರುವ **"ಮಳವಳ್ಳಿ ಮುತ್ತು"** ಎಂಬ ಸ್ಮರಣ ಸಂಚಿಕೆಯಲ್ಲಿ ಮಳವಳ್ಳಿ ತಾಲ್ಲೂಕಿನ ಶೈಕ್ಷಣಿಕ ಬೆಳವಣಿಗೆಯ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡುತ್ತದೆ. 2012ರಲ್ಲಿ **ಹೆಚ್.ಪಿ.ರಾಜಶೇಖರ** ಅವರ ಸಂಪಾದಕತ್ವದ **"ನೇಗಿಲಭಾಗ್ಯ"** ವಾರ್ಷಿಕ ಸಂಚಿಕೆಯಲ್ಲಿ **"ಮಂಡ್ಯ ರಾಜಕಾರಣದ ಮರೆಯಲಾಗದ ನಕ್ಷತ್ರ"** ಕೆ.ಎನ್.ನಾಗೇಗೌಡ ಎಂಬ ಲೇಖನವಿದೆ. ಇದು ಗೌಡರ ಜೀವನ ಪರಿಚಯದ ಸಂಕ್ಷಿಪ್ತ ನೋಟ ನೀಡಿದೆ. 2008ರ **ಶಿವರಾಮು ಎಸ್**.ರವರ **"ಶಂಕರಗೌಡರ ಜೀವನ ಸಾಧನೆ"** ಕೃತಿಯು ವರುಣ ನಾಲಾ ಹೋರಾಟದ ಬಗ್ಗೆ ತಿಳಿಸುತ್ತದೆ. 1996ರಲ್ಲಿ ಶಾಂತಿ ಕಾಲೇಜಿನ ಬೆಳ್ಳಿಹಬ್ಬದ ಸ್ಮರಣ ಸಂಚಿಕೆ **"ಪ್ರಶಾಂತಿ"**ಯಲ್ಲಿ, ಶಾಂತಿ ಕಾಲೇಜಿನ ಹಾಗೂ ನಾಗೇಗೌಡರ ಬಗ್ಗೆ ತಿಳಿಸುತ್ತದೆ. 2003ರಲ್ಲಿ **ಪಾರ್ಥಸಾರಥಿ** ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಗೊಂಡ **"ಮಂಡ್ಯ ಜಿಲ್ಲಾ ಗ್ಯಾಸೆಟಿಯರ್"** ಇದು ಮಂಡ್ಯ ಜಿಲ್ಲೆಯ ಶಿಕ್ಷಣದ ಬೆಳವಣಿಗೆ

ಹಾಗೂ ರೈತ ಚಳುವಳಿ ಬಗ್ಗೆ ತಿಳಿಸುತ್ತದೆ. ಇಷ್ಟೆಲ್ಲಾ ಗ್ರಂಥಗಳು, ಸಂಚಿಕೆಗಳು ಪ್ರಕಟಣೆಗೊಂಡಿದ್ದರೂ ಕೆ.ಎನ್. ನಾಗೇಗೌಡರ ಜೀವನ-ಸಾಧನೆಯ ಹಲವು ಪ್ರಮುಖ ಘಟನೆಗಳನ್ನು ಸಂಪೂರ್ಣವಾಗಿ ತಿಳಿಸಿರುವುದಿಲ್ಲ. ಈ ಉದ್ದೇಶದಿಂದ ಕೆ.ಎನ್. ನಾಗೇಗೌಡರ ಬಗ್ಗೆ ಅಧ್ಯಯನ ನಡೆಸುವುದು ಸೂಕ್ತವೆನಿಸುತ್ತದೆ. ಇದುವರೆಗೆ ನಾಗೇಗೌಡರ ಬಗ್ಗೆ ಪ್ರಕಟಗೊಂಡಿರುವ ಗ್ರಂಥಗಳ ಜೊತೆಗೆ ನಾಗೇಗೌಡರ ಒಡನಾಡಿಗಳ ವೈಯಕ್ತಿಕ ಸಂದರ್ಶನ ನಡೆಸಿ ಅವುಗಳನ್ನು ಆಧಾರವಾಗಿಟ್ಟುಕೊಂಡು ಕೆ.ಎನ್.ನಾಗೇಗೌಡರ ಸಮಗ್ರ ಚಿತ್ರಣವನ್ನು ನೀಡಲು ಪ್ರಯತ್ನಿಸಲಾಗಿದೆ. ಕೆ.ಎನ್.ನಾಗೇಗೌಡರ ಜೀವನ-ಸಾಧನೆ ಎಂಬ ಸಂಶೋಧನಾ ವಿಷಯವನ್ನು ಆಯ್ಕೆಮಾಡಿಕೊಂಡು ಸಂಶೋಧನಾ ಪ್ರಬಂಧ ರಚಿಸಲಾಗಿದೆ.

## ಅಧ್ಯಯನ ವಿಷಯದ ಮಹತ್ವ :-

ರೈತಪರ ಹೋರಾಟದ ಮೂಲಕ ಹಲವು ಜನರು ತಮ್ಮ ವ್ಯಕ್ತಿತ್ವವನ್ನು ಗುರುತಿಸಿಕೊಂಡು ರಾಜಕೀಯವಾಗಿ ತಮ್ಮ ಬದುಕನ್ನು ರೂಪಿಸಿಕೊಂಡು ಪಶುಸಂಗೋಪನೆ ಭಾರೀ ನೀರಾವರಿ ಖಾತೆಯಂತಹ ರೈತಪರ ಖಾತೆಗಳನ್ನು ನಿರ್ವಹಿಸಿ ರೈತಮುಖಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಇವರು ವಿದ್ಯಾರ್ಥಿನಾಯಕರಾಗಿ ಪ್ರೌಢಶಾಲೆಯಲ್ಲಿ ಹಿಂದಿ ಭಾಷೆ ಕಡ್ಡಾಯಗೊಳಿಸಿದ್ದರ ವಿರುದ್ಧ ಪ್ರತಿಭಟಿಸಿದ್ದರು. ಮಂಡ್ಯದ ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಸಂಘದ ಮುಖಂಡರಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿ ಪ್ರತಿನಿಧಿಯಾಗಿ, ಸಿಂಡಿಕೇಟ್ ಸದಸ್ಯನಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು. ಈ ಸಂದರ್ಭದಲ್ಲಿ ತಾಂತ್ರಿಕ ಶಿಕ್ಷಣದಲ್ಲಿ ಸೆಮಿಸ್ಟರ್ ಪದ್ಧತಿ ಜಾರಿಗೊಳಿಸುವ ಬಗ್ಗೆ ಚಳುವಳಿ ನಡೆಸಿದರು. ಇಂಜಿನಿಯರಿಂಗ್ ಹುದ್ದೆಯನ್ನು ಗೆಜೆಟೆಡ್ ಹುದ್ದೆಯೆಂದು ಪರಿಗಣಿಸಿ, ವೈದ್ಯ ವೃತ್ತಿಗೆ ಸಮಾನ ವೇತನ ದೊರಕಬೇಕೆಂದು ಹೋರಾಟ ಮಾಡಿ ಸಫಲರಾಗಿದ್ದರು. 1970ರಲ್ಲಿ ಜಪಾನಿನಲ್ಲಿ ನಡೆಯುತ್ತಿದ್ದ ಅಂತರರಾಷ್ಟ್ರೀಯ ಉತ್ಸವ ಎಕ್ಸ್ ಪೋ-70ಗೆ ಯುವಕರನ್ನು ಕಳುಹಿಸುವ ಸಂದರ್ಭ ಅವ್ಯವಹಾರ ನಡೆದಾಗ ಅದರ ವಿರುದ್ಧ ಮಂಡ್ಯ ಜಿಲ್ಲೆಯಲ್ಲಿ ನಾಯಕತ್ವ ವಹಿಸಿ ಚಳುವಳಿ ನಡೆಸಿದ್ದರು.[3]

ನಂತರ ಕಾಂಗ್ರೆಸ್ ಪಕ್ಷವನ್ನು ಸೇರಿ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಮಂಡ್ಯ ಜಿಲ್ಲಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ದುಡಿದರು. ನಂತರ 1975-1977ರಲ್ಲಿ ಮಂಡ್ಯದ ಮೈಸೂರು ಸಕ್ಕರೆ ಕಂಪನಿಯ ಅಧ್ಯಕ್ಷರಾಗಿ ರೈತರ ಕಬ್ಬಿಗೆ ಉತ್ತಮ ಬೆಲೆ ನೀಡಿದ್ದರಲ್ಲೇ ರೈತರ ಕ್ಷೇಮಾಭಿವೃದ್ಧಿ ಫಂಡಿನ 17 ಲಕ್ಷ ರೂ.ಗಳನ್ನು ರೈತರ ಅಭ್ಯುದ್ಯಯಕ್ಕಾಗಿ ಬಳಸಿದರು.[4] ಡಿ.ದೇವರಾಜುಅರಸುರವರು ಮುಖ್ಯಮಂತ್ರಿಯಾಗಿದ್ದಾಗ 1977ರಲ್ಲಿ ವರುಣಾನಾಲೆ ನಿರ್ಮಾಣವನ್ನು ಕೈಗೆತ್ತಿಕೊಂಡ ಆ ಸಂದರ್ಭದಲ್ಲಿ ಕೆ.ವಿ.ಶಂಕರಗೌಡರು ಮನವಿ ಮಾಡಿದ್ದರೂ ಕಾಮಗಾರಿಯನ್ನು ಆರಂಭಿಸಿದಾಗ "ವರುಣ ಮಂಡ್ಯ ಜಿಲ್ಲೆಗೆ ಮರಣ" ಎಂಬ ಘೋಷಣೆ ಕೂಗಿ ವರುಣಾ ನಾಲೆ ವಿರೋಧಿ ಚಳುವಳಿ ಆರಂಭಿಸಿದ್ದರು.

ಇದರಲ್ಲಿ **"ಚಡ್ಡಿಚಳುವಳಿ"** ಎಂಬ ವಿನೂತನ ಚಳುವಳಿಯಲ್ಲಿ ನಾಗೇಗೌಡರು ಮುಂಚೂಣಿಯಲ್ಲಿ ನಿಂತು ರೈತರ ಪರ ಹೋರಾಟ ನಡೆಸಿದ್ದರು.[5]

ಕೆ.ಎನ್.ನಾಗೇಗೌಡರು 1982ರ ಜೂನ್ 14 ರಂದು ವಿಧಾನಸಭೆಯಿಂದ ಎರಡು ಭಾರಿ ವಿಧಾನಪರಿಷತ್ ಸದಸ್ಯರಾಗಿದ್ದಾಗ ಎನ್.ಜಿ.ಇ.ಎಫ್. ಬ್ಲಾಟ್ಲಿಂಗ್ ರೆವೊಜಿತ್ ಹಗರಣಗಳನ್ನು ಬೆಳಕಿಗೆ ತಂದರು. ಅಲ್ಲದೆ ಶಿಕ್ಷಣ ಸುಧಾರಣೆ, ಸರ್ಕಾರಿ ಕಾರ್ಖಾನೆಗಳು, ನೀರಾವರಿ ಕ್ಷೇತ್ರ, ವಿದ್ಯುತ್ ಅಭಾವ, ರೈತಚಳುವಳಿ ಇತರ ವಿಷಯಗಳ ಬಗ್ಗೆ ಸದನ ಮತ್ತು ರಾಜ್ಯದ ಗಮನ ಸೆಳೆದರು.[6] 1992ರಲ್ಲಿ ಪಶುಸಂಗೋಪನಾ ಇಲಾಖೆಯ ಮಂತ್ರಿಯಾಗಿ ಒಂದು ವ್ಯವಸ್ಥಿತ ಇಲಾಖೆಯನ್ನಾಗಿ ರೂಪಿಸಿದ್ದರಲ್ಲದೆ ಅನೇಕ ಪಶುವೈದ್ಯ ಆಸ್ಪತ್ರೆಗಳನ್ನು ತೆರೆದಿದ್ದಾರಲ್ಲದೆ ಇದಕ್ಕೆ ಬೇಕಾದ ವೈದ್ಯರು ಹಾಗೂ ಇತರ ನೌಕರರನ್ನು ನೇಮಿಸಿದ್ದರು. ನಂತರ 1994ರಲ್ಲಿ ಜನತಾದಳ ಪಕ್ಷದಿಂದ ಕಿರುಗಾವಲು ಕ್ಷೇತ್ರದಿಂದ ಸ್ಪರ್ಧಿಸಿ ವಿಜೇತರಾಗಿ 1996ರಲ್ಲಿ ಜೆ.ಹೆಚ್.ಪಟೇಲ್ ಸರ್ಕಾರದಲ್ಲಿ ಮಧ್ಯಮ ಮತ್ತು ಭಾರಿ ನೀರಾವರಿ ಖಾತೆಗಳ ಮಂತ್ರಿಯಾಗಿ ರಾಜ್ಯ ನೀರಾವರಿ ಯೋಜನೆಗಳ ಅನುಷ್ಠಾನ ಅತಿವೇಗದಲ್ಲಿ ಕೈಗೊಂಡರು.[7] ಅಲ್ಲದೆ ವಿಶ್ವೇಶ್ವರಯ್ಯ ನಾಲೆ ಆಧುನೀಕರಣ ಕೈಗೊಂಡು ಮಂಡ್ಯ ಜಿಲ್ಲೆಯ ಎಲ್ಲಾ ಪ್ರದೇಶಗಳಿಗೆ ನೀರೊದಗುವಂತೆ ಮಾಡಿದರು. ಶಾಂತಿ ಶಿಕ್ಷಣ ಸಂಸ್ಥೆಯನ್ನು ಹಿಂದುಳಿದ ಮಳವಳ್ಳಿ ತಾಲ್ಲೂಕಿನಲ್ಲಿ ಸ್ಥಾಪಿಸಿ, ತಾಲ್ಲೂಕಿನ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ನಂತರ ಪ್ರಗತಿಪರ ಜನತಾದಳದ ರಾಜ್ಯಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. 2004 ಫೆಬ್ರವರಿ 5 ರಂದು ವಿಧಿವಶರಾದರು.

ಕೆ.ಎನ್.ನಾಗೇಗೌಡರು ವಿಧ್ಯಾರ್ಥಿನಾಯಕರಾಗಿ, ರೈತಪರ ಚಳುವಳಿಗಾರರಾಗಿ, ಶಿಕ್ಷಣ ಸಂಸ್ಥೆಯ ರೂವಾರಿಯಾಗಿ, ರಾಜಕಾರಿಣಿಯಾಗಿ, ಪಶುಸಂಗೋಪನಾ ಮತ್ತು ನೀರಾವರಿ ಸಚಿವರಾಗಿ, ನೀರಾವರಿ ತಜ್ಞರಾಗಿ ಕರ್ನಾಟಕದ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ವಿಶೇಷವಾಗಿ ಮಂಡ್ಯ ಜಿಲ್ಲೆಯಲ್ಲಿ ಹಾಗೂ ಮಳವಳ್ಳಿ ತಾಲ್ಲೂಕಿಗೆ ಹಾಗೂ ರೈತ ಸಮುದಾಯಕ್ಕೆ ಅಪಾರವಾದ ಕೊಡುಗೆ ನೀಡಿದ್ದು, ಈ ಎಲ್ಲಾ ಕಾರಣಗಳಿಂದಾಗಿ ಕೆ.ಎನ್.ನಾಗೇಗೌಡರ ಬಗ್ಗೆ ಅಧ್ಯಯನ ನಡೆಸುವುದು ಬಹಳ ಸೂಕ್ತವೆನಿಸುತ್ತದೆ.

**ಆಧಾರಗಳು**

ಕೆ.ಎನ್.ನಾಗೇಗೌಡರ ಬಗ್ಗೆ ಸಂಶೋಧನಾ ಪ್ರಬಂಧ ರಚಿಸಲು ಪ್ರಮುಖವಾಗಿ ಮೂಲ ಹಾಗೂ ಅನುಷಂಗಿಕ ಆಧಾರಗಳನ್ನೇ ಅವಲಂಬಿಸಬೇಕಾಗಿದೆ ಕೆ.ಎನ್.ನಾಗೇಗೌಡರ ಪತ್ರ ವ್ಯವಹಾರಗಳು ಅವರ ಜೀವನ ಅಧ್ಯಯನ ಸಂಬಂಧವುಳ್ಳ ಕೆಲವೇ ಕೆಲವು ದಾಖಲೆಗಳು ದೊರೆಯುತ್ತವೆ. ಶಾಸನ ಸಭೆಯ ನಡಾವಳಿ ಹಾಗೂ ಸರ್ಕಾರಿ ದಾಖಲೆಗಳೆ ಬಹುಮುಖ್ಯವಾದ ಮೂಲ ಆಧಾರಗಳಾಗಿವೆ. 1977ರ ವರುಣಾ ನಾಲಾ ವಿರೋಧಿ ಚಳುವಳಿಯಲ್ಲಿ ಕೆ.ಎನ್.ನಾಗೇಗೌಡರು ಭಾಗವಹಿಸಿದ್ದರು ತಮ್ಮ ರೈತ ಪರ ಕಾಳಜಿಯನ್ನು

ಮರೆದಿದ್ದರು, ನಾಗೇಗೌಡರು 1982 ರಿಂದ 1994 ರ ವರೆಗೆ ಎರಡು ಭಾರಿ ವಿಧಾನ ಸಭೆಯಿಂದ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದರು. ಈ ವೇಳೆಯಲ್ಲಿ ಪರಿಷತ್‌ನಲ್ಲಿ ಹಲವಾರು ಭಾರಿ ಹಲವಾರು ವಿಷಯಗಳ ಬಗ್ಗೆ ಮಾತನಾಡಿದ್ದರು. ಆಗ ವಿಧಾನ ಮಂಡಲದಲ್ಲಿ ಸಂಗ್ರಹವಾದ "Karnataka State Legislative council debates 1982-1994"[8]ಯಲ್ಲಿ ಗೌಡರ ಸುಧೀರ್ಘವಾದ ಭಾಷಣಗಳಿಂದ ರಾಜ್ಯ ರೈತರ ನೀರಾವರಿ ಯೋಜನೆಗಳು, ಸರ್ಕಾರಿ ಕಾರ್ಖಾನೆ ಮತ್ತು ಸಂಸ್ಥೆಗಳ ನಷ್ಟ, ರಾಜ್ಯದ ವಿದ್ಯುತ್ ಅಭಾವ ಮೊದಲಾದ ವಿಷಯಗಳ ಬಗ್ಗೆ ಗೌಡರಿಗಿದ್ದ ಪೂರ್ವಾಲೋಚನೆಯು ತಿಳಿದು ಬರುತ್ತದೆ. ಕೆ.ಎನ್.ನಾಗೇಗೌಡರು 1994 ರಿಂದ 1999ರ ಅವಧಿಯಲ್ಲಿ ಕಿರುಗಾವಲು ವಿಧಾನ ಸಭಾ ಕ್ಷೇತ್ರದಿಂದ ವಿಧಾನಸಭೆ ಆಯ್ಕೆಯಾದರು 1996–1999ರ ಅವಧಿಯಲ್ಲಿ ಭಾರಿ ಮತ್ತು ಮಾಧ್ಯಮ ನೀರಾವರಿ ಖಾತೆಯ ಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಅವರು ಈ ಸಂದರ್ಭದಲ್ಲಿ ವಿಧಾನಮಂಡಲದಲ್ಲಿ ನಡೆದ ಹಲವಾರು ಚರ್ಚೆಗಳ ಸಮಗ್ರ ವಿವರಣೆಯು "Karnataka State Legislative Assembly debates 1994-1999."[9] ಮೂಲಕ ತಿಳಿಯಬಹುದು. ಸರ್ಕಾರಿ ಪ್ರಕಟಣೆಯ ಜೊತೆಗೆ 1968 ರಿಂದ 2005ರವರೆಗೆ ಪಾಲ್ಗೊಂಡ ಚಳುವಳಿ ಹೋರಾಟ ಸಮಾಜ ಸುಧಾರಣೆ ಮೊದಲಾದ ಸಾಧನೆಗಳ ವಿವರಣೆಯು ರಾಜ್ಯದ ಹಲವಾರು ದೈನಂದಿನ ಪತ್ರಿಕೆಗಳ ಸುದ್ಧಿಯು ಗೌಡರ ಬಗ್ಗೆ ವಿವರಣೆ ನೀಡುತ್ತವೆ. ಕೆ.ಎನ್.ನಾಗೇಗೌಡರ ಬಗ್ಗೆ ಈ ಮೇಲ್ಕಂಡ ಮೂಲಧಾರಗಳಲ್ಲದೇ ಅವರ ಕುಟುಂಬ ಸದಸ್ಯರಾದ ಪತ್ನಿ ಎಂ.ಕೆ.ನಾಗಮಣಿ ನಾಗೇಗೌಡರು ನಾಗೇಗೌಡರ ಒಡನಾಡಿಗಳಾದ ಹೆಚ್.ತಿಮ್ಮೇಗೌಡ ಎಂ.ಹೆಚ್.ಕೆಂಪಯ್ಯ ಮೊದಲಾದವರಿಂದ ಗೌಡರ ಬಗ್ಗೆ ಮಾಹಿತಿ ಸಂಗ್ರಹಿಸಿ ಪ್ರೌಢ ಪ್ರಬಂಧ ರಚಿಸಲಾಗಿದೆ.

**ಸಂಶೋಧನಾ ವಿಧಾನ :**

ಕೆ.ಎನ್.ನಾಗೇಗೌಡರ ವ್ಯಕ್ತಿ ಚರಿತ್ರೆಯ ಸಂಶೋಧನಾ ವಿಷಯದಲ್ಲಿ ಹಲವಾರು ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ, ವಿಮರ್ಶಾತ್ಮಕ ಮತ್ತು ವಿಶ್ಲೇಷಣಾತ್ಮಕ ಮಾರ್ಗ, ಕೆ.ಎನ್. ನಾಗೇಗೌಡರಿಗೆ ಸಂಬಂಧಿಸಿದ ಪ್ರಕಟಿತ ಮತ್ತು ಅಪ್ರಕಟಿತ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ, ಅಲ್ಲದೇ ಕೆ.ಎನ್.ನಾಗೇಗೌಡರಿಗೆ ಸಂಬಂಧಿಸಿದಂತೆ ಇರುವ ಹೇಳಿಕೆಯಲ್ಲಿ ಹೊಗಳಿಕೆ ಮತ್ತು ತೆಗಳಿಕೆಗಳೆರಡನ್ನು ವಿಮರ್ಶೆಯ ಓರೆಗಲ್ಲಿಗೆ ಹಚ್ಚಿ ಸತ್ಯಾಂಶವನ್ನು ಪರಾಮರ್ಶಿಸಲಾಗಿದೆ, ಗೌಡರ ಸಮಕಾಲೀನರು ಹಾಗೂ ಅವರ ಸಮಕಾಲೀನ ಸಾಹಿತ್ಯಾಧಾರಗಳಿಂದ ಸತ್ಯಾಂಶವನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ. ಅನಂತರ ಕೆ.ಎನ್.ನಾಗೇಗೌಡರ ಜೀವನ ಸಾಧನೆಗಳನ್ನು ಕುರಿತು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಲಾಗಿದೆ. ಅಧ್ಯಯನದ ದೃಷ್ಟಿಯಿಂದ ಈ ಸಂಶೋಧನಾ ವಿಷಯಗಳನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

# ಅಧ್ಯಾಯಗಳ ವರ್ಗೀಕರಣ

**ಅಧ್ಯಾಯ : ಒಂದು–ಪೀಠಿಕೆ**

ಈ ಅಧ್ಯಾಯದಲ್ಲಿ ಕೆ.ಎನ್.ನಾಗೇಗೌಡರ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ನಂತರ ಪ್ರಸ್ತುತ ಸಂಶೋಧನಾ ವಿಷಯದ ಮಹತ್ವವನ್ನು ಚರ್ಚಿಸಿ ಗೌಡರು ಜನಪರ ಚಳುವಳಿಗಾರನಾಗಿ, ರಾಜಕಾರಣಿಯಾಗಿ, ಸಚಿವರಾಗಿ, ಶಿಕ್ಷಣಸಂಸ್ಥೆಸ್ಥಾಪಕರಾಗಿ, ನೀರಾವರಿತಜ್ಞರಾಗಿ ಗಣನೀಯ ಸಾಧನೆಗೈದು ವ್ಯಕ್ತಿ ಚರಿತ್ರೆಯ ಇತಿಹಾಸದಲ್ಲಿ ಒಂದು ಶಾಶ್ವತವಾದ ಸ್ಥಾನಗಳಿಸಿದ್ದಾರೆ. ಇಷ್ಟೆಲ್ಲಾ ಸಾಧನೆಗಳನ್ನು ಮಾಡಿದ ಕೆ.ಎನ್.ನಾಗೇಗೌಡರ ಬಗ್ಗೆ ಹಲವಾರು ಗ್ರಂಥಗಳೂ ಲಭ್ಯವಾದರೂ ಯಾವುದೊಂದು ಗ್ರಂಥವೂ ಇದುವರೆಗೂ ಅಂತರ ವ್ಯಕ್ತಿತ್ವದ ಎಲ್ಲಾ ರಂಗದ ಸಾಧನೆಯ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ನೀಡುವುದಿಲ್ಲ. ಈ ಅಧ್ಯಾಯದಲ್ಲಿ ಕೆ.ಎನ್.ನಾಗೇಗೌಡರ ಬಗ್ಗೆ ಪ್ರಕಟವಾಗಿರುವ ಹಾಗೂ ಅಪ್ರಕಟಿತ ಗ್ರಂಥಗಳ ಪರಿಚಯವನ್ನು ಮಾಡಲಾಗಿದೆ. ಈ ಪ್ರೌಢ ಪ್ರಬಂಧವನ್ನು ರಚಿಸಲು ಉಪಯೊಗಿಸಿದ ಮೂಲಾಧಾರಗಳ ಬಗ್ಗೆಯೂ ಹಾಗೂ ಈ ಪ್ರಬಂಧವನ್ನು ಸಿದ್ದಪಡಿಸಲು ಅನುಸರಿಸಿದ ಸಂಶೋಧನಾ ವಿಧಾನದ ಬಗ್ಗೆಯೂ ಚರ್ಚಿಸಲಾಗಿದೆ.

**ಅಧ್ಯಾಯ : ಎರಡು –ಕೆ.ಎನ್.ನಾಗೇಗೌಡರ ವ್ಯಕ್ತಿ ಜೀವನ**

ಎರಡನೆಯ ಅಧ್ಯಾಯದಲ್ಲಿ ಕೆ.ಎನ್.ನಾಗೇಗೌಡರ ವ್ಯಕ್ತಿ ಜೀವನದ ಸಮಗ್ರ ವಿವರಣೆಯನ್ನು ನೀಡಲಾಗಿದೆ. ಗೌಡರ ಜನನ, ಬಾಲ್ಯ, ವಿದ್ಯಾಭ್ಯಾಸ ಇಂಜಿನಿಯರಿಂಗ್ ವಿದ್ಯಾಭ್ಯಾಸ, ವಿದ್ಯಾರ್ಥಿನಾಯಕ, ವೈವಾಹಿಕ ಜೀವನ ರಾಜಕೀಯ ಕ್ಷೇತ್ರ ಪ್ರವೇಶ ಮೊದಲಾದ ಬಗ್ಗೆ ವಿವರಣೆ ನೀಡಲಾಗಿದೆ.

**ಅಧ್ಯಾಯ : ಮೂರು–ರಾಜಕಾರಣಿಯಾಗಿ ಕೆ.ಎನ್.ನಾಗೇಗೌಡರು**

ಮೂರನೇ ಅಧ್ಯಾಯದಲ್ಲಿ ಕೆ.ಎನ್.ನಾಗೇಗೌಡರು ಜನಪರ ಚಳುವಳಿಯಲ್ಲಿ ಅಂದರೆ ವರುಣಾ ನಾಲಾ ವಿರೋಧಿ (ಚಡ್ಡಿಚಳುವಳಿ) ಚಳುವಳಿಯಲ್ಲಿ ಇವರ ಸಕ್ರೀಯ ಪಾತ್ರ, ವಿಧಾನ ಪರಿಷತ್ ಸದಸ್ಯರಾಗಿ ವಿಧಾನ ಸಭಾ ಸದಸ್ಯರಾಗಿ ಇವರ ಕಾರ್ಯಗಳು, ಪಶುಸಂಗೋಪನಾ ಖಾತೆಯ ಸಚಿವರಾಗಿ ಇಲಾಖೆಯ ಉನ್ನತಿಗೆ ಹಾಕಿಕೊಂಡ ಕಾರ್ಯಕ್ರಮಗಳು, ಭಾರೀ ಮತ್ತು ಮಾಧ್ಯಮ ನೀರಾವರಿ ಖಾತೆಯ ಸಚಿವರಾಗಿ ಕರ್ನಾಟಕ ನೀರಾವರಿ ಯೋಜನೆಗಳನ್ನು ಕೈಗೊಂಡ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಲಾಗಿದೆ.

**ಅಧ್ಯಾಯ : ನಾಲ್ಕು –ಶಿಕ್ಷಣ ಕ್ಷೇತ್ರಕ್ಕೆ ಕೆ.ಎನ್.ನಾಗೇಗೌಡರ ಕೊಡುಗೆಗಳು**

ನಾಲ್ಕನೆಯ ಅಧ್ಯಾಯದಲ್ಲಿ ಮಂಡ್ಯ ಜಿಲ್ಲೆಯ ಶಿಕ್ಷಣದ ಬೆಳವಣಿಗೆಯ ಪಕ್ಷನೋಟ ಶಿಕ್ಷಣದ ಬೆಳವಣಿಗಳಲ್ಲಿ ಸಂಘ ಸಂಸ್ಥೆಗಳ ಪಾತ್ರ. ಕೆ.ಎನ್.ನಾಗೇಗೌಡರು ಶಾಂತಿ ಶಿಕ್ಷಣ ಸಂಸ್ಥೆ ಸ್ಥಾಪನೆಗಾಗಿ ನಡೆಸಿ ಹೋರಾಟ, ಬೆಳವಣಿಗೆಗೆ ಶ್ರಮಿಸಿದ ಕ್ರಮಗಳ ಬಗ್ಗೆ ವಿಮರ್ಶಿಸಲಾಗಿದೆ. ಕೆ.ಎನ್.ನಾಗೇಗೌಡ ಮತ್ತು ಶಾಂತಿ ಶಿಕ್ಷಣ ಸಂಸ್ಥೆಯ ಮೂಲಕ ಸಮಾಜ ಸೇವೆಯ ಬಗ್ಗೆ ವಿವರಣೆ ನೀಡಲಾಗಿದೆ.

**ಅಧ್ಯಾಯ : ಐದು – ಉಪ ಸಂಹಾರ**

ಈ ಅಧ್ಯಾಯದಲ್ಲಿ ಪ್ರಸ್ತುತ ಪ್ರೌಢ ಪ್ರಬಂಧದ ಫಲಿತಾಂಶದ ವಿವರಣೆಗಳನ್ನು ನೀಡಲಾಗಿದೆ ಕೆ.ಎನ್.ನಾಗೇಗೌಡರು, ವಿದ್ಯಾರ್ಥಿ ನಾಯಕರಾಗಿ, ಜನಪರ ಚಳುವಳಿಗಾರರಾಗಿ, ರಾಜಕಾರಣಿಯಾಗಿ, ನೀರಾವರಿ ತಜ್ಞರಾಗಿ, ಶಿಕ್ಷಣ ಸಂಸ್ಥೆಯ ರೂವಾರಿ ದುಡಿದು ಕೀರ್ತಿ ಗಳಿಸಿದ್ದುರ ಬಗ್ಗೆ ತಿಳಿಸಲಾಗಿದೆ.

**ಅಡಿ ಟಿಪ್ಪಣಿಗಳು**

1 ಶಿವರಾಮು ಎಸ್.–ಕೆ.ವಿ.ಶಂಕರಗೌಡ ಜೀವನ ಸಾಧನೆ ಪುಟ – 3

2 ರಾಜಶೇಖರ್ ಹೆಚ್.ಬಿ (ಸಂ) ನೇಗಿಲ ಭಾಗ್ಯ (ಸಂಚಿಕೆ) –2012, ಪುಟ–49

3 ಮುದ್ದೇಗೌಡ ಹೆಚ್.ಎಸ್ (ಪ್ರ.ಸಂ) ಛಲಗಾರ (ಕೆ.ಎನ್.ನಾಗೇಗೌಡ ಸಂಸ್ಮರಣ ಗ್ರಂಥ) ಪುಟ, 14

4 ಮುದ್ದೇಗೌಡ ಹೆಚ್.ಎಸ್, ಸಂಸದೀಯ ಪಟುಗಳ ಮಾಲಿಕೆ ಕೆ.ಎನ್.ನಾಗೇಗೌಡ ಪುಟ 20–21

5 ಶಿವರಾಮು ಎಸ್, ಪೂರ್ವೋಕ್ತ, ಪುಟ 105

6 Karnataka State Legislative council debates, 1982-1994.

7 Karnataka State Legislative Assembly, debates, 1992-1999.

8 Karnataka State Legislative council debates, 1982-1994.

9 Karnataka State Legislative Assembly debates, 1982-1994.

# ಅಧ್ಯಾಯ : ಎರಡು

# ಕೆ. ಎನ್. ನಾಗೇಗೌಡರ ವ್ಯಕ್ತಿ ಜೀವನ

## ಬಾಲ್ಯ

ಮಂಡ್ಯ ಜಿಲ್ಲೆ ಕಂಡ ವರ್ಣರಂಜಿತ ರಾಜಕಾರಣಿಗಳಲ್ಲಿ ನಾಗೇಗೌಡರು ಒಬ್ಬರು. ಗ್ರಾಮೀಣ ಸಂಸ್ಕೃತಿಯ ಹಿನ್ನೆಲೆಯಿಂದ ಬಂದು ಸಮಾಜ ಸೇವೆಯನ್ನೇ ತನ್ನ ಬದುಕಿನ ಅವಿಭಾಜ್ಯ ಅಂಗವಾಗಿ ಮಾಡಿಕೊಂಡು ದುಡಿದವರು. ಆ ಮೂಲಕ ಜಿಲ್ಲೆಯ ಜನಮಾನಸದಲ್ಲಿ ಹಚ್ಚ ಹಸಿರಾಗಿ ನಿಂತವರು, ರಾಜಕಾರಣಿಯಾಗಿ, ಶಿಕ್ಷಣ ಸಂಸ್ಥೆಗಳ ಸ್ಥಾಪಕರಾಗಿ, ನೀರಾವರಿ ತಜ್ಞರಾಗಿ ಹಾಗೂ ಸಮಾಜ ಸೇವಕರಾಗಿ ದುಡಿದು ಜಿಲ್ಲೆಯನ್ನು ಆರ್ಥಿಕವಾಗಿ, ಸಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಮುಂದೆ ತಂದವರು ಇಂತಹ ವ್ಯಕ್ತಿಯ ಜೀವನ ಮೌಲ್ಯಗಳು ನಾಗರೀಕ ಸಮಾಜಕ್ಕೆ ಮಾದರಿಯಾಗಿವೆ.

ಮಳವಳ್ಳಿಯ ಪೇಟೆ ಬೀದಿಯ ಒಕ್ಕಲಗೇರಿಯಲ್ಲಿರುವ ಕ್ಯಾತೇಗೌಡನ ದೊಡ್ಡಿಯ ಮೂಲದವರಾದ ಸಿಳ್ಳೇಕೆಂಪೇಗೌಡರಿಗೆ ನಾಲ್ವರು ಮಡದಿಯರು ಅವರಲ್ಲಿ ಮೂರನೆಯವರಾದ ಚೌಡಮ್ಮನವರಿಗೆ ನಾಲ್ವರು ಗಂಡು ಮಕ್ಕಳು, ಐದುಮಂದಿ ಹೆಣ್ಣು ಮಕ್ಕಳು, ಕೆಂಪೇಗೌಡರು ಕಂಟ್ರೋಲ್ ಸಮಯದಲ್ಲಿ ಲೆವಿ ಭತ್ತವನ್ನು ಸಂಗ್ರಹಿಸಿ ಸರ್ಕಾರದ ವಶಕ್ಕೆ ಕೊಡುತ್ತಿದ್ದ ಕಂಟ್ರಾಕ್ಟರ್ ಆಗಿದ್ದರು. ಆದ್ದರಿಂದ ಇವರಿಗೆ "ಲೆವಿ ಕೆಂಪೇಗೌಡ ಅಥವಾ ಕಂಟ್ರೋಲ್ ಕೆಂಪೇಗೌಡ" ಎಂದು ಕರೆಯುತ್ತಿದ್ದರು. ಇದೂ ಅಲ್ಲದೇ ಗೌಡರು ನೆರೆ ಹೊರೆಯ ಗ್ರಾಮಗಳಲ್ಲಿ ನ್ಯಾಯ ತೀರ್ಮಾನ ಮಾಡುತ್ತಿದ್ದ ಯಜಮಾನರು ಆಗಿದ್ದರು. ಕೆಂಪೇಗೌಡ ಚೌಡಮ್ಮ ದಂಪತಿಗಳ ಎರಡನೇ ಸುಪುತ್ರರಾದ ನಾಗೇಗೌಡರು 01 ಪೆಬ್ರವರಿ 1944 ರಂದು ಜನಿಸಿದರು. ಇವರ ಸಂಸಾರದಲ್ಲುಂಟಾದ ಹಲವು ಕೌಟುಂಬಿಕ ಭಿನ್ನಾಪ್ರಾಯಗಳಿಂದ ಕ್ಯಾತೇಗೌಡನ ದೊಡ್ಡಿ, ಮಳವಳ್ಳಿಗಳಲ್ಲಿ ಇವರ ಸಂಸಾರ ನಡೆಸಬೇಕಾಯಿತು.

## ವಿದ್ಯಾಭ್ಯಾಸ

ಅಣ್ಣ ಚೌಡೇಗೌಡ ಮತ್ತು ನಾಗೇಗೌಡ ಇಬ್ಬರು ಒಕ್ಕಲಗೇರಿಯ ಕೆಂಪೇಗೌಡರ ಮನೆಯಲ್ಲೇ ನಡೆಯುತ್ತಿದ್ದ ಪ್ರಾಥಮಿಕ ಶಾಲೆಗೆ ಸೇರಿದ್ದರು. ಇಲ್ಲಿ ಇವರಿಗೆ ಚಿಕ್ಕವೀರಯ್ಯ, ಚಿಕ್ಕಣ್ಣ ಎಂಬ ಆದರ್ಶ ಗುರುಗಳು ವಿದ್ಯಾರ್ಥಿ ನಾಗೇಗೌಡರಲ್ಲಿದ್ದ ನಾಯಕತ್ವದ ಗುಣ ಚಿಗುರೊಡೆಯಲು ಬೇಕಾದ ಸೂಕ್ತ ವಾತಾವರಣವನ್ನು ಒದಗಿಸಿದ್ದರು. ಓದು ಹಾಗೂ ಕ್ರೀಡೆಗಳೆರಡರಲ್ಲೂ ಚುರುಕು ವಿದ್ಯಾರ್ಥಿಯಾಗಿದ್ದ ನಾಗೇಗೌಡರು ಬಾಲ್ಯದಲ್ಲಿ ಹಲವು ಗ್ರಾಮೀಣ ಕ್ರೀಡೆಯಲ್ಲಿ ತೊಡಗಿದ್ದಾಗ ಒಮ್ಮೆ ಇವರಿಗೆ ಪೆಟ್ಟಾಗಿ ಕಾಲು ಶಾಶ್ವತವಾಗಿ ಊನವಾಯಿತು. ಆದ್ದರಿಂದ ಅವರನ್ನು ಜನರು "ಕುಂಟನಾಗೇಗೌಡ" ಎಂದು ಕರೆಯುತ್ತಿದ್ದರು.[1]

ಗೌಡರು ಮುಂದೆ ಮಳವಳ್ಳಿಯ ಮುನಿಸಿಪಲ್ ಪ್ರೌಢಶಾಲೆಯ ವಿದ್ಯಾರ್ಥಿಯಾಗಿ ಸೇರಿದಾಗ ಅಂತರ್ಗತವಾಗಿದ್ದ ಭವಿಷ್ಯದ ನಾಯಕ ಹೊರ ಬರಲು ಸರಿಯಾದ ಘಳಿಗೆ

ಕೂಡಿಬಂದಿತ್ತು. 1961-62 ರ ಸಾಲಿನಲ್ಲಿ ಸರ್ಕಾರಿ ಹಿಂದಿ ವಿಷಯುವನ್ನು ಕಡ್ಡಾಯಗೊಳಿಸಿದ್ದನ್ನ ತೆಗೆದು ಹಾಕಲು ಸರ್ಕಾರ ಮತ್ತು ವಿದ್ಯಾ ಮಂತ್ರಿಯವರ ವಿರುದ್ಧ ಚಳುವಳಿ ನಡೆಯುತ್ತಿದ್ದ ಕಾಲದಲ್ಲಿ ಎಸ್.ಎಸ್.ಎಲ್.ಸಿ ಓದುತ್ತಿದ್ದ ನಾಗೇಗೌಡರು ಇಡೀ ಶಾಲೆಯ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ ತರಗತಿಗಳನ್ನು ಬಹಿಷ್ಕರಿಸಿ ಮಳವಳ್ಳಿ ಪಟ್ಟಣದಲ್ಲಿ ಮೆರವಣಿಗೆ ನಡೆಸಿ, ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಿದ್ದರು. ತಾನೊಬ್ಬ ಉತ್ತಮ ಸಂಘಟಿತ ನಾಯಕ ಎಂಬುದನ್ನು 16ನೇ ವಯಸ್ಸಿನಲ್ಲೇ ತೋರಿಸಿಕೊಟ್ಟರು. ನಾಗೇಗೌಡರ ಗುರುಗಳಲ್ಲಿ ಮುಖ್ಯರಾದವರೆಂದರೆ ಎಸ್. ರಾಮಸ್ವಾಮಿ, ಎಸ್.ಎಲ್. ರಾಜೇಅರಸು, ಸಿ.ಆರ್ ಶ್ರೀಕಂಠಯ್ಯ ಹಲವು ಮಂದಿ. ಈ ಹಂತದಲ್ಲಿ ಮಗನ ಅಭ್ಯುದಯದ ಬಗ್ಗೆ ಕೆಂಪೇಗೌಡರು ಅನೇಕ ಕನಸುಗಳನ್ನು ಹೊಂದಿದ್ದರು. ಆ ವೇಳೆಗಾಗಲೇ ಕೆಂಪೇಗೌಡರು 2ನೇ ಅವಧಿಗೆ ಮಳವಳ್ಳಿ ಪುರಸಭಾ ಸದಸ್ಯರಾಗಿ ಮುಂದುವರಿದಿದ್ದರು. ಓದಿನಲ್ಲಿ ಸಾಕಷ್ಟು ಚುರುಕಾಗಿದ್ದ ನಾಗೇಗೌಡರನ್ನು ಮುಂದೇ ಓದಿಸಿ ದೊಡ್ಡ ವ್ಯಕ್ತಿಯನ್ನಾಗಿ ರೂಢಿಸಬೇಕೆಂದು ತಂದೆ ಕೆಂಪೇಗೌಡರು ಬೆಂಗಳೂರಿನ ವಿಜಯಾ ಪದವಿ ಪೂರ್ವ ಕಾಲೇಜಿಗೆ ಪಿ.ಯು.ಸಿ ವಿಜ್ಞಾನ ಶಿಕ್ಷಣಕ್ಕಾಗಿ 1963 ರಲ್ಲಿ ಸೇರಿಸಿದ್ದರು. ಬೆಂಗಳೂರಿನಲ್ಲಿ ತಮ್ಮೂರಿನವರಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಅಧಿಕಾರಿಯಾಗಿದ್ದ ಕೆಂಪಯ್ಯನವರ ಮನೆಗೆ ಸೇರಿದರು.

ಪಿ.ಯು.ಸಿ ನಂತರ ಮಂಡ್ಯದ ಪಿ.ಇ.ಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪದವಿ ಪಡೆಯಲು ನಾಗೇಗೌಡರ ಓದಿನ ಜವಾಬ್ದಾರಿಯನ್ನು ಕೆ.ವಿ ಶಂಕರಗೌಡರು ಹೊತ್ತುಕೊಳ್ಳುವುದಾಗಿ ಕೆಂಪೇಗೌಡರಿಗೆ ಭರವಸೆ ನೀಡಿದರು. ಕಾರಣ ಸ್ಥಳೀಯ ಸಂಸ್ಥೆಗಳ ಮೂಲಕ ಗೆಲುವು ಸಾಧಿಸಲು ಚುನಾವಣೆಯಲ್ಲಿ ತಮ್ಮ ಶಕ್ತಿ ಮೀರಿ ಕೆಂಪೇಗೌಡರು ಶಂಕರಗೌಡರ ಪರ ದುಡಿದಿದ್ದರು. ಮುಂದೆ ಹಲವು ರಾಜಕೀಯ ಏರಿಳಿತಗಳಿಂದಾಗಿ ನಾಗೇಗೌಡರು ಶಂಕರಗೌಡರ ರಾಜಕೀಯ ವಿರೋಧಿಯಾದದ್ದು ವಿಪರ್ಯಾಸವೇ ಸರಿ.

ಪ್ರಥಮ ವರ್ಷದ ಇಂಜಿನಿಯರಿಂಗ್ ಪರೀಕ್ಷೆ ಮುಗಿಸಿ ರಜಾ ದಿನಗಳನ್ನು ಕಳೆಯಲು ಮಳವಳ್ಳಿಗೆ ಬಂದ ಸಮಯದಲ್ಲಿ ಹೈಸ್ಕೂಲಿನ ಗುರುಗಳಾಗಿದ್ದ ಎಂ.ಕೆ. ದೇವೇಗೌಡರ ಮಾರ್ಗದರ್ಶನದಲ್ಲಿ ತಮ್ಮ ನಿಕಟವರ್ತಿಗಳಾಗಿದ್ದ ಎಂ.ಹೆಚ್. ಕೆಂಪಯ್ಯ ಕೋಟೆ ರಾಮಣ್ಣ ಇನ್ನಿತರರು "ದೇವದಾಸಿ" ನಾಟಕವನ್ನು ಕಲಿತರು, ನಾಗೇಗೌಡರು "ಹರಿದಾಸ" ಎಂಬ ಜವಾನ ಪಾತ್ರವನ್ನು ಮಾಡಿದ್ದರು. ಈ ನಾಟಕ ತಂದೆ ಕೆಂಪೇಗೌಡರು ಮಗನ ರಾಜಕೀಯ ಬೆಳವಣಿಗೆಯ ಕಡೆಗೆ ಗಮನ ಸೆಳೆಯುವಂತೆ ಮಾಡಿತು.[2] ನಾಗೇಗೌಡರು ಕಾಲೇಜಿನ ಹಾಗೂ ತಾವು ವಾಸವಿದ್ದ ಮಂಡ್ಯದ ಒಕ್ಕಲಿಗರ ಹಾಸ್ಟೆಲ್‌ನಲ್ಲಿ ಗೆಳೆಯರ ಹಲವು ಕಷ್ಟ-ಸುಖಗಳಲ್ಲಿ ಭಾಗಿಯಾಗುತ್ತಿದ್ದರು. 2ನೇ ವರ್ಷ ಇಂಜಿನಿಯರಿಂಗ್‌ಗೆ

ಪ್ರವೇಶವಾದಾಗ ಆ ವರ್ಷ ತರಗತಿಯ ಪ್ರತಿನಿಧಿಯಾಗಿ ಅವಿರೋಧವಾಗಿ ಆಯ್ಕೆಯಾಗಿ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದರು. ನಂತರದ ದಿನಗಳಲ್ಲಿ ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಆಯ್ಕೆಯಾಗಿ ವಿದ್ಯಾರ್ಥಿ ನಾಯಕರಾಗಿ ಮೆರೆದಿದ್ದಾರೆ. ಈ ಸಂದರ್ಭದಲ್ಲಿ ಪಾಠ ಪ್ರವಚನಗಳಿಗೆ ತೊಂದರೆಯಾದರೆ ಸರ್ಕಾರದವರು ಫೀ (ಶುಲ್ಕ) ಹೆಚ್ಚು ಮಾಡಿದರೆ, ಬಸ್‌ದರ ಜಾಸ್ತಿಯಾದರೆ ಚಳುವಳಿ ನಿರತವಾದಾಗ ಯಾವುದೇ ಬೆದರಿಕೆಗೆ ಜಗ್ಗದೆ ವಿದ್ಯಾರ್ಥಿಗಳು ಉದ್ದೇಶಿತ ಬೇಡಿಕೆಯನ್ನು ಈಡೇರಿಸಿಕೊಳ್ಳುತ್ತಿದ್ದರು.

ಇಂತಹ ಸಂದರ್ಭದಲ್ಲಿ ಕೆ.ಎನ್. ನಾಗೇಗೌಡರು ತಾಂತ್ರಿಕ ಶಿಕ್ಷಣದಲ್ಲಿ ಸೆಮಿಸ್ಟರ್ ಪದ್ಧತಿ ಇಲ್ಲದಿದ್ದ ಸಂದರ್ಭದಲ್ಲಿ ಬಹಳ ಶಾಂತಿಯುತ ಚಳುವಳಿಯ ಮೂಲಕ ಸೆಮಿಸ್ಟರ್ ಪದ್ಧತಿ ಜಾರಿಗೆ ಬರುವಂತೆ ಮಾಡುವಲ್ಲಿ ನಿರಂತರ ಹೋರಾಟ ಮಾಡಿ ಯಶಸ್ವಿಯಾದ್ದರು.[3] ವೈದ್ಯ ವೃತ್ತಿಯನ್ನು "ಗೆಜೆಟೆಡ್ ಹುದ್ದೆ" ಎಂದು ಎಂಜಿನಿಯರಿಂಗ್ ವೃತ್ತಿಯಲ್ಲವೆಂದು ಸರ್ಕಾರದ ಆದೇಶವಿತ್ತು. ವೈದ್ಯ ವೃತ್ತಿಯಂತೆ ಇಂಜಿನಿಯರಿಂಗ್ ವೃತ್ತಿಯು ಒಂದು ಗೌರವಾನ್ವಿತ ವೃತ್ತಿಯೆಂದು ಸರ್ಕಾರ ಪರಿಗಣಿಸಿ ವೇತನ ತಾರತಮ್ಯವನ್ನು ನೀಗಸಬೇಕೆಂದು ಮಂಡ್ಯದ ಸಿಲ್ವರ್ ಜ್ಯೂಬಿಲಿ ಪಾರ್ಕಿನಲ್ಲಿ ವಿದ್ಯಾರ್ಥಿ ಮತ್ತು ರಾಜಕೀಯ ಮುಖಂಡರನ್ನು ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡಿ ಸರ್ಕಾರದ ಗಮನ ಸೆಳೆದಿದ್ದರು.

ತಾಂತ್ರಿಕ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಲೇ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿ ವಿಭಾಗದ ಸಿಂಡಿಕೇಟ್ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಗೊಂಡು ಉಪಕುಲಪತಿ ಡಾ॥ ಶ್ರೀ ಮಾಲಿ ಹಾಗೂ ಪರೀಕ್ಷಾ ನಿಯಂತ್ರಣಾಧಿಕಾರಿ ಜೆ. ಅಲೆಕ್ಸಾಂಡರ್ ರವರ ಅವಧಿಯಲ್ಲಿ ಅತ್ಯಂತ ಸಮರ್ಥವಾಗಿ ವಿದ್ಯಾರ್ಥಿ ನಾಯಕರಾಗಿ ಪ್ರವರ್ಧಮಾನಕ್ಕೆ ಬಂದರು.[4] 1970 ರ ಅವಧಿಯಲ್ಲಿ ವೀರೇಂದ್ರ ಪಾಟೀಲ ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭ, ಈ ಸಂದರ್ಭದಲ್ಲಿ ಎಕ್ಸ್‌ಪೋ – 70 ಎಂಬ ಅಂತರರಾಷ್ಟ್ರೀಯ ಉತ್ಸವ ಜಪಾನ್‌ನಲ್ಲಿ ನಡೆಯುವುದಿತ್ತು. ಜಪಾನ್ ಭಾರತ ಸರ್ಕಾರಕ್ಕೆ ಯುವಕರನ್ನು ಅಂತರರಾಷ್ಟ್ರೀಯ ಉತ್ಸವಕ್ಕೆ ಕಳುಹಿಸಿಕೊಡಬೇಕೆಂದು ಮನವಿ ಮಾಡಿತು. ಈ ವಿಚಾರವಾಗಿ ಕರ್ನಾಟಕದಿಂದ ಯುವಕರನ್ನು ಆಯ್ಕೆ ಮಾಡುವಲ್ಲಿ ಬಹಳಷ್ಟು ಅವ್ಯವಹಾರ ನಡೆದಿತ್ತು. ಸಿಕ್ಕಿದ್ದೇ ಸಂದರ್ಭ ಎಂದು ಮಂತ್ರಿಗಳು, ಅಧಿಕಾರಿಗಳು ಮತ್ತು ಪ್ರಭಾವಿ ವ್ಯಕ್ತಿಗಳ ಮಕ್ಕಳು ಈ ಉತ್ಸವಕ್ಕೆ ಆಯ್ಕೆ ಯಾಗಿದ್ದರು. ಈ ಪಕ್ಷಪಾತ ಧೋರಣೆಯನ್ನು ಖಂಡಿಸಿ, ಕರ್ನಾಟಕ ಯುವ ಕಾಂಗ್ರೆಸ್ ರಾಜ್ಯವ್ಯಾಪಿ ಪ್ರಬಲವಾದ ಚಳುವಳಿ ನಡೆಸಿತು. ಈ ವೇಳೆಗಾಗಲೇ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದ ನಾಗೇಗೌಡರು ಮಂಡ್ಯದಲ್ಲಿ ಚಳುವಳಿ ನೇತೃತ್ವ ವಹಿಸಿದ್ದರು.[5] ಅಂದು ಮಂಡ್ಯದಲ್ಲಿ ಬಹಳ ಪರಿಣಾಮಕಾರಿಯಾಗಿ ನಡೆದ ಚಳುವಳಿಯನ್ನು ಹತ್ತಿಕ್ಕಲು ರಾಜಕೀಯ ಮುಖಂಡರಿಂದ ಇನ್ನಿಲ್ಲದ ಕಸರತ್ತುಗಳು ನಡೆದವು. ವಿದ್ಯಾರ್ಥಿ ದಿಸೆಯಲ್ಲಿಯೇ ನಾಗೇಗೌಡರು ರಾಜ್ಯದಾದ್ಯಂತ ಜನನಾಯಕರಾಗಿ ಗಮನ ಸೆಳೆದಿದ್ದರು.

## ವೈವಾಹಿಕ ಜೀವನ

ಮಳವಳ್ಳಿಯವರಾದ ಕೆಂಪಯ್ಯ ರವರು ಬೆಂಗಳೂರಿನಲ್ಲಿ ಬಿ.ಡಿ.ಎ ಅಧಿಕಾರಿಯಾಗಿದ್ದರು, ಇವರ ಮಗಳಾದ ಎಂ.ಕೆ ನಾಗಮಣಿ ಯವರನ್ನು ಕೆ.ಎನ್. ನಾಗೇಗೌಡರು 1972 ಜೂನ್ 22 ರಂದು ಮದುವೆಯಾದರು. ನಾಗಮಣಿ ರವರು ಕಷ್ಟ – ಸುಖಗಳಲ್ಲಿ ಗೌಡರಿಗೆ ಬೆನ್ನೆಲುಬಾಗಿ ನಿಂತರು. ನಾಗೇಗೌಡರು ರಾಜಕೀಯ ಚಟುವಟಿಕೆಗಳ ಬಗ್ಗೆ ನಾಗಮಣಿಯವರಿಂದಲೂ ಸಲಹೆ ಪಡೆಯುತ್ತಿದ್ದರು. ನಾಗೇಗೌಡರು ರಾಜಕೀಯದ ವಿಷಯವಾಗಿ ತಮ್ಮ ಯಾವುದೇ ಸಂಬಂಧಿಕರನ್ನು ಹತ್ತಿರ ಬಿಟ್ಟುಕೊಳ್ಳಲಿಲ್ಲ. ಆದರೆ ಮನೆಗೆ ಬಂದ ಎಲ್ಲರನ್ನು ಉಪಚರಿಸುವುದು, ಮಾತನಾಡಿಸುವುದು, ಯೋಗಕ್ಷೇಮ ವಿಚಾರಿಸುವುದನ್ನು ನಾಗಮಣಿಯವರಿಗೆ ಬಿಟ್ಟುಕೊಟ್ಟಿದ್ದಲ್ಲದೇ, ಮನೆ, ಸಂಸಾರ, ಹೊಲ–ಗದ್ದೆಗಳ ಜವಾಬ್ದಾರಿಯನ್ನು ಪತ್ನಿಗೆ ವಹಿಸಿ ತಾವು ಸಾರ್ವಜನಿಕ ಜೀವನದಲ್ಲಿ ನಿಶ್ವಾರ್ಥವಾಗಿ ತೊಡಗಿದ್ದರು.[6]

## ವೃತ್ತಿ ಜೀವನ

ವಿದ್ಯಾಭ್ಯಾಸ ಪೂರೈಸಿದ ನಂತರ ದಾವಣಗೆರೆಯಲ್ಲಿ ಇಂಜಿನಿಯರ್ ಹುದ್ದೆ ದೊರೆತರೂ ಅದನ್ನು ಬಿಟ್ಟು ಸಮಾಜಮುಖಿರಾದ ಗೌಡರ ಮನಸ್ಸು ರಾಜಕೀಯ & ಸಮಾಜ ಸೇವೆ ಕಡೆಗೆ ಹರಿದಾಡುತ್ತಿತ್ತು. ಅಲ್ಲದೇ ಗೌಡರ ರಾಜಕೀಯ ಬಯಕೆಗೆ ಅವರ ತಂದೆಯೂ ಪ್ರೋತ್ಸಾಹ ನೀಡಿದ್ದರು, ತನ್ನ ಮಗ ಒಬ್ಬ ಉತ್ತಮ ಆದರ್ಶ ರಾಜಕೀಯ ವ್ಯಕ್ತಿಯಾಗಿ ಹೆಸರು ಮಾಡಬೇಕೆಂಬುದಾಗಿ ಬಯಸುತ್ತಿದ್ದರು.

### ಅಡಿಟಿಪ್ಪಣಿಗಳು

1. ಸಂದರ್ಶನ: ಸಂಶೋಧಕನಿಂದ, ಹೆಚ್. ತಿಮ್ಮೇಗೌಡ (ನಾಗೇಗೌಡರ ಒಡನಾಡಿ) ಮಳವಳ್ಳಿ. ದಿನಾಂಕ: 05/05/2012
2. ಸಂದರ್ಶನ: ಸಂಶೋಧಕನಿಂದ, ಎಂ. ಹೆಚ್. ಕೆಂಪಯ್ಯ (ನಾಗೇಗೌಡರ ಒಡನಾಡಿ) ಮಳವಳ್ಳಿ. ದಿನಾಂಕ: 08/05/2012
3. ಪ್ರಶಾಂತಿ (ಬೆಳ್ಳಿ ಹಬ್ಬದ ಸ್ಮರಣ ಸಂಚಿಕೆ–) ಶಾಂತಿ ಕಾಲೇಜು ಮಳವಳ್ಳಿ. 1996 ಪುಟ–2
4. ಅದೇ, ಪುಟ–5
5. ಮುದ್ದೇಗೌಡ ಹೆಚ್.ಎಸ್ (ಪ್ರ.ಸಂ) ಛಲಗಾರ (ಕೆ.ಎನ್. ನಾಗೇಗೌಡ ಸಂಸ್ಮರಣಾ ಗ್ರಂಥ) ಪುಟ –14
6. ಸಂದರ್ಶನ : ಸಂಶೋಧಕನಿಂದ, ಎಂ.ಕೆ. ನಾಗಮಣಿ ನಾಗೇಗೌಡ (ನಾಗೇಗೌಡರ ಪತ್ನಿ) ದಿನಾಂಕ: 30/04/2012

## ಅಧ್ಯಾಯ : ಮೂರು

## ರಾಜಕಾರಣಿಯಾಗಿ ಕೆ.ಎನ್. ನಾಗೇಗೌಡರು

ಮಂಡ್ಯ ಜಿಲ್ಲೆಯಲ್ಲಿ ಕೃಷಿಯಷ್ಟೇ ಪ್ರಮುಖವಾದದ್ದು ರಾಜಕೀಯ ಕ್ಷೇತ್ರ ತಮ್ಮ ಒಕ್ಕಲಿನಷ್ಟೆ ರಾಜಕೀಯವನ್ನು ಸಹ ಪ್ರೀತಿಸುವ ಮಂಡ್ಯ ಜಿಲ್ಲೆಯ ಜನತೆಯು ಸ್ವತಂತ್ರ ಪೂರ್ವದಿಂದಲೂ ರಾಜಕೀಯ ಮತ್ತು ರಾಜ್ಯಾಡಳಿತದಲ್ಲಿ ತೊಡಗಿದ್ದರು ಇದಕ್ಕೆ ಸೂಕ್ತ ಉದಾಹರಣೆಗಳೆಂದರೆ ಶಿವಪುರದ ಮೈಸೂರು ಕಾಂಗ್ರೆಸ್ ಅಧಿವೇಶನ ಪ್ರಜಾಪ್ರತಿನಿಧಿ (ಎಂ.ಆರ್.ಎ) ಸಭೆಯಲ್ಲಿದ್ದ ಎಸ್.ಸಿ ಮಲ್ಲಯ್ಯ ಸಿ. ನಂಜುಂಡಸ್ವಾಮಿ ಅಸಿಸ್ಟೆಂಟ್ ಕಮಿಷನರ್ ಮಹದೇವಪ್ಪ ಮೊದಲಾದವರು ಸ್ವಾತಂತ್ರ್ಯದ ನಂತರ ಮಂಡ್ಯ ಜಿಲ್ಲೆಯ ರಾಜಕಾರಣಿಗಳು ರಾಜ್ಯವಲ್ಲದೇ ರಾಷ್ಟ್ರದಲ್ಲೂ ಹೆಸರು ಗಳಿಸಿರುವುದನ್ನು ಕಾಣಬಹುದು. ಆ ಸಾಲಿನಲ್ಲಿ ನಿಲ್ಲುವ ಜಿಲ್ಲೆಯ ರಾಜಕಾರಣಿಗಳೆಂದರೆ ಕೆ.ವಿ.ಶಂಕರಗೌಡ, ಹೆಚ್.ಕೆ.ವೀರಣ್ಣಗೌಡ, ಕೆ.ಸಿಂಗಾರಿಗೌಡ, ಸಿ.ಚಿಕ್ಕಲಿಂಗಯ್ಯ, ಜಿ.ಮಾದೇಗೌಡ, ಎಸ್.ಡಿ.ಜಯರಾಂ ಇನ್ನುಮೊದಲಾದವರು ಅಂತಹವರ ಸಾಲಿನಲ್ಲಿ ನಿಲ್ಲುವ ನಾಯಕರೆಂದರೆ ಕೆ.ಎನ್. ನಾಗೇಗೌಡರು. ಇವರು ರಾಜಕಾರಣವನ್ನು ಒಂದು ವೃತ್ತಿಯಾಗಿ ಸ್ವೀಕರಿಸಿ, ಕ್ರಿಯಾಶೀಲ ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಜನರ ಮನಸ್ಸಲ್ಲಿ ಅಚ್ಚಳಿಯದೇ ಉಳಿದಿದ್ದಾರೆ. ತಂದೆ ಕೆಂಪೇಗೌಡರು ತಮ್ಮ ಮಗ ಆದರ್ಶ ರಾಜಕಾರಣಿಯಾಗಬೇಕೆಂಬ ಇಚ್ಛೆಯಂತೆ ರಾಜಕಾರಣಕ್ಕೆ ಸೇರಿದ್ದರು.

ಅವರ ಮೊದಲ ರಾಜಕೀಯ ವೇದಿಕೆ ಎಂದರೆ ತಂದೆ ಕೆಂಪೇಗೌಡರು ಪುರಸಭಾ ಕೌನ್ಸಿಲರ್ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ತಮ್ಮ ಗೆಳೆಯರನ್ನು ಕಟ್ಟಿಕೊಂಡು ಮಳವಳ್ಳಿಯ ಬೀದಿ ಬೀದಿಗಳಲ್ಲಿ ಪ್ರಚಾರ ಮಾಡಿದರು. ಕೆಂಪೇಗೌಡರ ವಿರುದ್ಧ ಸ್ಪರ್ಧಿಸಿದ ಚಿಕ್ಕಪಂಚಯ್ಯನವರ ಮಗನು ಸಹಾ ಪ್ರಚಾರ ಮಾಡಿದ್ದನು.[1] ಈ ರೀತಿ ಕೆಂಪೇಗೌಡ ಗೆಲುವಿಗೆ ನಾಗೇಗೌಡರು ಕಾರಣರಾದರು. ನಾಗೇಗೌಡರಿಗೆ ತಂದೆ ಕೆಂಪೇಗೌಡರೆ ಪ್ರಪ್ರಥಮ ರಾಜಕೀಯ ಗುರುಗಳಾಗಿದ್ದರು. ನಂತರ ಎನ್. ಸುಬ್ಬೇಗೌಡರ ಗರಡಿಯಲ್ಲಿ ರಾಜಕೀಯ ಪಾಠ ಕಲಿತರು.[2]

ನಾಗೇಗೌಡರು ತಾಂತ್ರಿಕ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ, ರಾಜಕೀಯ ಪ್ರವೇಶಕ್ಕೆ ವೇದಿಕೆ ದೊರೆಯಿತು. 1969 ರಲ್ಲಿ ಮಂಡ್ಯ ಲೋಕಸಭಾ ಸದಸ್ಯರಾದ ಎಂ.ಕೆ. ಶಿವನಂಜಪ್ಪ ನಿಧನರಾದ ಪ್ರಯುಕ್ತ ಉಪಚುನಾವಣೆಯಲ್ಲಿ ಕೆ.ವಿ. ಶಂಕರಗೌಡ ಮತ್ತಿತರ ನಾಯಕರುಗಳು ಹೆಚ್.ಡಿ. ಚೌಡಯ್ಯನವರನ್ನು ಕಾಂಗ್ರೆಸ್ ಅಭ್ಯರ್ಥಿಯನ್ನಾಗಿ ಆಯ್ಕೆಮಾಡಿದರು. ಇವರು ತಾಲ್ಲೋಕು ಬೋರ್ಡ್ ಅಧ್ಯಕ್ಷರಾಗಿ ರಾಜ್ಯದಲ್ಲಿ ಹೆಸರು ಮಾಡಿದ್ದರು. ಇವರ ವಿರೋಧಿ ಬಣ 'ಪ್ರಜಾ ಸೋಷಿಯಲಿಸ್ಟ್ ಪಾರ್ಟಿ' ಅಭ್ಯರ್ಥಿಯಾಗಿ ಎಸ್.ಎಂ. ಕೃಷ್ಣರವರನ್ನು ಸ್ಪರ್ಧಿಸಿದರು. ವಿದೇಶದಲ್ಲಿ ವಿದ್ಯಾಭ್ಯಾಸ ಮಾಡಿ ಪ್ರಜಾಪ್ರಭುತ್ವ

ತತ್ವಕ್ಕೆ ಮನ್ನಣೆ ನೀಡಿ, ಎಸ್.ಎಂ. ಕೃಷ್ಣರ ಪರವಾಗಿ ಸಿಲ್ವರ್ ಜ್ಯೂಬಿಲಿ ಪಾರ್ಕ್ ಮಂಡ್ಯ. ಕೆ.ಎಂ. ದೊಡ್ಡಿ, ಮಳವಳ್ಳಿಯಲ್ಲಿ ನಾಗೇಗೌಡರು ಪ್ರಚಾರ ಮಾಡಿದ್ದರು. ಪ್ರಚಾರ ಮಾಡಿದ್ದರ ಫಲವಾಗಿ ನಾಗೇಗೌಡರನ್ನು ಕಾಲೇಜಿನ ವಾತಾವರಣ ಕಲುಷಿತಗೊಳಿಸುತ್ತಿದ್ದಾನೆಂದು ಕಾಲೇಜಿನಿಂದ ಸಸ್ಪೆಂಡ್ ಮಾಡಿದಾಗ ನಾಗೇಗೌಡರ ಪರ ವಿದ್ಯಾರ್ಥಿಗಳ ಮುಷ್ಕರದಿಂದ ಸಸ್ಪೆಂಡ್ ವಜಾಗೊಳಿಸಲಾಯಿತು.[3]

ನಂತರ ಎಸ್.ಎಂ. ಕೃಷ್ಣ 1,84,054 ಮತಗಳನ್ನು ಪಡೆದು ವಿಜಯಿಯಾದರೆ ಚೌಡಯ್ಯನವರು 1,20,101 ಮತಗಳಮ್ನು ಪಡೆದು ಪರಾಭವಗೊಂಡರು. ನಂತರ ಪ್ರಜಾ ಸೋಷಿಯಲಿಸ್ಟ್ ಪಕ್ಷದ ರಾಜ್ಯಾಧ್ಯಕ್ಷ ಗುರುಪಾದಸ್ವಾಮಿ ಯವರು ಮಳವಳ್ಳಿಯ ಬಿ.ಪಿ. ನಾಗರಾಜ ಮೂರ್ತಿ ಹಾಗೂ ಎಂ.ವಿ. ವೆಂಕಟಪ್ಪ ಜೊತೆ ಮಳವಳ್ಳಿಗೆ ಬಂದು ಪಕ್ಷಕ್ಕೆ ಆಹ್ವಾನಿಸಿದರು. "ನಾನು ಯಾವ ಪಕ್ಷ ಸೇರಬೇಕೆಂದು ನಿಶ್ಚಯ ಮಾಡಿಲ್ಲ ಎಂದು ನಾಗೇಗೌಡರು ಪಿ.ಎಸ್.ಪಿ ಪಕ್ಷದ ಸೇರ್ಪಡೆಗೆ ನಿರಾಕರಿಸಿದರು".

ನಾಗೇಗೌಡರು ತಂದೆಯ ಮಾರ್ಗದರ್ಶನ ಪಡೆದು ಭಾರತ ರಾಷ್ಟ್ರೀಯ ಕಾಂಗ್ರೇಸನ್ನು 4ನೇ ಲೋಕಸಭೆ ವಿಸರ್ಜನೆಯಾದ ಸಂದರ್ಭದಲ್ಲಿ ತಮ್ಮ ರಾಜಕೀಯ ಗುರು ಎಸ್.ಎಂ. ಕೃಷ್ಣ, ನೇತೃತ್ವದಲ್ಲಿ ಜೆ. ದೇವಯ್ಯ, ಎಂ.ಹೆಚ್. ಬೋರಯ್ಯರವರೊಂದಿಗೆ ರಾಷ್ಟ್ರೀಯ ಕಾಂಗ್ರೆಸ್‌ನ್ನು ಸೇರಿದರು. ಇವರನ್ನು ಮಳವಳ್ಳಿ ತಾಲ್ಲೂಕು ಘಟಕ ಸಂಚಾಲಕರನ್ನಾಗಿ ನೇಮಿಸಿದರು. ನಂತರ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ನೇಮಕವಾದರು. 1970 ರಲ್ಲಿ ಬಾಂಬೆ ಎ.ಐ.ಸಿಸಿ ಮಹಾ ಅಧಿವೇಶನಕ್ಕೆ 100 ಮಂದಿ ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ನಾಗೇಗೌಡರು ಸಹ ಭಾಗವಹಿಸಿದ್ದರು. ನಂತರ ಬೆಳಗಾವಿಯಲ್ಲಿ ನಡೆದ ಮೈಸೂರು ರಾಜ್ಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದ ಇಂದಿರಾಗಾಂಧಿಯವರ ಹಾಜರಿಯಲ್ಲಿ ಮುಂಬರುವ ವಿಧಾನಸಭೆಯ ಚುನಾವಣೆಯಲ್ಲಿ ಜಿಲ್ಲೆಗೊಂದು ಯುವ ಕಾಂಗ್ರೆಸಿಗರಿಗೆ ಟಿಕೇಟ್ ನೀಡುವ ನಿರ್ಣಯ ಕೈಗೊಂಡು, ಮಡಿಕೇರಿಯಲ್ಲಿ ಗುಂಡುರಾವ್‌ಗೆ, ಕೋಲಾರದಲ್ಲಿ ರಮೇಶ್ ಕುಮಾರ್‌ಗೆ, ಬೆಳಗಾಂ ನಲ್ಲಿ ವಿ.ಎಸ್. ಕೌಜಲಗಿ, ಬೆಂಗಳೂರಿನಲ್ಲಿ ರಘುಪತಿಗೆ, ಮಂಡ್ಯದಲ್ಲಿ ನಾಗೇಗೌಡರಿಗೆ ಟಿಕೆಟ್ ನೀಡಲಾಯಿತು.[4].

ಕಾಂಗ್ರೆಸ್ ಪಕ್ಷವು ವಿಭಜನೆಯಾದಾಗ 1972 ರಲ್ಲಿ ನಾಗೇಗೌಡರು ಇಂದಿರಾ ಕಾಂಗ್ರೆಸ್‌ನಿಂದ ಕಿರುಗಾವಲು ವಿಧಾನ ಸಭಾ ಕ್ಷೇತ್ರದಲ್ಲಿ ಸಂಸ್ಥಾನ ಕಾಂಗ್ರೆಸ್‌ನ ಜಿ. ಮಾದೇಗೌಡರ ವಿರುದ್ದ ಸೋತರು. ಜಿ. ಮಾದೇಗೌಡರು 25,319 ಮತ ಪಡೆದಿದ್ದರೆ. ಹಸು– ಕರು ಗುರುತಿನ ನಾಗೇಗೌಡರು 23,819 ಮತ ಪಡೆದು ಸೋತರು. ನಂತರ ಮಂಡ್ಯದ ಅಸಿಟೇಟ್ ಕಾರ್ಖಾನೆಗೆ ನಿರ್ದೇಶಕರು, ರಾಜ್ಯ ಕುರಿ ಚರ್ಮ & ಉಣ್ಣೆ ಅಭಿವೃದ್ದಿ ಮಂಡಳಿ ನಿರ್ದೇಶಕರಾಗಿದ್ದರು.

## ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಕೆ.ಎನ್.ನಾಗೇಗೌಡರ ಕೊಡುಗೆಗಳು

ನಾಗೇಗೌಡರು 1972 ರಲ್ಲಿ ಕಿರುಗಾವಲು ವಿಧಾನ ಸಭಾ ಕ್ಷೇತ್ರದಲ್ಲಿ ಸಂಸ್ಥಾ ಕಾಂಗ್ರೆಸ್‌ನ ಜಿ.ಮಾದೇಗೌಡರಿಗೆ ಪ್ರಬಲ ಹೋರಾಟ ಕೊಟ್ಟದ್ದು ಜಿಲ್ಲೆ ಹಾಗೂ ದೇವರಾಜ ಅರಸುರವರ ಗಮನ ಸೆಳೆದಿದ್ದರು. ಎಸ್.ಎಂ.ಕೃಷ್ಣರವರ ಶಕ್ತಿ ಸಾಮರ್ಥ್ಯ ವಿನಿಯೋಗವಾಗಲೆಂದು ದೇವರಾಜಅರಸುರವರು ಕೃಷ್ಣರವರನ್ನು ಸಂಸದ ಸ್ಥಾನಕ್ಕೆ ರಾಜೀನಾಮೆ ಕೊಡಿಸಿ ವಿಧಾನ ಪರಿಷತ್ ಸದಸ್ಯರನ್ನಾಗಿಸಿ ತಮ್ಮ ಸಂಪುಟದಲ್ಲಿ ಕೈಗಾರಿಕಾ ಮಂತ್ರಿಯನ್ನಾಗಿಸಿದರು. ಈ ಸಂದರ್ಭದಲ್ಲಿ ನಾಗೇಗೌಡರ ರಾಜಕೀಯ ಪ್ರಾಬಲ್ಯ ಮತ್ತಷ್ಟು ಹೆಚ್ಚಾಗಿ ಎಸ್.ಎಂ.ಕೃಷ್ಣರ ಪರವಾಗಿ ಅಧಿಕಾರವನ್ನು ಬಳಸಿಕೊಂಡು ಮಂಡ್ಯ ಜಿಲ್ಲೆಯ ಅಭಿವೃದ್ಧಿಯ ಕಾರ್ಯವನ್ನು ಕೈಗೊಂಡರು.

1974ರಲ್ಲಿ ಜಿಲ್ಲಾ ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆದು ಎಸ್.ಎಂ.ಲಿಂಗಪ್ಪರವರನ್ನು ಸೋಲಿಸಿ ಕೆ.ಎನ್.ನಾಗೇಗೌಡರು ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದರು. ಮಂಡ್ಯ ಜಿಲ್ಲೆಯಲ್ಲಿ ಕೆ.ವಿ.ಶಂಕರಗೌಡರ ನೇತೃತ್ವದ ಸಂಸ್ಥಾ ಕಾಂಗ್ರೆಸ್ ಬಹಳಷ್ಟು ಪ್ರಬಲವಾಗಿ ಜಿಲ್ಲೆಯ ಅಯಕಟ್ಟಿನ ಜಾಗಗಳು ಇವರ ಹಿಡಿತದಲ್ಲಿತ್ತು. ಈ ಸಂದರ್ಭದಲ್ಲಿ ನಾಗೇಗೌಡರು ಆಡಳಿತ ಕಾಂಗ್ರೆಸ್‌ಗೆ ಒಂದು ನೆಲೆ ರೂಪಿಸಲು ಹೊರಟಾಗ ಅವರದೇ ಪಕ್ಷದ ಜನರ ಸಹಕಾರ ದೊರೆಯಲಿಲ್ಲ. ದೃತಿಗೆಡದ ನಾಗೇಗೌಡರು ಸಿಕ್ಕ ಕೆಲವರು ಹಾಗೂ ಹಲವು ಯುವಕರನ್ನು ಕಟ್ಟಿಕೊಂಡು ಮಂಡ್ಯ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭದ್ರ ನೆಲಗಟ್ಟನ್ನು ರೂಪಿಸಿದ್ದರು. ಇಂತಹ ಸಂದರ್ಭದಲ್ಲಿ ನಗರಸಭೆಯ ಅಧಿಕಾರವನ್ನು ಪ್ರಥಮ ಬಾರಿಗೆ ಹರಿಜನ ಕೋಮಿನ ಕಾಂಗ್ರೆಸ್ ಪಕ್ಷದ ಎಸ್. ಹೊನ್ನಯ್ಯನವರು, ಎಂ.ಕೆ. ರಾಮಲಿಂಗೇಗೌಡರ ವಿರುದ್ಧ ಮಂಡ್ಯ ನಗರ ಸಭೆಯ ಅಧ್ಯಕ್ಷರಾಗಿ ಆಯ್ಕೆಯಾಗಲು ಕಾರಣರಾದರು.

ಸಂಜಯ್ ಗಾಂಧಿರವರು ಕರ್ನಾಟಕ ಭೇಟಿಯ ಸಂದರ್ಭದಲ್ಲಿ ನಾನು ಒಂದು ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಸಂದರ್ಶಿಸಬೇಕೆಂದಾಗ ದೇವರಾಜ ಅರಸು ಮತ್ತು ಎಸ್.ಎಂ. ಕೃಷ್ಣರವರನ್ನು ಕೇಳಿದಂತಹ ಸಂದರ್ಭದಲ್ಲಿ, ನಾಗೇಗೌಡರು ಮತ್ತು ಗೆಳೆಯರಾದ. ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಡಿ. ರಮೇಶ್‌ರಾಜು ಇತರರ ಜೊತೆ ಗೂಡಿ ಸರ್.ಎಂ. ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಒಂದೂವರೆ ಲಕ್ಷ ಮಂದಿಯನ್ನು ಸೇರಿಸಿ, ನಾಯಕರನ್ನು ಚಕಿತಗೊಳಿಸಿದರು. ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದಾಗ ಅಂದಿನ ಕೆ.ಪಿ.ಸಿ.ಸಿ ಅಧ್ಯಕ್ಷರಾದ ಕೆ.ಹೆಚ್. ಪಾಟೀಲ್ ಮಾರ್ಗದರ್ಶನದಲ್ಲಿ ಜಿಲ್ಲೆಯಾದ್ಯಂತ ಪ್ರತಿ ತಾಲ್ಲೂಕುಗಳಲ್ಲಿಯೂ ಕಾಂಗ್ರೆಸ್ ಕಾರ್ಯಕರ್ತರ ತರಬೇತಿ ಶಿಬಿರಗಳನ್ನು ನಡೆಸಿ ಪಕ್ಷ ಸಂಘಟಿಸಿದರು.[5] ಕೋಲಾರ ಜಿಲ್ಲೆಯ ಬರಪೀಡಿತ ಪ್ರದೇಶಕ್ಕೆ ಜಾನುವಾರುಗಳಿಗೆ ಮೇವನ್ನು ಲಾರಿಗಳಲ್ಲಿ

ತುಂಬಿ ಕಳುಹಿಸಿದ್ದರು. ಕಲ್ಕತ್ತಾದ ಎ.ಐ.ಸಿ.ಸಿ ಅಧಿವೇಶನದ ಸಂದರ್ಭದಲ್ಲಿ ಸ್ನೇಹಿತರೆಲ್ಲಾ ಸೇರಿ ಒಂದು ಕಾರನ್ನು [ಎಂ.ಇ.ವಿ 9494] ನಾಗೇಗೌಡರಿಗೆ ತೆಗೆದುಕೊಟ್ಟರು.[6] ನಂತರ ಇವರ ಜನಪ್ರಿಯತೆ ಕಂಡ ಮಂಡ್ಯ ಜಿಲ್ಲೆಯ ರೈತರು ಅವರನ್ನು ಮಂಡ್ಯ ಜಿಲ್ಲಾ ಕಬ್ಬಿನ ಗಾಣದ ಮಾಲೀಕರ ಸಂಘದ ಅಧ್ಯಕ್ಷರನ್ನಾಗಿ ನೇಮಿಸಿಕೊಂಡರು.

## ಮೈಸೂರು ಸಕ್ಕರೆ ಕಾರ್ಖಾನೆ ಅಧ್ಯಕ್ಷರಾಗಿ ನಾಗೇಗೌಡರ ಕಾರ್ಯಗಳು

1975 ರಲ್ಲಿ ಕೆ.ಎನ್.ನಾಗೇಗೌಡರು ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಗೆ ಅಧ್ಯಕ್ಷರಾಗಿ ನೇಮಕವಾದರು. ಕಾರ್ಖಾನೆ ಅಧ್ಯಕ್ಷರಾಗಿ ಇಲ್ಲಿಯವರೆಗೆ ಹೆಚ್ಚು ಸರ್ಕಾರಿ ಅಧಿಕಾರಿಗಳೇ ಕಾರ್ಯನಿರ್ವಹಿಸುತ್ತಿದ್ದರು. ನಾಗೇಗೌಡರು ರಚನ್ಮಾತಕ ಕಾರ್ಯಗಳ ಮೂಲಕ ಜನ ಮನ್ನಣೆಗಳಿಸಿದ್ದಾರೆ. ಆದರೆ ಕಾರ್ಖಾನೆ ಅಧ್ಯಕ್ಷ ಪದವಿ ದೊರೆಯದ ಹಾಗೂ ಕೆಲವರು ನಾಗೇಗೌಡರನ್ನು ಅನಾನುಭಾವಿ ಯುವಕ ಎಂದು ಟೀಕಿಸಿದರು. ಆದರೆ ನಾಗೇಗೌಡರು ಅವಸಾನದ ಅಂಚಿನಲ್ಲಿದ್ದ ಕಾರ್ಖಾನೆ ಮತ್ತು ರೈತರ ಹಿತ ಕಾಪಾಡಬೇಕೆಂದು ಗುರುತರ ಜವಾಬ್ದಾರಿಯನ್ನು ಅರ್ಥ ಮಾಡಿಕೊಂಡರು. ಮೊದಲು ರೈತರ ಉಳುವಿಗಾಗಿ ಒಂದು ಟನ್ ಕಬ್ಬಿಗೆ 190 ರೂ ಗಳಿಂದ ದಿಢೀರನೆ 275 ರೂಗೆ ಹೆಚ್ಚಿಸಿದರು.[7] "ರೈತ ಉಳಿಯಬೇಕು, ಕಾರ್ಖಾನೆ ಬೆಳೆಯಬೇಕೆಂದು ಹೇಳಿ" ಶೇಕಡ 45% ದರವನ್ನು ಹೆಚ್ಚು ಮಾಡಿದರು. ಇದರಿಂದ ರೈತರು ಹರ್ಷಗೊಂಡರೆ ರಾಜ್ಯದ ಇತರ ಸಹಕಾರಿ ಹಾಗೂ ಖಾಸಗಿ ಸರ್ಕಾರಿ ಕಾರ್ಖಾನೆಯ ಆಡಳಿತ ಮಂಡಳಿಯವರು ವಿರೋದಿಸಿದಾಗ ನಮ್ಮ ರೈತರು ಮತ್ತು ಕಾರ್ಮಿಕರು ಕಾರ್ಖಾನೆಯ ಆಧಾರ ಸ್ತಂಭಗಳು " ನನ್ನ ರೈತ ಬಂಧುಗಳು ಉಳಿಯಬೇಕು, ಕಾರ್ಖಾನೆ ಬೆಳೆಯಬೇಕೆಂದು ಹೇಳಿ" ಆದರೆ ರೈತರಿಗೆ ಅನ್ಯಾಯ ಮಾಡುವುದು ಸರಿಯಲ್ಲ ಎಂದು ಹೇಳಿದರು.

ಮಂಡ್ಯ ಜಿಲ್ಲೆಯು ಸಮೃದ್ಧ ನೀರಾವರಿ ಪ್ರದೇಶಗಳಿರುವುದರಿಂದ 1970 ರ ದಶಕದಲ್ಲಿ ಮಂಡ್ಯ ಜಿಲ್ಲೆಯ ಸಿರಿವಂತ ರೈತರಿಗೆ ಆಲೆಮನೆ ಮಾಡುವುದು ಹೆಮ್ಮೆಯ ಹಾಗೂ ಪ್ರತಿಷ್ಠೆಯ ಸಂಗತಿಯಾಗಿತ್ತು. ಈ ಸಂದರ್ಭದಲ್ಲಿ ರೈತರು ಆಲೆಮನೆ ಮಾಲೀಕರಿಂದ ರೈತರು ಮುಂಗಡ ಹಣ ತೆಗೆದುಕೊಂಡು ಕಾರ್ಖಾನೆಯ ಬದಲಿಗೆ ಆಲೆಮನೆಗೆ ಕಬ್ಬು ಪೂರೈಸುತ್ತಿದ್ದರು. ಕಾರ್ಖಾನೆಗೆ ಕಬ್ಬಿನ ಕೊರತೆ ಉಂಟಾದಾಗ ಈ ಸಂದರ್ಭದಲ್ಲಿ ನಾಗೇಗೌಡರು. ರೈತರನ್ನು ಸಕ್ಕರೆ ಕಾರ್ಖಾನೆ ನಿಮ್ಮದು ಇದನ್ನು ಉಳಿಸಬೇಕಾಗಿದ್ದು ನಿಮ್ಮ ಕರ್ತವ್ಯ ನೆನ್ನೆ ಮೊನ್ನೆ ಬಂದಿರೋ ಗಾಣಗಳಿಂದ ಮಂಡ್ಯ ಜೀವನಾಡಿಯಾಗಿರುವ ಸಕ್ಕರೆ ಕಾರ್ಖಾನೆ ಮುಳಗಬಾರದು ನೀವು ಕಬ್ಬನ್ನು ಸರಬರಾಜು ಮಾಡಿ ಎಂದು ಹಗಲಿರುಳು ಹಳ್ಳಿಹಳ್ಳಿಗಳಿಗೆ ಸುತ್ತಿ

ಹಳ್ಳಿಗರನ್ನು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುವಂತೆ ರೈತರ ಮನ ಹೊಲಿಸಿ ಯಶಸ್ವಿಯಾದರು. ಕಾರ್ಖಾನೆಯ ರೈತರ ಕ್ಷೇಮಭಿವೃದ್ಧಿ ಫಂಡಿನ ರೂ 17,00,000 ಲಕ್ಷಗಳನ್ನು ಶಾಲೆಗಳ ನಿರ್ಮಾಣ, ಕಾರ್ಖಾನೆಗೆ ಕಬ್ಬು ಸಾಗಿಸಲು ಕಚ್ಚಾರಸ್ತೆ ನಿರ್ಮಾಣ (ಗಾಡಿ ರಸ್ತೆ) ದೇವಸ್ಥಾನ, ಧ್ವಜಸ್ತಂಭ ನಿರ್ಮಾಣಕ್ಕಾಗಿ ಹಣ ನೀಡಿದರು. ಶಾಂತಿ ಶಿಕ್ಷಣ ಸಂಸ್ಥೆಗೆ ರೂ 1,50,000-00 ಗಳನ್ನು ಒದಗಿಸಿದರು. ಈ ಸಂದರ್ಭದಲ್ಲಿ ಭ್ರಷ್ಟಾಚಾರವಾಗಿದೆಯೆಂದು ವಿಧಾನ ಸಭಾ ಸದಸ್ಯ ಎಸ್.ಎಂ. ಲಿಂಗಪ್ಪ ವಿಧಾನಸಭೆಯಲ್ಲಿ ಚರ್ಚೆಗೆ ತಂದು ಗ್ರೋವರ್ ನೇತೃತ್ವದ ತನಿಖಾ ಸಮಿತಿ ನೇಮಕವಾಯಿತು. ಸಮಿತಿಯು ಸಮಗ್ರ ತನಿಖೆ ನಡೆಸಿ ಅಕ್ರಮ ನಡೆದಿಲ್ಲ ಎಂದು ತನಿಖೆಯಿಂದ ತಿಳಿಸಿತು. ನಂತರ ದೇವರಾಜ ಅರಸು ಜೊತೆ ವಿರಸದಿಂದ ಎಸ್.ಎಂ. ಕೃಷ್ಣರವರು ವರುಣಾ ನಾಲಾ ಸಂಬಂಧವಾಗಿ ರಾಜೀನಾಮೆ ನೀಡಿದಾಗ, ತಾವೂ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು.

## ವಿಧಾನ ಪರಿಷತ್ ಸದಸ್ಯರಾಗಿ ಕೆ.ಎನ್.ನಾಗೇಗೌಡರು

1981ರಲ್ಲಿ ಕಾಂಗ್ರೆಸ್ ಪಕ್ಷವು ನಾಗೇಗೌಡರ ಸಂಘಟನಾ ಸಾಮರ್ಥ್ಯ ಕಂಡು ವಿಧಾನ ಪರಿಷತ್‌ಗೆ ವಿಧಾನ ಸಭೆಯಿಂದ ಸದಸ್ಯರಾಗಿ 1982 ರಲ್ಲಿ ಜೂನ್ 14 ರಂದು ಆಯ್ಕೆ ಮಾಡಿತು. ನಂತರ 1988 ರಲ್ಲಿ ಪುನರ್ ಆಯ್ಕೆ ಯಾದರು. ಈ ಸಂದರ್ಭ ಸದನದಲ್ಲಿ ಹಲವು ವಿಚಾರಗಳನ್ನು ಮಾತನಾಡಿದಲ್ಲದೇ ಕೆಲವು ಹಗರಣಗಳನ್ನು ಹೊರತೆಗೆದದ್ದು ಸರ್ಕಾರಕ್ಕೆ ತಲೆನೋವಾಗಿಬಿಟ್ಟವು. ಮೊಟ್ಟ ಮೊದಲ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಕೆ.ಪಿ.ಸಿ.ಸಿ ಅಧ್ಯಕ್ಷ ಆಸ್ಕರ್ ಫರ್ನಾಂಡೀಸ್ ರವರು ಜಿ. ಮಾದೇಗೌಡರ ಗುಂಪಿಗೆ ಮನ್ನಣೆ ನೀಡಿ ಬಿ. ಫಾರಂ ನೀಡಿದಾಗ ಮಧ್ಯರಾತ್ರಿಯೇ ಆಸ್ಕರ್ ರವರ ಮನೆಗೆ ಬಂದು ಪ್ರತಿಭಟಿಸಿ ಎ.ಐ.ಸಿ.ಸಿ ಯಿಂದ ಫೋನ್ ಬಂದ ನಾಗೇಗೌಡ ಮತ್ತು ಎಸ್.ಎಂ. ಕೃಷ್ಣ ಪಟ್ಟಿಗೂ ಮಾನ್ಯತೆ ನೀಡಿದರು. [8].

1989 ರಲ್ಲಿ ವಿಧಾನ ಸಭಾ ಚುನಾವಣೆಯಲ್ಲಿ ಕಿರುಗಾವಲು ವಿಧಾನ ಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದಿಂದ ಟಿಕೇಟ್ ನಿರಾಕರಿಸಲಾಯಿತು. ನಂತರ ಇವರು ವೀರಪ್ಪಮೋಯ್ಲಿ ಸಚಿವ ಸಂಪುಟದಲ್ಲಿ 1992 ರಲ್ಲಿ ಪಶುಸಂಗೋಪನಾ ಖಾತೆಯ ಸಚಿವರಾದರು. 1994 ರಲ್ಲಿ ವಿಧಾನ ಪರಿಷತ್ ಸದಸ್ಯತ್ವ ಮುಗಿದ ತಕ್ಷಣ ರಾಜೀನಾಮೆ ನೀಡಿದರು. 1994 ರ ವಿಧಾನ ಸಭಾ ಚುನಾವಣೆಯಲ್ಲಿ ಎ.ಐ.ಸಿ.ಸಿಯ ಬಹುತೇಕ ಸದಸ್ಯರು ಕಿರುಗಾವಲು ವಿಧಾನ ಸಭಾ ಕ್ಷೇತ್ರದ ಟಿಕೇಟ್ ನೀಡುವುದರ ಪರವಾಗಿದ್ದರೂ ಸಹ ಸಾತನೂರು ಕ್ಷೇತ್ರದ ಟಿಕೇಟ್ ನೀಡಿದ್ದರಿಂದ ಬೇಸತ್ತು ಕಾಂಗ್ರೆಸ್ ಪಕ್ಷಕ್ಕೆ ರಾಜಿನಾಮೆ ನೀಡಿ. ಕಿರುಗಾವಲು ಕ್ಷೇತ್ರದಿಂದ ಜನತಾದಳ

ಪಕ್ಷದ ಟಿಕೆಟನ್ನು ಪಡೆದು ಸ್ಪರ್ಧಿಸಿ 36,348 ಮತ ಪಡೆದು ಜಯಶಾಲಿಯಾದರು. 1996 ರಲ್ಲಿ ದೇವೇಗೌಡರು ಪ್ರಧಾನ ಮಂತ್ರಿಯಾಗಲು ಸಹಾಯ ಮಾಡಿದರು. 1996 ರ ಮಂಡ್ಯ ಲೋಕಸಭಾ ಚುನಾವಣೆಯಲ್ಲಿ ಕೆ.ಆರ್. ಪೇಟೆ ಕೃಷ್ಣ ರವರ ಜನತಾದಳದ ಅಭ್ಯರ್ಥಿಯಾಗಿಸಿ, ಕಾಂಗ್ರೇಸ್‌ನ ಜಿ. ಮಾದೇಗೌಡರ ವಿರುದ್ದ ಜನತಾ ದಳದ ಅಭ್ಯರ್ಥಿ ವಿಜಯಿಯಾಗಲು ಕಾರಣಕರ್ತರಾದರು. ನಂತರ 1996 ರಲ್ಲಿ ಭಾರಿ ನೀರಾವರಿ ಖಾತೆಯ ಮಂತ್ರಿಯಾದರು. ನಂತರ 1999ರಲ್ಲಿ ಜನತಾದಳ ವಿಭಜನೆಯಾದಾಗ ಜೆ.ಹೆಚ್. ಪಟೇಲ್ ಶರತ್‌ಯಾದವ್ ಜೊತೆಗೆ ಪಂಚ ಒಕ್ಕಲಿಗರಾದ ಸಿ. ಭೈರೇಗೌಡ, ಗೋವಿಂದೇಗೌಡ, ಬಚ್ಚೇಗೌಡ, ಬಿ.ಎಲ್. ಶಂಕರ್, ನಾಗೇಗೌಡರು ಉಳಿದರು.[9]

1999 ರಲ್ಲಿ ಸಂಯುಕ್ತ ಜನತಾದಳದಿಂದ ಕಿರುಗಾವಲು ಕ್ಷೇತ್ರದಲ್ಲಿ ಸ್ಪರ್ಧಿಸಿದರು, ಕಾಂಗ್ರೆಸ್ ಡಿ.ಸಿ. ತಮ್ಮಣ್ಣ 44,523 ಮತ ಪಡೆದರೆ ಕೆ.ಎನ್. ನಾಗೇಗೌಡರು 43,799 ಮತ ಪಡೆದು ಸೋತರು. ನಂತರ ಎರಡು ಪಕ್ಷ ಹೊಂದಾಣಿಕೆ ಪ್ರತಿಪಾದಿಸಿದರು. 2002 ರಲ್ಲಿ ಜನತಾ ಪರಿವಾರದ 2ನೇ ಹಂತದ ನಾಯಕರನ್ನು ಸೇರಿಸಿ ಕರ್ನಾಟಕ ಡೆಮಾಕ್ರಟಿಕ್ ಫ್ರಂಟ್ ಪಕ್ಷ ಸ್ಥಾಪನೆಗೆ ನೀಲನಕ್ಷೆ ಸಿದ್ದಪಡಿಸಿದರು. ಸಂಯುಕ್ತ ಜನತಾ ದಳದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದರು. ನಂತರ ಸಿ. ಭೈರೇಗೌಡರ ನಿಧನದ ನಂತರ ಸಂಯುಕ್ತ ಜನತಾದಳ ಪಕ್ಷದ ರಾಜ್ಯಾಧ್ಯಕ್ಷರಾದರು. ನಂತರ 2003 ರಲ್ಲಿ "ಅಖಿಲ ಭಾರತ ಪ್ರಗತಿಪರ ಜನತಾದಳ" ರಾಜ್ಯಾಧ್ಯಕ್ಷರಾದರು. ದೆಹಲಿಯಲ್ಲಿ ಫೆಬ್ರವರಿ 5 2004 ರಂದು ಮರಣ ಹೊಂದಿದರು. ಹೀಗೆ ರಾಜಕೀಯವನ್ನೇ ಉಸಿರಾಗಿಸಿಕೊಂಡಿದ್ದ ಕೆ.ಎನ್. ನಾಗೇಗೌಡರು ಕರ್ನಾಟಕ ಕಂಡ ಒಬ್ಬ "ವರ್ಣ ರಂಜಿತ ರಾಜಕಾರಣಿ" ಯಾಗಿದ್ದರು .[10]

## ಮಂಡ್ಯ ಜಿಲ್ಲೆಯ ಜನಪರ ಚಳುವಳಿಗಳಲ್ಲಿ ನಾಗೇಗೌಡರು

ಮಂಡ್ಯ ಜಿಲ್ಲೆಯಲ್ಲಿ ಕೃಷಿ ಸಮುದಾಯವು ತಮ್ಮ ನೋವು – ನಲಿವುಗಳನ್ನು ಚಳುವಳಿಗಳ ಮೂಲಕ ವ್ಯಕ್ತಪಡಿಸುತ್ತಿತ್ತು. ಇಂತಹ ಚಳುವಳಿಯ ಮೂಲಕ ರೈತ ಸಮುದಾಯದ ಹಲವು ಜನರು ಭಾಗವಹಿಸಿ ತಮ್ಮ ಸಂಘಟನಾ ಚಾತುರ್ಯದಿಂದ ನಾಯಕತ್ವವನ್ನು ವಹಿಸಿ ಜನಪರ ಚಳುವಳಿಗಳು ಯಶಸ್ವಿಯಾಗಲು ಕಾರಣರಾಗಿದ್ದಾರೆ. ಇಂತ ಸಾಲಿನಲ್ಲಿ ಕೆ.ಎನ್. ನಾಗೇಗೌಡರು ಒಬ್ಬರು[11] 1972 ರ ನಂತರ ಅರಸರ ಮಂತ್ರಿ ಮಂಡಲದಲ್ಲಿದ್ದ ಚನ್ನಬಸಪ್ಪನವರು ರೈತರಿಗೆ ವ್ಯವಸಾಯಕ್ಕೆ ನೀರು ಕೊಟ್ಟ ನಂತರ ಭೂಮಿಯ ಮೌಲ್ಯ ಹೆಚ್ಚಾಗಿದ್ದರಿಂದ ರೈತರಿಂದ ಅಭಿವೃದ್ಧಿ ಶುಲ್ಕ (ಬೆಟರ್‌ಮೆಂಟ್ ಲೇವಿ) ಸಂಗ್ರಹ ಮಾಡಬೇಕೆಂದು ನಿಲುವು ವ್ಯಕ್ತಪಡಿಸಿದ್ದರು.

ಚನ್ನಬಸಪ್ಪ ಮಳವಳ್ಳಿಯಲ್ಲಿ ಅಧಿಕೃತ ಕಾರ್ಯಕ್ರಮಕ್ಕೆ ಬಂದಿದ್ದಾಗ ಘೇರಾವ್ ದಿಗ್ಭಂಧನ ಮಾಡಿದಾಗ ಮುಖ್ಯಮಂತ್ರಿ ದೇವರಾಜ ಅರಸು ಮಧ್ಯಪ್ರವೇಶ ಮಾಡಿ ಅಭಿವೃದ್ಧಿ ಶುಲ್ಕ ವಸೂಲಾತಿ ಮಾಡುವುದಿಲ್ಲ ಎಂಬ ಹೇಳಿಕೆ ನೀಡಿದರು. ಹೀಗೆ ನಾಗೇಗೌಡರು ತಮ್ಮ ಚಳುವಳಿಯಲ್ಲಿ ಯಶಸ್ವಿಯಾಗಲು ಕಾರಣರಾದರು.

## ವರುಣಾ ನಾಲಾ ವಿರೋಧಿ ಅಥವಾ ಚಡ್ಡಿ ಚಳುವಳಿಯಲ್ಲಿ ಕೆ.ಎನ್.ನಾಗೇಗೌಡರು

ಕೆ.ಆರ್.ಎಸ್ ನಿಂದ ಮೈಸೂರು, ನಂಜನಗೂಡು, ಹೆಚ್.ಡಿ. ಕೋಟೆ, ತಾಲ್ಲೂಕುಗಳ ಸುಮಾರು 80 ಸಾವಿರ ಎಕರೆ ಬರಪೀಡಿತ ಪ್ರದೇಶಕ್ಕೆ ಕೃಷ್ಣರಾಜಸಾಗರದ ಬಲದಂಡೆಯಲ್ಲಿ ವರುಣಾ ನಾಲೆ ನಿರ್ಮಿಸುವ ವಿಚಾರ ಬಹಳ ಕಾಲ ನೆನೆಗುದಿಗೆ ಬಿದ್ದಿತ್ತು. 1909 ರಲ್ಲಿ ಮುಖ್ಯ ಎಂಜಿನೀಯರ್ ಸರ್.ಎಂ. ವಿಶ್ವೇಶ್ವರಯ್ಯನವರು ಮೊದಲ ಹಂತದಲ್ಲಿ 80 ಅಡಿ ಎತ್ತರ, 2ನೇ ಹಂತದಲ್ಲಿ 118 ಅಡಿ ಎತ್ತರಕ್ಕೆ ಹೆಚ್ಚಿಸುವ ಉದ್ದೇಶವಿತ್ತು.[12] 1811 ರಲ್ಲಿ ಕೆ.ಆರ್.ಎಸ್ ಕಾರ್ಯಪಾಲಕ ಅಭಿಯಂತರರಾಗಿದ್ದ ಬಿ.ಸುಬ್ಬರಾವ್ ಯೋಜನೆಯ ಪೂರ್ವಭಾವಿ ವರದಿಯಲ್ಲಿ ಬಲದಂಡೆಯಲ್ಲಿ ತೂಬು ಇಡಬಹುದೆಂದು ಹೇಳಿದರು. 1924 ರಲ್ಲಿ 8 ವರ್ಷ ಸಂಧಾನದ ನಂತರ 2ನೇ ಹಂತದಲ್ಲಿ 124 ಅಡಿ ಎತ್ತರಕ್ಕೆ ಹೆಚ್ಚುಮಾಡಲಾಯಿತು.[13] 1921 ರಲ್ಲಿ ರಚಿಸಿದ ಪ್ರಾತಿನಿಧಿಕ ಸಭೆ ಸಮಿತಿಯು ವರುಣಾ ನಾಲೆಯ ತುರ್ತು ಅವಶ್ಯಕತೆ ಇಲ್ಲವೆಂದು ಹೇಳಿತ್ತು. 1953 ಏಪ್ರಿಲ್ 16 ಸ್ಟ್ಯಾಂಡಿಂಗ್ ಟೆಕ್ನಿಕಲ್ ಅಡ್ವೈಸರಿ ಕಮಿಟಿ ನೀರಾವರಿ ಉದ್ದೇಶಗಳಿಗೆ ಮತ್ತು ವ್ಯವಸಾಯಕ್ಕೆ ಬಳಸಬೇಕೆಂದು ಶಿಫಾರಸ್ಸು ಮಾಡಿತು.[14] ದೊಡ್ಡ ನೀರಾವರಿ ಯೋಜನೆಗಳ ನಿಯಂತ್ರಣ ಮಂಡಳಿ 05/08/1963 ರ ತನ್ನ ಸಭೆಯಲ್ಲಿ ಬಲದಂಡೆಯ ಮೇಲೆ ನಾಲೆಯ ಕಾರ್ಯ ಕೆಲಸ ಬರುವಂತೆ ನಿರ್ಣಯ ಕೈಗೊಂಡಿತ್ತು. 1965 & 1967 ರಲ್ಲಿ ಸಚಿವ ಎ.ಕೆ ವೀರಣ್ಣಗೌಡರು ಇದರ ವಿರುದ್ಧ ಧನಿ ಎತ್ತಿದ್ದರಿಂದ ಕಾಮಗಾರಿ ನಿಲ್ಲಿಸಲಾಯಿತು.[15] ವಿಶ್ವೇಶ್ವರಯ್ಯ ನಾಲಾ ಸಾಗುವಳಿದಾರರ ಸಮಸ್ಯೆಗಳ ಕುರಿತು ಪರಿಶೀಲಿಸಲು 04/11/1967 ರಲ್ಲಿ ಆರ್.ಎಲ್ ರಾಜ ಸಮಿತಿಯ ನಂತರ ಮುಗ್ಧಂ ಸಮಿತಿಗಳು ವಿಶ್ವೇಶ್ವರಯ್ಯ ನಾಲೆಗೆ ದಕ್ಕೆಯಾಗದಂತೆ, ಬಲದಂಡೆ (ವರುಣಾ) ನಾಲೆ ನಿರ್ಮಿಸಬಹುದು. ವಿಶ್ವೇಶ್ವರಯ್ಯ ನಾಲೆ ಪ್ರದೇಶದಲ್ಲಿ ಶಿಸ್ತು ಬದ್ದ ನೀರಾವರಿಯ ಅಗತ್ಯವನ್ನು ಒತ್ತಿ ಈ ಸಮಿತಿಗಳು ಹೇಳಿದವು.

1867 ರಲ್ಲಿ ನಿಜಲಿಂಗಪ್ಪನವರ ಕಾಲದಲ್ಲಿ ಸಚಿವ ವಿರೇಂದ್ರಪಾಟೀಲರು ವರುಣಾ ನಾಲಾ ಯೋಜನೆಗೆ ಶಂಕುಸ್ಥಾಪನೆ ಮಾಡಿದರು. 29/05/1977 ರಂದು ಮುಖ್ಯಮಂತ್ರಿಯಾದ ಡಿ. ದೇವರಾಜ ಅರಸು ರವರು ಸಚಿವ ಸಂಪುಟದ

ಸಭೆಯುಲ್ಲಿ ವರುಣಾ ನಾಲಾ ನಿರ್ಮಾಣಕ್ಕೆ ರೂ 18.5 ಕೋಟಿ ಹಣ ಮಂಜೂರಿಯೊಂದಿಗೆ ಅನುಮತಿ ನೀಡಿದರು. ಇದಕ್ಕೆ ಸಚಿವ ಎಸ್.ಎಂ. ಕೃಷ್ಣ ವಿರೋಧ ವ್ಯಕ್ತಪಡಿಸಿದ್ದರು. ಕೆ.ವಿ. ಶಂಕರಗೌಡರು ಒತ್ತಾಯವಿಟ್ಟಾಗ, ಸರ್ಕಾರ ನಿವೃತ್ತ ಚೀಫ್ ಇಂಜಿನೀಯರ್ ಎ.ಕೆ ಚಾರ್ ಅಧ್ಯಕ್ಷತೆಯಲ್ಲಿ ಬಾಳಕುಂದ್ರಿ ಮತ್ತು ಬಾಲಸುಬ್ರಮಣ್ಯಂ ರವರನ್ನು ಸದಸ್ಯರಾಗಿಸಿ 10/06/1977 ರಲ್ಲಿ ಸಮಿತಿ ರಚಿಸಿ ಸರ್ಕಾರ ಆದೇಶ ಹೊರಡಿಸಿತು.[16] ಈ ಸಮಿತಿ 11/07/1977 ರಿಂದ 14/07/1977 ರವರೆಗೆ ಮಂಡ್ಯ ಜಿಲ್ಲೆ, 27/07/1977 ರಿಂದ 30/07/1977 ರ ವರೆಗೆ ಮೈಸೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಅಭಿಪ್ರಾಯ ಸಂಗ್ರಹಿಸಿತ್ತು. ವರದಿ ತಯಾರಿಸಿ ವರುಣಾ ನಾಲಾ ನಿರ್ಮಾಣದಿಂದ ವಿಶ್ವೇಶ್ವರಯ್ಯ ನಾಲಾ ನೀರು ಸರಬರಾಜಿಗೆ ಯಾವ ರೀತಿಯ ಅಡ್ಡಿ ಬರುವುದಿಲ್ಲ. ಈ ನಾಲಾ ಪ್ರದೇಶದಲ್ಲಿ ಹಳೆಯ ಕೃಷಿ ವಿಧಾನ ನೀರಿನ ದಕ್ಷ ಹಾಗೂ ಅಗತ್ಯವಿದ್ದಷ್ಟು ಬಳಕೆಯತ್ತ ಗಮನ ಕೊಡದಿರುವುದರ ಬಗ್ಗೆ ತಿಳಿಸಲಾಯಿತು.

ಸ್ಥಳೀಯ ಪೌರವಾಣಿ ಪತ್ರಿಕೆಯು ಮಂಡ್ಯ ಜಿಲ್ಲಾ ರೈತರಲ್ಲಿ ಜಾಗೃತಿ ಮೂಡಿಸಿತು. ದಿನಾಂಕ: 05/06/1977 ರಲ್ಲಿ ಮಂಡ್ಯದ ಪ್ರವಾಸಿ ಮಂದಿರದಲ್ಲಿ ಜಿಲ್ಲೆಯ ಎಲ್ಲಾ ಪ್ರಮುಖರು ಸಭೆ ಸೇರಿ ವರುಣಾ ನಾಲಾ ವಿರುದ್ಧ ಹೋರಾಟ ಸಮಿತಿಯು ಅಸ್ತಿತ್ವಕ್ಕೆ ಬಂದಿತ್ತು. ಕೆ.ವಿ ಶಂಕರಗೌಡ ಕ್ರಿಯಾ ಸಮಿತಿ ಅಧ್ಯಕ್ಷರು, ಬಿ.ಟಿ. ಶ್ರೀನವಾಸಗೌಡರು ಪ್ರಧಾನ ಕಾರ್ಯದರ್ಶಿ, ಮಂಚೇಗೌಡರು ಮತ್ತು ಜಿ. ನಾಗಪ್ಪ ಸಂಚಾಲಕರಾಗಿ, ಎಸ್.ಡಿ. ಜಯರಾಮು, ರಮೇಶ್ ರಾಜು ಸಹ ಕಾರ್ಯದರ್ಶಿಗಳಾಗಿ ಕ್ರಿಯಾ ಸಮಿತಿಯ ಸದಸ್ಯರಾಗಿ ಕೆ.ಎನ್. ನಾಗೇಗೌಡರು ಇತರರನ್ನು ಆಯ್ಕೆ ಮಾಡಲಾಯಿತು.

ಜಿ. ಮಾದೇಗೌಡ ಅಧ್ಯಕ್ಷರು, ಬಿ.ಎಂ. ಕಾಡಯ್ಯ ಕಾರ್ಯದರ್ಶಿಯಾಗಿ ಚಳುವಳಿಯ ಉಪ ಸಮಿತಿಯನ್ನು, ಹೆಚ್.ಡಿ ಚೌಡಯ್ಯ ರವರ ಅಧ್ಯಕ್ಷತೆಯಲ್ಲಿ ಜಿ. ಸಿದ್ದೇಗೌಡರು ಕಾರ್ಯದರ್ಶಿಯಾಗಿ ಹಣಕಾಸು ಸಮಿತಿಯನ್ನು, ಎಂ. ಮಂಚೇಗೌಡರ ಸಂಚಾಲಕತ್ವದಲ್ಲಿ ನ್ಯಾಯಾಂಗ ಸಮಿತಿಯನ್ನು ರಚಿಸಲಾಯಿತು.[17] 08/06/1977 ರಲ್ಲಿ ಮಂಡ್ಯ ಬಂದ್ ನಡೆಸಲಾಯಿತು. ನಾಗೇಗೌಡರು ಈ ಚಳುವಳಿಯಲ್ಲಿ ಮುಂಚೂಣಿಯಲ್ಲಿ ನಿಂತು ಜಿಲ್ಲಾ ಮತ್ತು ತಾಲ್ಲೂಕು ಸರ್ಕಾರಿ ಕಛೇರಿಗಳ ಮುಂದೆ ಧರಣಿ ಸತ್ಯಾಗ್ರಹ ನಡೆಸಿದ್ದರು. 23/06/1977 ರಂದು ಪಂಜಿನ ಮೆರವಣಿಗೆಯನ್ನು ನಾಗೇಗೌಡರು ನಡೆಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ನಾಗೇಗೌಡರು ಪಕ್ಷ ಭೇಧ ಮರೆತು ಚಳುವಳಿಗೆ ಕರೆ ನೀಡಿದರು. ಮುಖ್ಯಮಂತ್ರಿಗೆ ಜಿಲ್ಲೆಯ ಸಂಕಷ್ಟವನ್ನು ವಿವರಿಸಿದರು.

17/06/1917 ರಂದು ಕೆ.ವಿ. ಶಂಕರಗೌಡರ ನೇತೃತ್ವದಲ್ಲಿ ವಿಧಾನಸಭೆ ಎದುರು ನಡೆದ ಮುಷ್ಕರದಲ್ಲಿ ನಾಗೇಗೌಡರು ಭಾಗವಹಿಸಿದ್ದರು. 11/07/1977 ರಂದು ಮದ್ದೂರಿನಲ್ಲಿ ಚಳುವಳಿ ನಡೆಯಿತು. 23/10/1977 ರಲ್ಲಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಮಂಡ್ಯದ ಸಿಲ್ವರ್ ಜ್ಯೂಬಿಲಿ ಪಾರ್ಕಿನಲ್ಲಿ ಆತ್ಮಶುದ್ಧಿಕರಣದ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು.[18] ರೈತರು, ರೈತಮಹಿಳೆಯರು, ವಿದ್ಯಾರ್ಥಿಗಳು ಸ್ವಇಚ್ಛೆಯಿಂದ ಭಾಗವಹಿಸುವಂತೆ ಮಾಡಿದ ನಾಗೇಗೌಡರ ನೇತೃತ್ವದಲ್ಲಿ ಬಹುದೊಡ್ಡ ಗುಂಪೇ ಉಪವಾಸ ಕುಳಿತಿತ್ತು.

24/10/1977 ರಂದು ಬೃಹತ್ ಚಳುವಳಿ ನಡೆಯಿತು. 25/10/1977 ರಲ್ಲಿ ಪ್ರತಿಭಟನೆಯು ನಡೆಯುತ್ತಿದ್ದ ಸಂದರ್ಭದಲ್ಲಿ **"ವರುಣ ಮಂಡ್ಯ ಜಿಲ್ಲೆಯ ಮರಣ"** ಎಂಬ ಘೋಷಣೆಯನ್ನು ಕೂಗಲಾಯಿತು. ಮಂಡ್ಯ ಜಿಲ್ಲಾಧಿಕಾರಿಯಾಗಿದ್ದ ಚಿರಂಜೀವಿ ಸಿಂಗ್‌ರನ್ನು ಪಂಜಾಬಿನಲ್ಲಿ ರೈತರು ಹೇಗೆ ಚಳುವಳಿ ನಡೆಸುತ್ತಾರೆ. ಎಂದು ಕೇಳಿದಾಗ ಅಲ್ಲಿ ರೈತಾಪಿ ವರ್ಚಸ್ಸನು ಎತ್ತಿ ಹಿಡಿಯುವಂತೆ ಟ್ರಾಕ್ಟರ್ ಮೇಲೆ ಕೃಷಿ ಉಪಕರಣಗಳ ಮೆರವಣಿಗೆ ನಡೆಸುತ್ತಾರೆಂದು ತಿಳಿಸಿ, ನಿಮಗೆ ವಿಶಿಷ್ಟ ಎನಿಸುವ ಮಂಡ್ಯದ್ದೇ ಆದ ವಿಧಾನದಲ್ಲಿ ಪ್ರದರ್ಶನ ನಡೆಸಬಹುದೆಂದು ಸಲಹೆ ನೀಡಿದ್ದರು. ಆಗ ಕೆ.ಎನ್. ನಾಗೇಗೌಡರು ಕಾಡಯ್ಯನವರಿಗೆ ಮಂಡ್ಯ ರೈತಾಪಿ ಜನರ ವಿಶಿಷ್ಟ ಸೊಗಡಿನ ಪಟ್ಟಾಪಟ್ಟಿ ಚಡ್ಡಿಯಲ್ಲಿ ಕಂಡು "ಚಡ್ಡಿ ಮೆರವಣಿಗೆ" ನಡೆಸಲು ನಿರ್ಧರಿಸಿ 26/10/1977 ರ ಬೆಳಿಗ್ಗೆ ಸಿಲ್ವರ್ ಜ್ಯೂಬಿಲಿ ಪಾರ್ಕಿನಲ್ಲಿ ಬೆಳಿಗ್ಗೆ 10:00 ಗಂಟೆಗೆ ಸೇರಿದ ಎಲ್ಲರೂ "ಚಡ್ಡಿ ಮೆರವಣಿಗೆಯಲ್ಲಿ" ಭಾಗವಹಿಸಿದರು. 04/11/1977 ರಲ್ಲಿ ಬೆಂಗಳೂರು ಚಲೋ ನಡೆಸಿದ ನಾಗೇಗೌಡರು ಆ ದಿನ ಬೆಂಗಳೂರಿನಲ್ಲಿ ಇಂದಿರಾಗಾಂಧಿಯವರು ಭಾಷಣ ಮಾಡುತ್ತಿದ್ದ ಸ್ಥಳಕ್ಕೆ ಧಾವಿಸಿ ನಾಗೇಗೌಡರು ಕಪ್ಪು ಬಾವುಟ ಪ್ರದರ್ಶಿಸಿದರು. 24/11/1977 ರಲ್ಲಿ ಕೆ.ವಿ ಶಂಕರಗೌಡರ ನೇತೃತ್ವದಲ್ಲಿ ನಾಗೇಗೌಡರು ಬೆಂಗಳೂರು ಚಲೋ ಕಾರ್ಯಕ್ರಮ ಹಮ್ಮಿಕೊಂಡು 90 ಕಿ.ಮೀ ದೂರದ ರಾಜಧಾನಿಗೆ ತೆರಳಿ ರಾಜ್ಯಪಾಲರಾದ ಗೋವಿಂದ ನಾರಾಯಣರಿಗೆ ಮನವಿ ಸಲ್ಲಿಸಿದರು. ನಂತರ ಡಿ. ದೇವರಾಜ ಅರಸ್, ಕೆ.ವಿ. ಶಂಕರಗೌಡರು ಮೈಸೂರು–ಮಂಡ್ಯ ಜನತೆಯ ಪರವಾಗಿ ಶಾಸನಬದ್ದ ಒಪ್ಪಂದಗಳನ್ನು ಮಾಡಿಕೊಂಡು 80 ಸಾವಿರ ಎಕರೆಗೆ 4 ಟಿ.ಎಂ.ಸಿ. ನೀರನ್ನು ವರಣಾ ನಾಲೆಗೆ ಬಿಡುವಂತೆ ಮಾಡಲಾಯಿತು.

2002 ಸೆಪ್ಟಂಬರ್ 3 ರಂದು ಸುಪ್ರಿಂ ಕೋರ್ಟ್ ಕರ್ನಾಟಕದಿಂದ ತಮಿಳುನಾಡಿಗೆ 1.25 ಟಿ.ಎಂ.ಸಿ ನೀರು ಬಿಡುವಂತೆ ಆದೇಶಿಸಿತ್ತು. ಸೆಪ್ಟಂಬರ್ ತಿಂಗಳಿನಲ್ಲಿ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯಿಂದ ಪ್ರತಿಭಟನೆ ನಡೆಸಲು ನಿರ್ಧರಿಸಿ 11/09/2002 ರ ಸರ್ವಪಕ್ಷಗಳ ಸಭೆಯಲ್ಲಿ ಭಾಗವಹಿಸಿದ್ದರು. ನಂತರ ನೀರಾವರಿ ಇಲಾಖೆಯ ಮಾಜಿ ಮಂತ್ರಿ ಹೆಚ್.ಎನ್. ನಂಜೇಗೌಡರ ಅಧ್ಯಕ್ಷತೆಯಲ್ಲಿ ಕೆ.ಎನ್. ನಾಗೇಗೌಡರ ಸಾರಥ್ಯದಲ್ಲಿ "ಕರ್ನಾಟಕ ಕೃಷ್ಣ– ಕಾವೇರಿ ಹೋರಾಟ ಸಮಿತಿ" ಅಸ್ಥಿತ್ವಕ್ಕೆ ಬಂದಿತ್ತು.[19] ಕೆ.ಎನ್.

ನಾಗೇಗೌಡ, ಭೈರೇಗೌಡ, ಮಹದೇವಸ್ವಾಮಿ. ಆರ್. ಕೃಷ್ಣ, ಎಂ.ಎಲ್. ರಮೇಶ್ ಮೊದಲಾದವರು ಈ ಸಮಿತಿಯಲ್ಲಿದ್ದರು. ಈ ಸಮಿತಿಯ ಮೂಲಕ ನಾಗೇಗೌಡರು ತಮ್ಮ ಅಪಾರ ಬೆಂಬಲಿಗರೊಂದಿಗೆ ಚಳುವಳಿಯನ್ನು ಮಂಡ್ಯದ ಸಂಜಯ್ ವೃತ್ತದಲ್ಲಿ ನಡೆಸಿದಾಗ ನಾಗೇಗೌಡರು 63 ಜನ ಹಿಂಬಾಲಕರ ಜೊತೆಯಲ್ಲಿ ಧಾರವಾಡದ ಜೈಲಿನಲ್ಲಿ 7 ದಿನಗಳ ಕಾಲ ಸೆರೆವಾಸ ಅನುಭವಿಸಿದ್ದರು. ಹೀಗೆ ನಾಗೇಗೌಡರು ಜನಪರ ಚಳುವಳಿಯಲ್ಲಿ ಭಾಗವಹಿಸಿದರು.[20]

## ಶಾಸಕರಾಗಿ ಕೆ.ಎನ್. ನಾಗೇಗೌಡರು 1982–1994,–1994–1999

ಕೆ.ಎನ್. ನಾಗೇಗೌಡರು 1970 ರಿಂದಲೂ ಕಾಂಗ್ರೆಸ್‌ನ ಸಕ್ರಿಯ ಸದಸ್ಯರಾಗಿ ಜಿಲ್ಲಾ ಯುವ ಕಾಂಗ್ರೆಸ್‌ನ ಕಾರ್ಯದರ್ಶಿಯಾಗಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಕಾಂಗ್ರೆಸ್ ಪಕ್ಷದ ಏಳಿಗೆಗಾಗಿ ಶ್ರಮಿಸಿದ್ದರ ಫಲವಾಗಿ ನಾಗೇಗೌಡರನ್ನು ಕಾಂಗ್ರೆಸ್ ಪಕ್ಷವು ಮೊದಲ ಬಾರಿಗೆ 1982 ಜೂನ್ 14 ರಂದು ವಿಧಾನ ಸಭೆಯಿಂದ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದರು. ಆಯ್ಕೆಯ ಹಿನ್ನೆಲೆಯನ್ನು ನೋಡಿದಾಗ ಕಾಂಗ್ರೆಸ್ ಪಕ್ಷದ 15 ಜಿಲ್ಲಾಧ್ಯಕ್ಷರು ಸಭೆ ಸೇರಿ ಜಿಲ್ಲಾ ಅಧ್ಯಕ್ಷರಲ್ಲಿ ಒಬ್ಬರನ್ನು ವಿಧಾನ ಪರಿಷತ್‌ಗೆ ನೇಮಕ ಮಾಡುವಂತೆ ಮನವಿ ಮಾಡಿದಾಗ ವಿಧಾನ ಪರಿಷತ್ ಸದಸ್ಯರಾಗಿ ಕೆ.ಎನ್. ನಾಗೇಗೌಡರನ್ನೇ ನೇಮಕ ಮಾಡಲಾಯಿತು.[21] ನಂತರ 1987 ರಲ್ಲಿ 2ನೇ ಬಾರಿಗೆ ವಿಧಾನ ಸಭೆಯಿಂದ ವಿಧಾನ ಪರಿಷತ್ ಸದಸ್ಯರಾಗಿ ಡಿ.ಬಿ. ಕಲ್ಮಣ್‌ಕರ್ ಮತ್ತು ಎ.ಕೆ. ಸುಬ್ಬಯ್ಯ ಜೊತೆ ಆಯ್ಕೆಯಾದರು. 1994 ರಲ್ಲಿ ಜನತಾದಳ ಅಭ್ಯರ್ಥಿಯಾಗಿ ಕಿರುಗಾವಲು ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. 1982–1994 ರವರೆಗೆ ವಿಧಾನ ಪರಿಷತ್ ಸದಸ್ಯರಾಗಿ ಹಾಗೂ 1994–1999 ರಲ್ಲಿ ವಿಧಾನಸಭೆಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದರು.

ಕೆ.ಎನ್. ನಾಗೇಗೌಡರು ರಾತ್ರಿ 1 ಗಂಟೆಯವರೆಗೆ ಮರು ದಿನ ಸದನದಲ್ಲಿ ಭಾಗವಹಿಸಲು ಸಿದ್ಧತೆ ಮತ್ತು ಓದಿನಲ್ಲಿ ತಲ್ಲೀನರಾಗುತ್ತಿದ್ದರು.[22] ಸದನದ ಕಲಾಪದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಆಧಾರಗಳಿಲ್ಲದೇ ಆರೋಪ ಮಾಡಿದವರಲ್ಲ, ಅದಕ್ಕಾಗಿ ಪತ್ತೇದಾರಿ ಕೆಲಸವನ್ನು ಮಾಡುತ್ತಿದ್ದರು. ಅಲ್ಲದೆ ಸಂಬಂಧಿಸಿದ ಪ್ರಕರಣಗಳ ಬಗ್ಗೆ ವಕೀಲರನ್ನು ಮನೆಗೆ ಕರೆಸಿ ಕಾನೂನು ಸಮಸ್ಯೆಯೊಂದನ್ನು ಚರ್ಚೆಗೆ ತಂದರೆ ಅದರಲ್ಲಿ ಸೋಲಬಾರದು ಪ್ರಸ್ತಾಪ ಮಾಡಿದ ಮೇಲೆ ಗೆದ್ದೇ ತೀರಬೇಕೆಂಬ ಹಠ ನಾಗೇಗೌಡರದು. ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಾಗ ಸಾಕ್ಷಿ ಸಮೇತ ಪ್ರತಿನಿಧಿಗಳ ಮುಂದಿರಿಸಿದಾಗ ಉತ್ತರ ನೀಡಲಾಗದೆ ಆಡಳಿತ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದರು. ಇಡೀ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಸ್ಪಂದನ ವ್ಯಂಗ್ಯ

ಮಿಶ್ರಿತ ಹಾಸ್ಯದಿಂದಾಗಿ ಉತ್ತಮ ಮಾತುಗಾರನಾಗಿ ಉತ್ತಮ ಸಂಸದೀಯ ಪಟು ಎನಿಸಿಕೊಂಡಿದ್ದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್‌ನ ಕಾಂಗ್ರೆಸ್ ಪಕ್ಷದ ಮುಖ್ಯ ಸಚೇತಕರಾಗಿ, ವಿರೋಧ ಪಕ್ಷದ ನಾಯಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

ನಾಗೇಗೌಡರು ಲಾಲ್‌ಬಾಗ್‌ನಲ್ಲಿ ವೀರಸೌಧವನ್ನು ಕಟ್ಟುವ ಬಗ್ಗೆ ವಿಧಾನ ಪರಿಷತ್ತಿನಲ್ಲಿ ದಿನಾಂಕ: 01/06/1982 ರಲ್ಲಿ ಚರ್ಚೆಯಲ್ಲಿ ಭಾಗವಹಿಸುತ್ತಾ ಲಾಲ್‌ಬಾಗ್‌ನಲ್ಲಿ ವೀರಸೌಧವನ್ನು ಕಟ್ಟುವುದರಿಂದ ಉದ್ಯಾನವನ ಉದ್ದೇಶಗಳಿಗೆ ಜಾಗದ ಕೊರತೆ ಉಂಟಾಗಿ ಕಟ್ಟಡವನ್ನು ಕಟ್ಟುವುದರಿಂದ ಉದ್ಯಾನವನದ ಸೌಂದರ್ಯಕ್ಕೆ ದಕ್ಕೆ ಉಂಟಾಗುತ್ತದೆ ಎಂದು ಹೇಳಿದರು.[23]

ಕೆ.ಎನ್‌ನಾಗೇಗೌಡರು ದೂರದರ್ಶನದಲ್ಲಿ ಕನ್ನಡ ಕಾರ್ಯಕ್ರಮಗಳ ಪ್ರಸಾರದ ಬಗ್ಗೆ ದಿನಾಂಕ: 16/06/1982 ರಲ್ಲಿ ವಿಧಾನ ಪರಿಷತ್‌ನಲ್ಲಿ ಚರ್ಚಿಸುತ್ತಾ ಕನ್ನಡ ಕಾರ್ಯಕ್ರಮಗಳು ಮದ್ರಾಸ್, ಮುಂಬೈಗಳಿಂದ ಪ್ರಸಾರವಾಗುತ್ತಿವೆ. ಮದ್ರಾಸ್‌ನಲ್ಲಿ ರೆಕಾರ್ಡ್ ಆಗಿ ಪ್ರಸಾರವಾಗುವ ಕನ್ನಡ ಕಾರ್ಯಕ್ರಮದ ಅವಧಿ ಕಡಿಮೆ ಇದೆ ಅಲ್ಲದೇ ಅಲ್ಲಿ ರೆಕಾರ್ಡ್ ಆಗಿ ಪ್ರಸಾರವಾಗುತ್ತಿರುವ

ಕಾರ್ಯಕ್ರಮದಲ್ಲಿ ಕನ್ನಡ ಪದಗಳ ಬಳಕೆಯು ಅನರ್ಥಗಳನ್ನು ನೀಡುತ್ತಿದ್ದು, ಪ್ರಸಾರವಾಗುತ್ತಿರುವ ಅವು ಅಪಹಾಸ್ಯಕ್ಕೆ ಈಡಾಗುತ್ತಿದೆ ಕನ್ನಡ ಚಲನಚಿತ್ರಗಳು ಹಾಗೂ ಗೀತೆಗಳ ಪ್ರಸಾರವನ್ನು ಹೆಚ್ಚಿಸಬೇಕೆಂದು ಹೇಳಿದರು.[24]

## ಶಿಕ್ಷಣ ಸುಧಾರಣೆಯ ಬಗ್ಗೆ ಕೆ.ಎನ್. ನಾಗೇಗೌಡರ ನಿಲುವು

ದಿನಾಂಕ: 23/06/1982 ಶಿಕ್ಷಣ ಸುಧಾರಣೆ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಂಡು ರಾಜ್ಯದಲ್ಲಿ 35% ವಿದ್ಯಾವಂತ, 65% ಅವಿದ್ಯಾವಂತರು ಇದ್ದರೆ ವಿದ್ಯಾವಂತರ ಪ್ರಮಾಣದ ಹೆಚ್ಚಳಕ್ಕೆ ಸರ್ಕಾರ ಕಾರ್ಯಕ್ರಮ ರೂಪಿಸಬೇಕೆಂದು ಹೇಳಿದರು. ಶಾಲೆಗಳಲ್ಲಿನ ಮಿಡ್ಡೆ ಮಿಲ್ಸ್ ಕಾರ್ಯಕ್ರಮಕ್ಕೆ ಹಾಗೂ ಪರಿಕರಗಳನ್ನು ತೆಗೆದುಕೊಳ್ಳುವ ಹಣಜಾಸ್ತಿ ಮಾಡಬೇಕೆಂದು ಕೋರಿದರು. ರಾಜ್ಯದ ಕಾಲೇಜುಗಳಿಗೆ ಅನುಮತಿಯನ್ನು ನೀಡುವ ಅಫಿಲಿಯೇಷನ್ ಸಮಿತಿಯು ಅನುಮತಿಯನ್ನು ನೀಡುವಾಗ ಅನುಸರಿಸುವ ನೀತಿಗಳ ಸಾಧಕ–ಬಾಧಕಗಳನ್ನು ಕುರಿತು ಚರ್ಚಿಸಿದ್ದರು. ಅಲ್ಲದೇ ರಾಜ್ಯದಲ್ಲಿ 41 ಇಂಜಿನಿಯರಿಂಗ್ ಕಾಲೇಜುಗಳಿದ್ದು, ಇದಕ್ಕಾಗಿ ತಾಂತ್ರಿಕ ವಿಶ್ವವಿದ್ಯಾನಿಲಯ ಸ್ಥಾಪಿಸಬೇಕೆಂದು ಸಲಹೆ ನೀಡಿದರು. ಇದರಂತೆ ಇಂದು ಬೆಳಗಾವಿಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಯಿತು.

### ರೈತರ ಕಬ್ಬಿನ ಬಾಕಿ ಪಾವತಿ ಹಾಗೂ ರೈತರ ಚಳುವಳಿ

ಕೆ.ಎನ್.ನಾಗೇಗೌಡರು ರೈತಾಪಿ ಸಮುದಾಯಕ್ಕೆ ತೊಂದರೆಯಾದರೆ ಸುಮ್ಮನಿರುತ್ತಿರಲಿಲ್ಲ. ಅವರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿದೆ ಬಿಡುತ್ತಿರಲಿಲ್ಲ

ರೈತರಿಗೆ ನ್ಯಾಯಯುತವಾಗಿ ಸಿಗಬೇಕಾದ ಹಕ್ಕು, ಬೆಲೆ ಸಿಗಲೇಬೇಕು ಅದಕ್ಕಾಗಿ ಯಾವ ರೀತಿಯ ಹೋರಾಟಕ್ಕೂ ಕೂಡ ಸಿದ್ಧರಿರುತ್ತಿದ್ದರು ಇದಕ್ಕೊಂದು ನಿದರ್ಶನವೆಂದರೆ ಸದನದಲ್ಲಿ, ಪ್ರಸ್ತಾಪಿಸುತ್ತಾ, ಮಂಡ್ಯ ಜಿಲ್ಲೆ ಕಾಳಮುದ್ದನದೊಡ್ಡಿಯ ಸಕ್ಕರೆ ಕಾರ್ಖಾನೆಯ ಸಂಬಂಧದಲ್ಲಿ 23.6.1982ರ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಕಬ್ಬು ಬೆಳಗಾರರಿಗೆ ಸಕ್ಕರೆ ಕಾರ್ಖಾನೆಯು ಕಬ್ಬಿನ ಹಣದ ಬಾಕಿಯನ್ನು 1981ರಿಂದ ಕೊಟ್ಟಿಲ್ಲ ಎಂದು ಹೇಳುತ್ತಾ 1981ರ ಕಬ್ಬಿನ ಸೀಸನ್‌ನಲ್ಲಿ ಬೆಲೆ ಕುಸಿದ ಕಾರಣ ಎಲ್ಲ ಕಡೆಗೂ ರೂ.218+ 6.80 ಪೈಸೆಯಷ್ಟು ಕೊಳ್ಳುವ ತೆರಿಗೆಯನ್ನು ಕೊಡಬೇಕೆಂದು ಸೂಚನೆ ನೀಡಿದ್ದರು. 01.10.1981ರ ದರ ನಂತರ ಒಪ್ಪಿಗೆ ಕಬ್ಬಿಗೆ 275 ರೂ. ಒಪ್ಪಿಗೆಯೇತರ ಕಬ್ಬಿಗೆ 216.80ರೂ.ಪೈ ಯನ್ನು ಮೈಸೂರು ಸಕ್ಕರೆ ಕಂಪನಿಯನ್ನು ನೀಡಿತ್ತು. ಇದೆ ಮಾದರಿಯನ್ನು ಅನುಸರಿಸಿ ಶ್ರೀ ಚಾಮುಂಡೇಶ್ವರಿ ಶುಗರ್ ಕಂಪನಿಯ 210+6.80 ರೂ.ಗಳನ್ನು ಕೊಟ್ಟಿತ್ತು. ರೈತರಿಗೆ ಸುಮಾರು 34.75 ಲಕ್ಷ ಬಾಕಿ ಹಣ ನೀಡಬೇಕಾಗಿದೆ. ಕಂಪನಿಯಲ್ಲಿ ವಿಪರೀತ ಸ್ಟಾಕ್ ಇದ್ದುದರಿಂದ, ಅರೆಯುವಿಕೆ ಇನ್ನೂ ನಡೆಯುತ್ತಿತ್ತು. ಹಾಗೂ ಇತರೆ ಕಾರಣಗಳಿಂದ ಬಾಕಿಯನ್ನು ಕೊಡಲಾಗಿರಲಿಲ್ಲ ಎಂದೆಲ್ಲ ವಿವರ ನೀಡಿದ್ದರು. ಅರೆಯುವಿಕೆ ನಿಲ್ಲದೆ ನಡೆಯುತ್ತಿರುವುದು ಮಾರ್ಜಿನಲ್ ಮನಿ ಒದಗದಿರುವುದು. ಲೇಟಿ ಫ್ರಿಶುಗರ್ ವಿಷಯವನ್ನೆಲ್ಲಾ ಸೇರಿಸಿ ರೈತರಿಗೆ ಹಣ ಕೊಡದೇ ಇರುವುದು ಒಂದು ರೀತಿ ಅವರಿಗೆ ಬಗೆದ ಮೋಸವಾಗಿದೆ ರೈತರೆಲ್ಲ ಕಣ್ಣೀರು ಹಾಕುತ್ತಿದ್ದು ಅವರು ಕ್ರಾಂತಿಯ ಕಿಡಿ ಹಾರುವ ಸಂದರ್ಭವಿರುವಾಗ ಸರ್ಕಾರ ಕಳಕಳಿ ತೋರಿಸದೆ ಇದ್ದರೆ ಸರಿಯಾಗದು ಇಲ್ಲದೆ ರೈತನು 100 ಟನ್ ಕಬ್ಬನ್ನು ಕಾರ್ಖಾನೆಗೆ ಕೊಟ್ಟರೆ 85 ಟನ್ ಕೊಟ್ಟಿದ್ದು ಎಂದು ಸುಳ್ಳು ಬರೆದು ತೂಕದಲ್ಲಿ ಮೋಸ ಮಾಡುತ್ತಾರೆ. ಇಂತಹ ವ್ಯವಹಾರಗಳನ್ನು ಸಿ.ಓ.ಡಿ ಯಿಂದ ತನಿಖೆ ಮಾಡಿಸಬೇಕು ರೈತರು ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿದರು.[26]

ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ಬಳಿ ರೈತರು ಉಪವಾಸ ಸತ್ಯಾಗ್ರಹ ಮಾಡುತ್ತಿರುವ ಬಗ್ಗೆ ಗಮನ ಸೆಳೆದ ಕೆ.ಎನ್.ನಾಗೇಗೌಡರು 1982ರ ಜುಲೈ ತಿಂಗಳಿನಲ್ಲಿ ಮಂಡ್ಯ ಜಿಲ್ಲೆಯ ಕರ್ನಾಟಕ ರಾಜ್ಯ ರೈತರ ಸಂಘವು ಒಪ್ಪಿಗೆ ಮತ್ತು ಒಪ್ಪಿಗೆಯೇತರ ಕಬ್ಬಿಗೆ ಏಕ ಬೆಲೆಯನ್ನು ನಿಗಧಿಗೊಳಿಸಬೇಕೆಂದು ಒತ್ತಾಯ ವಿಟ್ಟಾಗ ಚಾಮುಂಟೇಶ್ವರಿ ಶುಗರ್‌ನ ವ್ಯವಸ್ಥಾಪಕರು ರೈತರಿಗೆ ಸಮಾಧಾನಕರವಾಗಿ ನಡೆದುಕೊಳ್ಳಲಿಲ್ಲ. ಹೀಗಾಗಿ 18.10.1982 ರಂದು ಕೆ.ಎಂ.ದೊಡ್ಡಿಯ ಕಂಪನಿಯ ಕಛೇರಿಯ ಮುಂದೆ ಧರಣಿ ಮುಷ್ಕರವನ್ನು ಕರ್ನಾಟಕ ರಾಜ್ಯ ರೈತಸಂಘದ

ಪ್ರತಿನಿಧಿಗಳು ಆರಂಭಿಸಿ ರಸ್ತೆ ರೋಕೋ ಚಳುವಳಿಯು ಉಗ್ರವಾಗಿ ರೈತರಿಗೆ ಕೊಡಬೇಕಾದ ದರದಲ್ಲಿ ಹಣವನ್ನು ಕೊಟ್ಟಿಲ್ಲದಿರುವುದರಿಂದ ರೈತರು ರೊಚ್ಚಿಗೆದ್ದಿದ್ದಾರೆ. ಗೆಜ್ಜಲಗೆರೆ 2 ಸಾವು ಮಳವಳ್ಳಿಯಲ್ಲಿ 5 ಸಾವು ಆಗಿದೆ ಹೀಗಾದರೆ ಚಾಮುಂಡೇಶ್ವರಿ ಸಕ್ಕರೆ ಕಂಪನಿಯನ್ನು ಸರ್ಕಾರವೇ ವಹಿಸಿಕೊಂಡು ಸಮಸ್ಯೆ ಪರಿಹರಿಸಲಿ ಎಂದರು.[27]

ರಾಜ್ಯದಲ್ಲಿ ರಾಜ್ಯ ರೈತ ಸಂಘವು ರೈಲು & ರಸ್ತೆ ರೋಕೋ ಚಳುವಳಿಯನ್ನು ನಡೆಸುತ್ತಿರುವ ಪರಿಣಾಮಗಳ ಬಗ್ಗೆ ಸದನದಲ್ಲಿ ಚರ್ಚಿಸುತ್ತಾ ಕರ್ನಾಟಕ ರಾಜ್ಯ ರೈತ ಸಂಘದವರು 26.01.1984ನೇ ತಾರೀಖು ರಸ್ತೆ ಮತ್ತು ರೈಲು ಸಂಚಾರವನ್ನು ತಡೆವ ಚಳುವಳಿ ಹಮ್ಮಿಕೊಂಡಿದ್ದರು. ಸರ್ಕಾರದ ಗಮನ ಸೆಳೆಯಲು ಸಾರ್ವಜನಿಕರ ಗಮನ ಸೆಳೆಯಲು ಕಾರ್ಯಕ್ರಮ ಮಾಡಿದ್ದಾರೆ. ಈ ಚಳುವಳಿ ನಡೆಯುವುದಕ್ಕೆ ಯಾರು ಕಾರಣ ಕರ್ತರು? ಜೈಲಿನಲ್ಲಿ ಸ್ಥಳ ಇರುವುದು 7500 ಜನರಿಗೆ ಮಾತ್ರ ಆದರೆ 10,15 ಸಾವಿರ ಜನರನ್ನು ತುಂಬಲಾಗಿದೆ ಸುಮಾರು 30 ಸಾವಿರ ರೈತರ ಬಂಧನವಾಗಿದೆ. ಅವರನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. 60–70 ಕೋಟಿ ರೂ ರೈತರಿಗೆ ಸೇರಬೇಕಾಗಿದೆ. ಎಂದಿರುವ ಸರ್ಕಾರ ಎಷ್ಟು ಕೊಟ್ಟಿದೆ ಎಂಬ ಬಗ್ಗೆ ಯೋಚಿಸಬೇಕು ರೈತರು ಧರಣಿ ಮಾಡಿದಾಗ ಸರ್ಕಾರ ತಕ್ಕಂತೆ ನಡೆದುಕೊಂಡಿಲ್ಲ ಎಂದು ಸದನದ ಗಮನ ಸೆಳೆದರು.[28]

## ರಾಜ್ಯದ ವಿದ್ಯುತ್ ಅಭಾವವನ್ನು ಕುರಿತು ಕೆ.ಎನ್. ನಾಗೇಗೌಡರ ನಿಲುವು

ರಾಜ್ಯದಲ್ಲಿನ ವಿದ್ಯುತ್ ಅಭಾವದಿಂದ ಆದ ತೊಂದರೆ ಹಾಗೂ ನಷ್ಟದ ಬಗ್ಗೆ ವಿಧಾನ ಪರಿಷತ್ತಿನಲ್ಲಿ ದಿನಾಂಕ : 25.03.1983 ರಂದು ಮಾತನ್ನಾಡಿ ಗಮನ ಸೆಳೆದು, ರಾಜ್ಯದಲ್ಲಿನ ಕೈಗಾರಿಕಾ ಬೆಳವಣಿಗೆ ಕುಂಠಿತಗೊಂಡಿದೆ ವಿದ್ಯುತ್‌ಶ್ಚಕ್ತಿ ಅಭಾವದಿಂದ ಸುಮಾರು 650 ಕೋಟಿ ಕೈಗಾರಿಕಾ ಉತ್ಪನ್ನವು ನಷ್ಟವಾಗಿದೆ. ಇದರಿಂದ ರಾಜ್ಯದ ಆದಾಯಕ್ಕೆ ಬರಬೇಕಾದ ಇನ್‌ಕಮ್‌ಟ್ಯಾಕ್ಸ್, ಸೇಲ್ಸ್‌ಟ್ಯಾಕ್ಸ್, ಎಕ್ಸೈಸ್ ಡ್ಯೂಟಿಗಳ ನಷ್ಟ ಉಂಟಾಗಿದೆ. ಅಲ್ಲದೇ ನೀರಾವರಿ ಪಂಪ್‌ಸೆಟ್‌ಗಳಿಗೆ ಗುಣಮಟ್ಟದ ವಿದ್ಯುತ್ ದೊರಕದೇ ಕೃಷಿ ಕಾರ್ಯ ಚಟುವಟಿಕೆಗಳಿಗೆ ತೊಂದರೆ ಉಂಟಾಗಿ ಕರ್ನಾಟಕದಲ್ಲಿ ಉದ್ಯೋಗಗಳು ಸ್ಥಗಿತಗೊಂಡಿರುವುದನ್ನು ನೋಡಬಹುದು ಎಂದು ಸರ್ಕಾರದ ಹಾಗೂ ವಿಧಾನ ಪರಿಷತ್‌ನಲ್ಲಿ ಗಮನ ಸೆಳೆದರು. ಅಲ್ಲದೇ ಹೊಗೇನಕಲ್ ಮತ್ತು ಮೇಕೆದಾಟು ಯೋಜನೆಗಳ ಬಗ್ಗೆ ಪ್ರಸ್ತಾವನೆ ಮಾಡಿದರು. [26]

ಕರ್ನಾಟಕ ರಾಜ್ಯ ಹಣಕಾಸು ನಿಗಮದ (ಕೆ.ಎಸ್.ಎಫ್.ಸಿ) ಲಾಭ ನಷ್ಟ ಹಾಗೂ ಪ್ರಯೋಜನದ ಬಗ್ಗೆ ಕುರಿತು ಕೆ.ಎನ್.ನಾಗೇಗೌಡರು ದಿನಾಂಕ: 19/03/1984 ರಂದು ವಿಧಾನ ಪರಿಷತ್‌ನಲ್ಲಿ ಪ್ರಸ್ತಾಪಿಸಿ ಕೆ.ಎಸ್.ಎಫ್.ಸಿ ಸಂಸ್ಥೆಯ ಬಗ್ಗೆ

ನೀಡಿರುವ ವರದಿ ಬಗ್ಗೆ ಚರ್ಚಿಸುತ್ತಾ ಈ ಸಂಸ್ಥೆಗೆ ಇರುವ ಲೆಕ್ಕಪರಿಶೋಧಕರು ಲೆಕ್ಕಗಳನ್ನು ಸಂಯೋಜಿಸುವುದರಲ್ಲಿ ಹಾಗೂ ಸಂಸ್ಥೆ ಮತ್ತು ಸರ್ಕಾರಗಳಿಗೆ ಮೋಸ ಮಾಡುವುದರಲ್ಲಿ ನಿಸ್ಸೀಮರು. ಈ ಸಂಸ್ಥೆಯಲ್ಲಿ 500 ಮಂದಿ ನೌಕರರಿದ್ದು, ರೂ 63.50 ಲಕ್ಷ ಸಂಬಳ 17 ಲಕ್ಷ ರೂಪಾಯಿ ಟಿ.ಎ ಡಿ.ಎ ಎಂದು ಖರ್ಚುಮಾಡಿದ್ದಾರೆ. ಈ ಸಂಸ್ಥೆಯಿಂದ ಅಧಿಕಾರಿಶಾಹಿಗಳು ದುಂದುವೆಚ್ಚ ಮಾಡುತ್ತಿರುವುದಲ್ಲದೇ ಭ್ರಷ್ಟಾಚಾರವನ್ನೂ ಸಹ ಮಾಡುತ್ತಿದ್ದಾರೆ. 5 ಪ್ರಾದೇಶಿಕ ಕಛೇರಿಗಳು, 6 ಶಾಖಾ ಕಛೇರಿಯನ್ನು ಹೊಂದಿರುವ ಸಂಸ್ಥೆಯಲ್ಲಿ ಈ ಕಛೇರಿ ಮತ್ತು ಶಾಖಾ ಕಛೇರಿಗಳು 2 ಲಕ್ಷರೂ ವರೆಗೆ ಸಾಲವನ್ನು ನೀಡುತ್ತವೆ. 2 ಲಕ್ಷಕ್ಕಿಂತ ಹೆಚ್ಚು ಸಾಲವನ್ನೇನಾದರೂ ನೀಡಬೇಕಾದರೆ ಹೆಡ್ ಆಫೀಸ್‌ಗೆ ಬರೆದು ಅನುಮತಿಯನ್ನು ಕೋರಬೇಕು. ಸಾಲ ಮಂಜೂರಿನಲ್ಲಿ ಭ್ರಷ್ಟಾಚಾರ ನಡೆದಿದೆ. ಅಲ್ಲದೇ ಬಹುಪಾಲು ಈ ಸಂಸ್ಥೆಯಿಂದ ಕನ್ನಡಿಗರೇತರಿಗೆ ಲಾಭವಾಗಿದೆ. ಇದರಿಂದ ಕರ್ನಾಟಕದ ಉದ್ದಿಮೇದಾರರಿಗೆ ಎಷ್ಟು ಪ್ರಯೋಜನವಾಗಿದೆ ಅಲ್ಲದೇ ವರ್ಷಕ್ಕೆ 1 ಕೋಟಿ 1 ಲಕ್ಷ ರೂಪಾಯಿ ಬಾಡಿಗೆ ಕೊಡಬೇಕಾಗಿದ್ದು, ಈ ಸಂಸ್ಥೆಯು ವರ್ಷಕ್ಕೆ 17 ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡಿದರೂ ಸಹ 1 ಕೋಟಿ ರೂಪಾಯಿ ಬಾಡಿಗೆಗಳನ್ನು ಕೊಡಬೇಕು ಎಂದರೆ ಈ ಸಂಸ್ಥೆ ಸ್ವಂತ ಕಟ್ಟಡವನ್ನು ಏಕೆ ಮಾಡಲಿಲ್ಲ ಎಂದು ನಾಗೇಗೌಡರು ಗಮನ ಸೆಳೆದರು.[30]

ನಾಗೇಗೌಡರು ಹಾಲಿನ ಬೆಲೆ ಜಾಸ್ತಿ, ಬೆಣ್ಣೆ ತುಪ್ಪದ ಬೆಲೆ ಕಡಿಮೆ ಎಂದು ಹಾಲಿನ ಬೆಲೆ ಹೆಚ್ಚಾಗಿರುವುದು ಹಾಗೂ ಪೂರೈಕೆಯ ಬಗ್ಗೆ ಸದನದಲ್ಲಿ ಚರ್ಚಿಸುತ್ತಾ, ಬೆಂಗಳೂರು ನಗರದಲ್ಲಿ ಯಂತ್ರಗಳ ಮೂಲಕ ಹಾಲನ್ನು ಒದಗಿಸುವ ಯೋಜನೆ ಏನಾದರೂ ಸರ್ಕಾರದವರಲ್ಲಿ ಇದೆಯೇ? ಹಾಗಿದ್ದಲ್ಲಿ ಇದರ ಉದ್ದೇಶವೇನು? ಈ ವೆಂಡಿಂಗ್ ಭೂತ್ ಪದ್ದತಿಯನ್ನು ರಾಜ್ಯದ ಇತರ ನಗರಗಳಿಗೆ ವಿಸ್ತರಿಸಲಾಗುವುದೇ? ಎಂದು ಪಶುಸಂಗೋಪನಾ ಮಂತ್ರಿಗಳನ್ನು ಕೇಳಿದರು. ಮಂತ್ರಿಗಳು ನೀಡಿದ ಉತ್ತರಕ್ಕೆ ಪ್ರಶ್ನೆ ಹಾಕುತ್ತಾ, ಇಳಿಸಿದ ದರದಲ್ಲಿ ಹಾಲನ್ನು ಸರಬರಾಜು ಮಾಡಲಾಗುತ್ತಿದೆ. ಆದರೆ ದರ ಎಷ್ಟು ಕಡಿಮೆಯಾಗುತ್ತಿದೆ. ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ ಮಾರಾಟ ಮಾಡುವ ವೆಚ್ಚ ಉಳಿತಾಯವಾಗುವುದೆಂದು ಹೇಳಿದ್ದೀರಿ? ಎಷ್ಟು ಉಳಿತಾಯವಾಗುತ್ತದೆ? ನೀವು ಹಳೆಯ ವೆಂಡಿಂಗ್ ಭೂತ್ ಯಂತ್ರಗಳನ್ನು ಹಾಕಿರುವುದರಿಂದ ಅದಕ್ಕೆ ಬೇಕಾದ ಬಿಡಿ ಭಾಗಗಳು ಸಿಗುವುದಿಲ್ಲವೆಂದು ಕೇಳಿದ್ದೇನೆ. ಇದು ನಿಜವೇ? ಎಂದು ಹೀಗೆ ಸಾರ್ವಜನಿಕರ ನಿತ್ಯ ಬದುಕಿಗೆ ಅವಶ್ಯಕವಾದ ಹಾಲಿನ ಪೂರೈಕೆಯ ಬಗ್ಗೆ ಚರ್ಚಿಸಿದರು. [31]

## ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಅದಕ್ಷತೆಗಳನ್ನು ಕುರಿತು

### ಕೆ.ಎನ್.ನಾಗೇಗೌಡರು

ದಿನಾಂಕ : 26.03.1984 ರಂದು ಪುರಸಭೆಗಳ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾವು ಮಹತ್ವದ ಕಾರ್ಯಗಳನ್ನು ಸಾಧನೆ ಮಾಡಿದ್ದೇವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರು ಪ್ರಸ್ತಾಪ ಮಾಡಿದ್ದರಲ್ಲಿ ಪ್ರಮುಖವಾದುದು ಎಂದರೆ ಪುರಸಭೆಗಳಿಗೆ ಚುನಾವಣೆಯನ್ನು ಮಾಡಿದ್ದೇವೆಂದು ಹೇಳಿದರು. ಅವರು ಚುನಾವಣೆಯನ್ನು ಮಾಡಿರುವುದು ನಿಜ, ಚುನಾವಣೆಗಳನ್ನು ಮಾಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವಷ್ಟು ಜನರು ಪುರಸಭೆಗಳಲ್ಲಿದ್ದಾರೆ. ಅಂದ ಮಾತ್ರಕ್ಕೆ ಎಲ್ಲ ಅಭಿವೃದ್ಧಿ ಕಾರ್ಯಗಳೂ ಆಗುತ್ತವೆ. ಜನ ಕಲ್ಯಾಣವಾಗುತ್ತದೆ ಎಂದು ತಿಳಿದುಕೊಳ್ಳುವುದಾದರೆ ಇವತ್ತು ಏನು ಕಾನೂನು ಇದೆ. ಇದರಲ್ಲಿ ಯಾವುದೂ ಕೂಡ ಸಾಧ್ಯವಾಗುವುದಿಲ್ಲ ಎಂದು ಹೇಳ ಬಯಸುತ್ತೇನೆ. ಬಹಳಷ್ಟು ಪುರಸಭೆಗಳು ಆರ್ಥಿಕ ಸಂಕಷ್ಟದಲ್ಲಿ ಸಿಕ್ಕಿ ಅಲ್ಲಿಯ ಚುನಾಯಿತ ಪ್ರತಿನಿಧಿಗಳೂ, ಅಧ್ಯಕ್ಷರೂ, ಉಪಾಧ್ಯಕ್ಷರೂ ಸುಮ್ಮನೆ ಕೂತಿರುವುದನ್ನು ನೋಡುತ್ತಿದ್ದೇವೆ. ಇವರು ಕಳೆದ 6–7 ತಿಂಗಳುಗಳಿಂದ ಏನು ಮಾಡಿದ್ದಾರೆಂಬುದನ್ನು ನೋಡಿದರೆ ಗೊತ್ತಾಗುತ್ತದೆ. ಆರ್ಥಿಕ ಪರಿಸ್ಥಿತಿಯನ್ನು ಯಾವ ರೀತಿ ಉತ್ತಮ ಪಡಿಸಬೇಕೆಂಬ ಬಗ್ಗೆ ಅನೇಕ ಅನುಭವಿಗಳು ಸಲಹೆಗಳನ್ನು ನೀಡಿದ್ದಾರೆ. ಪುರಸಭೆಗಳು ಯಾವುದೇ ಕಾರ್ಯವನ್ನಾಗಲಿ ನಿರ್ವಹಿಸಲು ನಾವು ಅವರಿಗೆ ಏನು ಅಧಿಕಾರವನ್ನು ಕೊಟ್ಟಿದ್ದೇವೆ. ಅವರಿಗಿರತಕ್ಕ ಕಾನೂನು ಚೌಕಟ್ಟಿನಲ್ಲಿ ಏನು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ನಾನಾದರೂ ಹೇಳುತ್ತೇನೆ. ಈ ಪುರಸಭೆಗಳು ತಮ್ಮದೇ ಆದಂಥ ಸಂಪನ್ಮೂಲಗಳನ್ನು ಒದಗಿಸಿಕೊಂಡು, ತಮ್ಮದೇ ಆದಂಥ ಕಾನೂನನ್ನು ಅಳವಡಿಸಿಕೊಂಡು ತಮ್ಮ ಜನ ಕಲ್ಯಾಣ ಮಾಡತಕ್ಕ ಶಕ್ತಿ ಅವರಲ್ಲಿ ಬರಬೇಕು ನೀವು ಕೇವಲ ಮುನಿಸಿಪ್ ಡೈರೆಕ್ಟೋರೆಟ್‌ನ್ನು ಮಾಡಿದ ಮಾತ್ರದಿಂದಲೇ ಎಲ್ಲ ಅನುಕೂಲಗಳು, ಎಲ್ಲ ಅಧಿಕಾರಿಗಳೂ ಆ ಜನತಾ ಪ್ರತಿನಿಧಿಗೆ ಸಿಕ್ಕುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ಯಾವುದೇ ಒಂದು ಪುರಸಭೆಯ ಅಧ್ಯಕ್ಷರೇ ಆಗಲಿ ಕೇವಲ ಅವರು ನಿರ್ಣಯಗಳನ್ನು ಮಾಡುವುದಕ್ಕೆ ಅಧಿಕಾರ ಇದೆಯೇ ಹೊರತು ಅದನ್ನು ಕಾರ್ಯಗತ ಮಾಡತಕ್ಕ ಅಧಿಕಾರ ಅವರಿಗೆ ಇಲ್ಲ. ಈ ಸರ್ಕಾರದವರು ನಾವು ಬಂದ ಮೇಲೆ ಪುರಸಭೆಗಳಿಗೆ ಚುನಾವಣೆಯನ್ನು ಮಾಡಿದ್ದೇವೆ ಎಂದು ಬೆನ್ನು ತಟ್ಟಿಕೊಳ್ಳುತ್ತಿದ್ದಾರೆಯೇ ಹೊರತು ಬೇರೆ ಏನೂ ಮಾಡಿಲ್ಲ. ಪುರಸಭೆಯವರು ತಮ್ಮ ಆರ್ಥಿಕ ಸಂಪನ್ಮೂಲಗಳನ್ನು ತಾವೇ ಒದಗಿಸಿಕೊಂಡು ಜನತೆಯ ಕೆಲಸವನ್ನು ಸಮರ್ಪಕವಾಗಿ ಮಾಡುವುದಕ್ಕೆ ಬೇಕಾದ

ಅಧಿಕಾರವನ್ನು ಕೊಡಬೇಕಾದುದು ಇವರ ಕರ್ತವ್ಯವಾಗಿತ್ತು. ಆದರೆ ಅದನ್ನ ಇವರು ಮಾಡಿಲ್ಲ. 1979ರಲ್ಲಿ ಆಕ್ಟ್ರಾಯ್ ಹೋಯಿತು. ನಾನೆ ಕಳೆದ ಸಾರಿ ಕೂಡ ಮಾತನಾಡುವಾಗ ಹೇಳಿದ್ದೆ. ಈ ಆಕ್ಟ್ರಾಯ್‌ನ್ನು ತೆಗೆದು ಹಾಕಬಾರದು, ಆಕ್ಟ್ರಾಯ್‌ನ್ನು ಕೊಡುವವರು ವ್ಯಾಪಾರಸ್ಥರು ಎಂದರೆ, ಲಾಭ ಮಾಡಿಕೊಳ್ಳುವವರು, ಆಕ್ಟ್ರಾಯ್‌ನ್ನು ಬಡವರು ಯಾರು ಕೊಡುವುದಿಲ್ಲ. ಯಾರು ವ್ಯಾಪಾರ ಮಾಡುತ್ತಾರೆ ಅಂಥವರು ಕೊಡುತ್ತಾರೆ. ಅವರು ಕೊಡತಕ್ಕ ಹಣದಿಂದ ಪಟ್ಟಣದ ಅಭಿವೃದ್ಧಿ ಕಾರ್ಯಗಳಿಗೆ ಅನುಕೂಲವಾಗುತ್ತದೆ ಎಂದು ಹೇಳಿದ್ದೆ. ತಮಗೆ ಇಲ್ಲಿ ಒಂದು ಮಾತನ್ನು ಹೇಳುವುದಾದರೆ 1983–84ರಲ್ಲಿ ಆಕ್ಟ್ರಾಯ್ ಮ್ಯಾಚಿಂಗ್ ಗ್ರ್ಯಾಂಟ್‌ನ್ನು 31.84 ಕೋಟಿ ರೂಪಾಯಿ ಕೊಟ್ಟಿದ್ದೀರಿ. ನಮ್ಮಲ್ಲಿ ಇರತಕ್ಕದ್ದು 244 ಸ್ಥಳೀಯ ಘಟಕಗಳಿವೆ. ಇವುಗಳಿಗೆ ಕೇವಲ 31.84 ಕೋಟಿ ರೂಪಾಯಿ ಮ್ಯಾಚಿಂಗ್ ಗ್ರ್ಯಾಂಟ್‌ನ್ನು ಕೊಟ್ಟರೆ ಅದು ಯಾವ ಮೂಲೆಗೂ ಸಾಲುವುದಿಲ್ಲ. ಉದಾಹರಣೆಗೆ ಹೇಳುವುದಾದರೆ 30 ಸಾವಿರ ಜನಸಂಖ್ಯೆ ಇರತಕ್ಕ ಒಂದು ನಗರಕ್ಕೂ 1 ವರ್ಷಕ್ಕೆ ಕನಿಷ್ಟ ಎಂದರೂ 10 ಲಕ್ಷ ರೂಪಾಯಿ ಬೇಕಾಗುತ್ತದೆ. ಆದರೆ ಇವತ್ತು ನೀವು ಕೊಡುತ್ತಿರುವುದಾದರೂ ಎಷ್ಟು ಕೇವಲ ಲಕ್ಷ ಅಥವಾ 3 ಲಕ್ಷ ರೂಪಾಯಿ. ಅಲ್ಲಿ ಅದೂ ಚೆನ್ನಾಗಿ ವ್ಯಾಪಾರ ನಡೆಯುತ್ತಿದ್ದರೆ ಅಷ್ಟು ಕೊಡುತ್ತೀರಿ, ಇಲ್ಲದಿದ್ದರೆ ಇನ್ನೂ ಕಡಿಮೆ ಕೊಡುತ್ತೀರಿ. ಸಾಮಾನ್ಯ ಪುರಸಭೆಗಳಿಗೆ ಸುಮಾರು ಒಂದೂವರೆ ಲಕ್ಷ ರೂಪಾಯಿ ಕೊಡುತ್ತೀದ್ದೀರಿ. ಅವರಿಗೆ ಮನೆ ಕಂದಾಯದಿಂದ 1 ಲಕ್ಷ ರೂ. ಬರಬಹುದು. ನೀರಿನ ಕಂದಾಯ, ವಿದ್ಯುತ್‌ಚ್ಛಕ್ತಿ ಅಥವಾ ಬೇರೆ ರೂಪದಿಂದ ಸುಮಾರು ಒಂದೂವರೆ ಲಕ್ಷ ರೂಪಾಯಿ ಬರಬಹುದು. ಅಂದರೆ ಒಟ್ಟು ಸುಮಾರು 4 ಲಕ್ಷ ರೂಪಾಯಿಗಳು ಬರಬಹುದು. ಇದರಲ್ಲಿ ಎಲ್ಲ ಅಭಿವೃದ್ಧಿ ಕಾರ್ಯಗಳನ್ನೂ ಮಾಡುವುದಕ್ಕೆ ಸಾಧ್ಯವೆ? 10 ಲಕ್ಷ ಬೇಕಾಗಿರುವ ಕಡೆ 4 ಲಕ್ಷ ರೂ. ಸಿಕ್ಕದರೆ ಇನ್ನು 6 ಲಕ್ಷ ರೂ. ಪುರಸಭಾ ಬಜೆಟ್‌ನಲ್ಲಿ ಖೋತಾ ಆಗುತ್ತದೆ. ಹಾಗಾದರೇ ಅವರು ಯಾವ ರೀತಿ ಅಭಿವೃದ್ಧಿ ಕೆಲಸ ಮಾಡಬೇಕು? ನನ್ನ ಅನುಭವದಲ್ಲಿ ಹೇಳುವುದಾದರೆ ಶೇಕಡ 60 ರಷ್ಟು ಪುರಸಭೆಗಳು ಇವತ್ತು ಆರ್ಥಿಕ ಪರಿಸ್ಥಿತಿಯಿಂದ ನರಳುತ್ತಿವೆ. ಆ ಮೇಲೆ ಅವರು ಯಾವ ರೀತಿ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯ? ಇವತ್ತು ಯಾವೊಂದು ಪುರಸಭೆಗಳ ಆರ್ಥಿಕ ಸಂಪನ್ಮೂಲಗಳನ್ನೂ ಲೆಕ್ಕ ಹಾಕಿದರೆ ಮನೆ ಕಂದಾಯ, ತೆರಿಗೆ, ಕುಡಿಯುವ ನೀರಿನ ತೆರಿಗೆ, ಆಸ್ತಿ ತೆರಿಗೆ ಮುಂತಾದ ಯಾವುದೇ ಬಾಬಿನಿಂದ ಲೆಕ್ಕ ಹಾಕಿದರೆ ಕೂಡ ಹೆಚ್ಚು ಎಂದರೆ 4 ಲಕ್ಷ ರೂಪಾಯಿ ವರಮಾನ ಬರಬಹುದು ಇದರಲ್ಲಿ.

ಇವತ್ತು ಎಲ್ಲ ಪುರಸಭೆಗಳೂ ಕೂಡ ಗೊಬ್ಬರವನ್ನು ಮಾರಾಟ ಮಾಡುವ ಅಂಗಡಿಗಳಾಗಿವೆಯೇ ಹೊರತು ಅವರಿಗೆ ಬೇರೆ ಯಾವ ಕೆಲಸವೂ ಇಲ್ಲ. ದಿನ ಬೆಳಗಾದರೆ ಕಸವನ್ನು ತೆಗೆದುಕೊಂಡು ಹೋಗಿ ತಿಪ್ಪೇಗುಂಡಿಯಲ್ಲಿ ತುಂಬಿ 6 ತಿಂಗಳಿಗೋ, 1 ವರ್ಷಕ್ಕೋ ಒಂದು ಸಾರಿ ಅದನ್ನು ಹರಾಜು ಹಾಕಬೇಕಾಗಿದೆ. ಇಂಥ ಪುರಸಭೆಗಳಿಗೂ ಕೂಡ ನೀವು ಖೋತಾ ಬಜೆಟ್‌ನ್ನು ತೋರಿಸುವುದಿಲ್ಲ. ಕಾರಣ ಖೋತಾ ಎಂದು ತೋರಿಸಿದರೆ ಅದನ್ನು ಎಲ್ಲಿ ಮೈನರ್ ಮುನಿಸಿಪಾಲಿಟಿ ಎಂದು ಮಾಡಬೇಕಾಗುತ್ತದೋ ಎಂದು ಲೆಕ್ಕದ ಪುಸ್ತಕದಲ್ಲಿ ಹೆಚ್ಚು ವರಮಾನ ಇದೆ ಎಂದು ಒಳ್ಳೆಯ ಅಂಕಿ–ಅಂಶಗಳನ್ನು ತೋರಿಸುತ್ತಿದ್ದೀರಿ. ಬಜೆಟ್ ಪುಸ್ತಕದಲ್ಲಿ ಈ ಪುರಸಭೆಗೆ ಇಷ್ಟು ಹೆಚ್ಚು ವರಮಾನ ಬರುತ್ತದೆ. ಇದಕ್ಕೆ ಇಷ್ಟು ಹೆಚ್ಚು ವರಮಾನ ಬರುತ್ತದೆಂದು ಲೆಕ್ಕವನ್ನು ತೋರಿಸುತ್ತಿದ್ದೀರಿ. ಸ್ವಾಮಿ ನನ್ನ ವೈಯಕ್ತಿಕ ಅನುಭವದಲ್ಲಿ ಹೇಳುವುದಾದರೆ ನೂರಕ್ಕೆ ನೂರು ಪುರಸಭೆಗಳು ಖೋತಾ ಬಜೆಟ್‌ನಲ್ಲಿ ನಡೆಯುತ್ತಿವೆ. ನೂರು ಇಲ್ಲದಿದ್ದರೂ ಶೇಕಡ 60 ರಷ್ಟಂತೂ ಖಂಡಿತವಾಗಿ ಖೋತಾ ಬಜೆಟ್‌ನಲ್ಲಿ ನಡೆಯುತ್ತಿವೆ. ಇದು ಸತ್ಯ ಸಂಗತಿ.

ಒಂದು ಪುರಸಭೆಗೆ 35 ಸಾವಿರ ರೂಪಾಯಿಗಳಿಂದ 40 ಸಾವಿರ ರೂಪಾಯಿಗಳವರೆಗೆ ಸಂಬಳವನ್ನು ಕೊಡಬೇಕಾಗಿರುತ್ತದೆ. ಎಷ್ಟೋ ಪುರಸಭೆಗಳಲ್ಲಿ ನೌಕರರಿಗೆ, ಪೌರಕಾರ್ಮಿಕರಿಗೆ ಸಂಬಳವನ್ನು ಕೊಡಲು ಹಣವಿರುವುದಿಲ್ಲ. ಎರಡು ತಿಂಗಳ ಸಂಬಳ, ಮೂರು ತಿಂಗಳ ಸಂಬಳವನ್ನು ಕೊಡದೆ ಇರತಕ್ಕಂಥದ್ದನ್ನು ನಾವು ನೋಡುತ್ತಿರುತ್ತೇವೆ. ಅವರು ಮುಷ್ಕರವನ್ನು ಹೂಡತಕ್ಕಂಥ ಸಂದರ್ಭಗಳು ಇರುತ್ತವೆ. ಅವರುಗಳಿಗೆ ಸಂಬಳವನ್ನು ಕೊಡಲು ಏನು ಮಾಡಿದ್ದೀರಿ ಎಂದು ಕೇಳುತ್ತೇನೆ. ಆರ್ಥಿಕವಾಗಿ ನಗರಾಭಿವೃದ್ಧಿ ಇಲಾಖೆಯಲ್ಲಿ ಹಣವೇ ಇಲ್ಲವೆಂದು ಹೇಳುತ್ತಿರುತ್ತಿದ್ದೀರಿ. ಒಂದು ತಾಲ್ಲೂಕಿನಲ್ಲಿ ಒಂದು ಲಕ್ಷ ಮತದಾರರು ಇದ್ದರೆ 10 ಲಕ್ಷ ಮತದಾರರು ಪಟ್ಟಣಗಳಲ್ಲಿಯೇ ವಾಸವಾಗಿರುತ್ತಾರೆ. ಅವರು ನಿಜಕ್ಕೂ ಬಡವರಾಗಿಯೇ ಇರತಕ್ಕಂತದನ್ನು ನಾವು ನೋಡುತ್ತಿದ್ದೇವೆ. ನನ್ನ ದೃಷ್ಟಿಯಲ್ಲಿ ಪುರಸಭೆಗಳಿಗೆ ಆರ್ಥಿಕವಾಗಿ ಹೆಚ್ಚಿನ ಸಹಾಯವನ್ನು ಮಾಡಬೇಕು, ಆದರೆ ಸರ್ಕಾರವು ಈ ವಿಷಯದಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ಹೇಳಬೇಕಾಗುತ್ತದೆ.

ಎಷ್ಟೋ ಪುರಸಭೆಗಳಿಗೆ ಬಡ್ಜೆಟ್‌ನಲ್ಲಿ ಸಾಕಷ್ಟು ಹಣ ಕೊಟ್ಟಿಲ್ಲ. ಸಾಕಷ್ಟು ಸಂಪನ್ಮೂಲಗಳನ್ನು ಸೃಷ್ಟಿ ಮಾಡತಕ್ಕಂಥ ಶಕ್ತಿ ಪುರಸಭೆಗಳಿಗೆ ಇಲ್ಲದೆ ಇರುವುದರಿಂದ ಪುರಸಭೆಗಳು ಯಾವ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಆಗುತ್ತಿಲ್ಲ. ಹಳ್ಳಿಗಾಡಿನಲ್ಲಿರುವ ರಸ್ತೆಗಳು, ಪಟ್ಟಣಪ್ರದೇಶಗಳಲ್ಲಿರತಕ್ಕಂಥ ರಸ್ತೆಗಳಿಗಿಂತ ಎಷ್ಟೋ

ಮೇಲು ಎಂದು ಹೇಳಬೇಕಾಗಿದೆ. ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ರಸ್ತೆಗಳು ದುರಸ್ಥಿ ಇಲ್ಲದೆ ದೊಡ್ಡ ದೊಡ್ಡ ಗುಂಡಿ ಬಿದ್ದಿರತಕ್ಕಂಥದ್ದನ್ನು ನೋಡಿದ್ದೆ. ವಾಹನಗಳ ಸಂಚಾರಕ್ಕೆ ಬಹಳ ತೊಂದರೆಯಾಗಿರುತ್ತದೆ. ಪುರಸಭೆಗಳಿಗೆ ಹಣದ ಸಹಾಯವನ್ನು ಮಾಡಲು ಕೇಂದ್ರ ಸರ್ಕಾರದ ಕಮಿಷನ್‌ನ್ನು ಕೇಳದ್ದೇವೆಂದು ಹೇಳುತ್ತಿರುತ್ತೀರಿ. ಇದರ ಬಗ್ಗೆ ದೀರ್ಘವಾದ ಯೋಚನೆ ಮಾಡಿ ಆದಷ್ಟು ಜಾಗ್ರತೆ ಪುರಸಭೆಗಳ ಆರ್ಥಿಕ ಸ್ಥಿತಿಯನ್ನು ಸುಧಾರಣೆ ಮಾಡತಕ್ಕಂತದ್ದಕ್ಕೆ ಹಾಕಬೇಕು. ಈ ರೀತಿ ಮಾಡದೇ ಹೋದರೆ ಮತ್ತೆ ಹತ್ತು ಭಾಗ ಜನ ಕಡು ಬಡವರೇ ಇರತಕ್ಕಂಥ ಪಟ್ಟಣ ಪ್ರದೇಶಗಳಲ್ಲಿ ಯಾವ ರೀತಿಯಾದ ಸೌಲಭ್ಯವನ್ನು ಕೊಡಲು ನಿಮ್ಮಿಂದ ಸಾದ್ಯವಾಗದೆ ವಿಫಲರಾಗಿದ್ದೀರಿ ಎಂದು ಹೇಳಬೇಕಾಗುತ್ತದೆ.

ಮತ್ತೊಂದು ಮಹತ್ತರವಾದ ವಿಚಾರ ಏನೆಂದರೆ ಪುರಸಭೆಗಳಲ್ಲಿ ಆಡಿಟ್ ಮಾಡತಕ್ಕಂಥ ಕಾಲದಲ್ಲಿ 1982ರಲ್ಲಿ ಇಡೀ ರಾಜ್ಯದಲ್ಲಿರತಕ್ಕಂಥ ಪುರಸಭೆಗಳನ್ನು ಆಡಿಟ್ ಮಾಡಿ ಅನೇಕ ಲೋಪದೋಷಗಳನ್ನು ಆಡಿಟ್ ವರದಿಯಲ್ಲಿ ಗುರುತಿದಿದ್ದಾರೆ. ಸಂಬಂಧಪಟ್ಟ ಪುರಸಭೆಯ ಅಧಿಕಾರಿಗಳು ಅಧ್ಯಕ್ಷರು, ಸದಸ್ಯರು ಇದಕ್ಕೆ ಕಾರಣಕರ್ತರು ಎಂದು ಕೂಡ ಹೇಳಿರುತ್ತಾರೆ. ಎಷ್ಟೋ ವರ್ಷಗಳಿಂದ ಸಭೆಗಳನ್ನು ಆಡಿಟ್ ಮಾಡದೆ ಇರತಕ್ಕಂಥ ನಿದರ್ಶನಗಳನ್ನು ವರದಿಯ ಪ್ರಕಾರ ಹೇಳುವುದಾದರೆ 1981–82 ರಲ್ಲಿ ಆಕ್ಷೇಪಣೆ ಎತ್ತಿರತಕ್ಕಂಥ ಹಣ ಸುಮಾರು 31 ಕೋಟಿ ರೂಪಾಯಿಗಳು. ಆಡಿಟ್ ವರದಿಯ ಪ್ರಕಾರ ವಸೂಲು ಮಾಡಿರತಕ್ಕಂಥ ಹಣ ಎಷ್ಟು ಎಂದು ಹೇಳಿದರೆ ಸುಮಾರು 220 ಲಕ್ಷ ರೂಪಾಯಿ, ತಾವು ಇಡೀ ವರ್ಷಕ್ಕೆ ಕೊಟ್ಟಿರತಕ್ಕಂಥ ಹಣ 31 ಕೋಟಿ ರೂಪಾಯಿಗಳು ಆದರೆ ವಸೂಲಾಗಿರತಕ್ಕಂಥದ್ದು 220 ಲಕ್ಷ ರೂಪಾಯಿಗಳು ಎಂದರೆ ಉಳಿದ ಹಣವನ್ನು ವಸೂಲು ಮಾಡಲು ಏನು ಕ್ರಮ ತೆಗೆದುಕೊಂಡಿರುತ್ತೀರಿ ಎಂದು ಕೇಳಬೇಕಾಗುತ್ತದೆ. ಪುರಸಭೆಗಳಿಗೆ ಹೆಚ್ಚಿನ ಗ್ರಾಂಟನ್ನು ತೆಗೆದುಕೊಂಡಿರತಕ್ಕಂಥದ್ದರಲ್ಲಿ ಬಳಸಿರತಕ್ಕಂಥ ಹಣವನ್ನು ನೋಡಿದರೆ ಬಹುಪಾಲು ಹಣವನ್ನು ಖಾಸಗಿಯವರು ಮತ್ತು ಅಧಿಕಾರಗಳೇ ನುಂಗಿರುತ್ತಾರೆ. ಸಾಮಾನ್ಯವಾಗಿ ಪುರಸಭೆಗಳಿಗೆ ಹೋಗುವುದು. ಆದರೆ ದುಡ್ಡನ್ನು ಮಾಡುವುದಕ್ಕೆ ಹೋಗುತ್ತಾರೆಂದು ಹೇಳಬೇಕಾಗುತ್ತದೆ. ಪುರಸಭೆಗಳ ದುಡ್ಡು ಅಂದರೆ ಆಫೀಸರ್‌ಗಳಿಗೆ ಕಪ್ಪ ಕಾಣಿ ಇದ್ದ ಹಾಗೆ. ಅದಕ್ಕಾಗಿಯೇ ಪುರಸಭೆಗಳಿಗೆ ಹಾಕಿಸಿಕೊಳ್ಳತಕ್ಕಂಥ ಅಧಿಕಾರಿಗಳು ಇರುತ್ತಾರೆ. ರಸ್ತೆಗಳನ್ನು ನಿರ್ಮಾಣ ಮಾಡತಕ್ಕಂಥದ್ದರಲ್ಲಿ ಲಂಚ, ಜನತೆಯ ಕಲ್ಯಾಣ ಕಾರ್ಯಕ್ರಮಗಳನ್ನು ಮಾಡುವುದರಲ್ಲಿ ಲಂಚ ಹೊಡೆಯುವುದರಲ್ಲಿಯೇ ಅಧಿಕಾರಿಗಳು ನಿರತರಾಗಿರುತ್ತಾರೆ. ಬೆಂಗಳೂರು ನಗರದಲ್ಲಿ ಕಸಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ಯಾರಿಗೋ ಕಂಟ್ರಾಕ್ಟ್

ಕೊಟ್ಟಿರುತ್ತಾರೆ. ಆ ಕಂಟ್ರಾಕ್ಟ್ ಕೊಟ್ಟಿರತಕ್ಕಂಥದ್ದರಲ್ಲಿ ಅವ್ಯವಹಾರ ನಡೆದು 40 ಸಾವಿರ ರೂಪಾಯಿ ಯಾರಿಗೋ ಹೋಗುತ್ತಿದೆ. ಯಾರು ಅಂಥ ಪ್ರಭಾವಿಯುತರಾದವರು ಎನ್ನುವುದನ್ನು ಮಾನ್ಯ ಸಚಿವರು ಉತ್ತರವನ್ನು ಹೇಳತಕ್ಕಂಥ ಕಾಲದಲ್ಲಿ ಹೇಳಲಿ, ಉತ್ತರವನ್ನು ಕೊಡುವ ಕಾಲಕ್ಕೆ ಅವರು ಯಾರು ಎಂಬುದನ್ನು ಹೇಳುತ್ತೇನೆ. ಏತಕ್ಕೆ ಈಗ ಹೇಳುವುದಿಲ್ಲವೆಂದರೆ ಮಾನ್ಯ ಮಂತ್ರಿಗಳ ಮೇಲೆ ಚಾರ್ಜ್ ಮಾಡಿದಂತಾಗುತ್ತದೆ. ಚಾರ್ಜ್ ಮಾಡಬೇಕಾದರೆ ನೋಟೀಸ್ ಕೊಡಬೇಕಾಗುತ್ತದೆ. ಆ ಒಂದು ಕಾರಣಕ್ಕೋಸ್ಕರ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಗೊಬ್ಬರದಿಂದ ದುಡ್ಡನ್ನು ಹೊಡೆಯತ್ತಂಥವರ ಕೈಯಲ್ಲಿ ಕೊಟ್ಟಿರುತ್ತೀರಿ. ಅವರು ಇವೊತ್ತಿನ ದಿವಸ ಹಣವನ್ನು ಮಾಡಲಿಕ್ಕೆ ಹೊರಟಿದ್ದಾರೆ. ಯಾರು ಯಾರಿಗೆ ಟ್ರಾನ್ಸ್‌ಪೋರ್ಟ್ ಮಾಡಲಿಕ್ಕೆ ಕೊಟ್ಟಿದ್ದೀರಿ. ಇದು ಯಾರು ಯಾರಿಗೆ ಹಣ ಹೋಗುತ್ತಿದೆ ಎಂಬುದನ್ನೆಲ್ಲ ವಿವರವಾಗಿ ತಾವು ಉತ್ತರವನ್ನು ಹೇಳಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ, ಈ ಪುರಸಭೆಗಳಲ್ಲಿ ಎಷ್ಟು ಹಣ ಲೂಟಿಯಾಗಿದೆ ಎಂದು ಆಡಿಟ್‌ನವರು ಹೇಳಿದ್ದಾರೆ. ಅದನ್ನು ವಸೂಲಿ ಮಾಡರುವಂತಹ 220 ಲಕ್ಷ ರೂಪಾಯಿಗಳನ್ನು ವಸೂಲಿ ಮಾಡಿ ಎಲ್ಲ ಪುರಸಭೆಗಳಿಗೂ ಹತ್ತತ್ತು ಲಕ್ಷ ರೂಪಾಯಿಗಳಂತೆ ಕೊಟ್ಟರೆ ಅವುಗಳ ಆರ್ಥಿಕ ಪರಿಸ್ಥಿತಿಯೂ ಸುಧಾರಣೆಯಾಗುತ್ತದೆ. ಆಡಿಟ್‌ನವರು ಯಾರು ಯಾರು ಹಣ ಲೂಟಿ ಮಾಡಿದ್ದಾರೆಂದು ಹೇಳಿದ್ದಾರೋ ಅಂತಹವನ ಆಸ್ತಿಯನ್ನು ಹರಾಜು ಮಾಡಿಯಾದರೂ ವಸೂಲಿ ಮಾಡಬೇಕು. ಲೂಟಿ ಮಾಡಿದವರ ಪೈಕಿ ಕೆಲವರು ನಿವೃತ್ತರಾಗಿದ್ದಾರೆ. ಕೆಲವರು ಸತ್ತು ಹೋಗಿದ್ದಾರೆ ಮತ್ತು ಇದರಲ್ಲಿ ಖಾಸಗಿಯವರು ಸಹ ಇದ್ದಾರೆ. ಇಂತಹವರೆಲ್ಲಾ ಹಣ ವಾಪಸ್ ಕೊಡದಿದ್ದರೆ ಇವರ ಆಸ್ತಿಯನ್ನು ಹರಾಜು ಹಾಕಿಸಿಯಾದರೂ ಹಣ ವಸೂಲಿ ಮಾಡಿದರೆ ಈ ಪುರಸಭೆಗಳ ಆರ್ಥಿಕ ಸ್ಥಿತಿಯನ್ನು ಸುಧಾರಣೆ ಮಾಡಲು ಅಸಾಧ್ಯವಾಗುತ್ತದೆಂದು ಹೇಳುತ್ತೇನೆ. ಈ ಪುರಸಭೆಗಳಲ್ಲಿ ಕೆಲಸ ಮಾಡಿದವರ ಅನೇಕ ರಾಜಕಾರಣಿಗಳ ಹಾಗೂ ಅನುಭವಶಾಲಿಗಳ ಸಲಹೆಗಳನ್ನು ಪಡೆದುಕೊಂಡು ಈ ಪುರಸಭೆಗಿರುವ ಕಷ್ಟಗಳನ್ನು ಹೋಗಲಾಡಿಸಲು ಮತ್ತು ಇರತಕ್ಕಂಥ ತೊಡಕುಗಳನ್ನು ಬಗೆಹರಿಸಲು ಜಿಲ್ಲಾ ಪರಿಷತ್ ಮಾದರಿಯಲ್ಲಿ ಪುರಸಭಾ ಪರಿಷತ್ ಮಸೂದೆಯನ್ನು ಜಾರಿಗೆ ತರುವುದರ ಮೂಲಕ ಇವುಗಳು ತಮ್ಮದೇ ಆದಂಥ ರೀತಿಯಲ್ಲಿ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು

ಹೇಳುತ್ತೇನೆ. ನೀವು ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ನಾನಾ ಮೂಲಗಳಿಂದ ಹಣ ಬರಬೇಕಾಗಿದೆ ಎಂದು ಹೇಳುತ್ತಿರುವಾಗ, ಈ ಪುರಸಭೆಗಳಿಗೆ ನೀವು ಕೊಡಬೇಕಾದ ಹಣವನ್ನು ಕೊಟ್ಟ ನಂತರ ಕೇಂದ್ರವನ್ನು ಕೇಳುವುದು ನ್ಯಾಯವಿದೆ. ಆದ್ದರಿಂದ ಈ ಒಂದು ತತ್ವವನ್ನು ತಾವು ಒಪ್ಪಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಇಲ್ಲ ಪುರಸಭೆಗಳ ವ್ಯಾಪ್ತಿಯಲ್ಲಿ ವಾಸ ಮಾಡುತ್ತಿರುವ ಎಸ್ಸಿ, ಜನರಿಗೆ ನೀರು ಒದಗಿಸಲು, ಮನೆಗಳನ್ನು ಕಟ್ಟಿಸಿಕೊಡಲು, ವಿದ್ಯುತ್ ಒದಗಿಸಲು, ಕಮ್ಯುನಿಟಿ ಸೆಂಟರ್‌ಗಳನ್ನು ಕಟ್ಟಿಸಿಕೊಡಲು ಸಂಪರ್ಕ ರಸ್ತೆಗಳನ್ನು ಮಾಡಿಸಿಕೊಡಲು ಪುರಸಭೆಗಳ ಬಡ್ಜೆಟ್‌ನಲ್ಲಿ ಶೇಕಡ 18 ರಷ್ಟು ಹಣವನ್ನು ಮೀಸಲಿಡಬೇಕೆಂದು ನಿಯಮವಿದೆ. ಇದರ ಪ್ರಕಾರ ಎಲ್ಲ ಡಿವಿಜನ್‌ಗಳಿಗೂ ಸೇರಿದಂತೆ 2 ಕೋಟಿ ರೂಪಾಯಿಗಳನ್ನು ತೆಗೆದಿರಿಸಿದ್ದರೂ ಸಹ ಇದರ ಬಹುಪಾಲು ಹಣ ದುರುಪಯೋಗವಾಗತ್ತಿದೆ.

ಇನ್ನು ಸರ್ಕಾರದವರು ಎಲ್ಲ ಕಡೆ ತರಕಾರಿ, ಮೀನು ಮತ್ತು ಮಾಂಸ ಮಾರಾಟ ಮಾಡಲು ಮಾರುಕಟ್ಟೆಗಳನ್ನು ಕಟ್ಟಿಸಬೇಕು. ಇದರಿಂದ ಆಯಾ ಪುರಸಭೆಗಳು ಈ ವ್ಯಾಪಾರ ಮಾಡುವವರಿಂದ ಬಾಕಿ ವಸೂಲಿ ಮಾಡಲು ಮತ್ತು ತಮ್ಮ ಆದಾಯ ಹೆಚ್ಚಿಸಿಕೊಳ್ಳಲು ಅನುಕೂಲ ಆಗುತ್ತದೆ. ಈಗ ದೊಡ್ಡ ರಸ್ತೆಗಳು ಇರುವ ಕಡೆ ರಸ್ತೆಯ ಎರಡೂ ಕಡೆ ಇವುಗಳನ್ನು ಮಾರಾಟ ಮಾಡುತ್ತಿದ್ದಾರೆ. ಅದನ್ನು ತಪ್ಪಿಸಲು ಮಾರುಕಟ್ಟೆಗಳನ್ನು ಕಟ್ಟಿಸುವುದು ಒಳ್ಳೆಯದು. ಈಗ ಮಂಗಳೂರಿನಲ್ಲಿ ಮೀನು ಮಾರುಕಟ್ಟೆ ಕಟ್ಟಿಸಲು ಸರ್ಕಾರದವರು 20 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಹಾಕಿದ್ದಾರೆ. ಮಾರುಕಟ್ಟೆಗಳನ್ನು ಕೇವಲ ಮಂಗಳೂರು. ಮೈಸೂರು ಮುಂತಾದ ಕೆಲವು ಕಡೆ ಮಾತ್ರ ಕಟ್ಟಿಸುವುದಕ್ಕೆ ಬದಲು ರಾಜ್ಯದ ಎಲ್ಲ ಪಟ್ಟಣಗಳಲ್ಲಿಯೂ ಕಟ್ಟಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಹೌಸಿಂಗ್ ಬೋರ್ಡ್ ಬಗ್ಗೆ ಇಲ್ಲಿ ನಾವು ಅನೇಕ ಸಲ ಪ್ರಸ್ತಾಪ ಮಾಡಿದ್ದೇವೆ. ಆದರೂ ಒಂದು ನಿರೀಕ್ಷೆಗೆ ತಕ್ಕಂತೆ ಇದರಿಂದ ಅನುಕೂಲ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಪುರಸಭೆಗಳಿಗೆ ನಾವು ಚುನಾವಣೆಯನ್ನು ಮಾಡಿ ಜನತಾ ಪ್ರತಿನಿಧಿಗಳ ಜನರ ಕೈಯಲ್ಲಿ ಆಡಳಿತವನ್ನು ಕೊಟ್ಟಿದ್ದೇವೆಂದು ಇವರು ಬೆನ್ನು ತಟ್ಟಿಕೊಳ್ಳುತ್ತಿದ್ದಾರೆ. ಆದರೆ ಚುನಾವಣೆಗಳನ್ನು ಮಾಡಿದ ಮಾತ್ರಕ್ಕೆ ತಾವು ಎಲ್ಲವನ್ನು ಸಾಧನೆ ಮಾಡಿದ್ದೇವೆಂದು ತಿಳಿದುಕೊಳ್ಳುವುದು ಸರಿಯಲ್ಲ. ಇನ್ನು ಕೊನೆಯದಾಗಿ ನಾನು ನಮ್ಮ ಮಂಡ್ಯ ಜಿಲ್ಲೆಯ ಬಗ್ಗೆ ಒಂದು ಮಾತನ್ನು ಮಾತನಾಡ ಬಯಸುತ್ತೇನೆ. ಈ ವಿಷಯವಾದರೂ ಏನೆಂದರೆ ನಮ್ಮ ಮಂಡ್ಯ ಜಿಲ್ಲೆಯಲ್ಲಿ ನಿವೇಶನಗಳನ್ನು

ಹಂಚಿರತಕ್ಕಂಥ ಸಂಬಂಧದಲ್ಲಿ ಅನೇಕ ದುರುಪಯೋಗ ನಡೆದಿದೆ ಎಂದು ಈ ಸದನದಲ್ಲಿ ಆರೋಪ ಮಾಡಿದ್ದೆ. ಸುಮಾರು 14 ಸ್ಥಳಗಳಲ್ಲಿ ಸಾವಿರಾರು ಸೈಟ್‌ಗಳನ್ನು ಹಂಚಿಕೆ ಮಾಡಿ ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಲೂಟಿ ಮಾಡಿದ್ದಾರೆಂದು ಸಹ ನಾನು ಅಪಾದನೆ ಮಾಡಿ. ಆದರೆ ಆ ಬಗ್ಗೆ ಮಾನ್ಯ ಮಂತ್ರಿಗಳು ಈ ಸದಸನದಲ್ಲಿ ಆಶ್ವಾನೆ ಕೊಟ್ಟ ಪ್ರಕಾರ ಒಂದು ಸಮಿತಿಯನ್ನು ನೇಮಕ ಮಾಡುತ್ತೇನೆಂದು ಹೇಳಿದ್ದರು. ಆದರೆ ಅವರ ಮಾತಿನ ಪ್ರಕಾರ ಸಮಿತಿಯನ್ನು ನೇಮಕ ಮಾಡಿದ್ದಾರೆ. ಆದರೆ ಆ ಸಮಿತಿಯಲ್ಲಿ ಯಾರನ್ನು ಸೇರಿಸಿದ್ದಾರೆ. ಎಂದರೆ ಪುರಸಭೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಸಮಿತಿಯ ಸದಸ್ಯರನ್ನಾಗಿ ಮಾಡಿದ್ದಾರೆ. ಆದರೆ ನಾವು ಹಿಂದೆ ಆಪಾದನೆ ಮಾಡಿದ್ದು ಸಹ ಆ ಇಬ್ಬರು ಖಾಸಗಿ ಸದಸ್ಯರ ಮೇಲೆಯೇ. ಆದರೇ ಅವರನ್ನೇ ಈಗ ಈ ಸಮಿತಿಯ ಸದಸ್ಯರನ್ನು ಮಾಡಿದರೆ ಎಷ್ಟರ ಮಟ್ಟಿಗೆ ನ್ಯಾಯ ಸಿಗುತ್ತದೆ.

ದಿನಾಂಕ 13.03.1983ರಲ್ಲಿ ಸುಮಾರು ಸಾವಿರಾರು ಸೈಟ್‌ಗಳನ್ನು ಹಂಚಿಕೆ ಮಾಡಿ ಸುಮಾರು ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡಿದ್ದಾರೆ. ಇವತ್ತಿನ ದಿವಸ ಆ ಪುರಸಭೆಯ ಅಧ್ಯಕ್ಷರ ಮೇಲೆ ದೂರುಗಳು ಬರುತ್ತಿವೆ. ಆದರೆ ಸಾವಿರಾರು ಜನರಿಗೆ ಮೋಸ ಮಾಡಿದ್ದಾರೆ. ಅಂಥವರನ್ನೇ ತಾವು ಸಮಿತಿಯ ಸದಸ್ಯರನ್ನಾಗಿ ಮಾಡಿದರೆ ಅವರಿಂದ ಸರಿಯಾದ ನ್ಯಾಯ ನಮಗೆ ದೊರೆಯುತ್ತದೆಯೇ? ನಾವು ಆಪಾದನೆ ಅನಿಸುತ್ತದೆ ಎಂದರೆ ನೇರವಾಗಿ ಸರ್ಕಾರದವರು ಭ್ರಷ್ಟಾಚಾರಕ್ಕೆ ಬೆಂಬಲ ಕೊಡುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ.

ಪುರಸಭೆಯ ಮೇಲೆ ಆಪಾದನೆ ಇದೆ. ಮೋಸಸ್ ಕಮಿಟಿ ರಿಪೋರ್ಟ್ ಕೊಟ್ಟಿದೆ? ಮೋಸಸ್ ಕಮಿಟಿ ರಿಪೋರ್ಟ್‌ನಲ್ಲಿ ನೇರವಾಗಿ ಪುರಸಭೆಯ ಅಧ್ಯಕ್ಷರ ಮೇಲೆ ಮತ್ತು ಸಮಿತಿಯ ಸದಸ್ಯರ ಮೇಲೆ ಆಪಾದನೆ ಮಾಡಿದ್ದಾರೆ. ಈ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ. ಮಂಡ್ಯ ನಗರದಲ್ಲಿ 250 ಗುಡಿಸಲುಗಳನ್ನು ಹಾಕಿಕೊಂಡು ಸಣ್ಣ ಪುಟ್ಟ ಗುಡಿ ಕೈಗಾರಿಕೆಗಳನ್ನು ಮಾಡಿಕೊಂಡಿದ್ದಾರೆ. ಪುರಸಭೆಯ ಅಧ್ಯಕ್ಷರು ಯಾವ ರೀತಿ ಮಾಡಿದ್ದಾರೆಂಬುದು ತಮಗೆ ಗೊತ್ತಿದೆ. ಅದು ಸ್ಮಾಲ್‌ಸ್ಕೇಲ್ ಇಂಡಸ್ಟ್ರಿಯಲ್ ಎಂದು ಏರಿಯಾ ಹಿಂದುಗಡೆ ಗುಡಿಸಲುಗಳನ್ನು ಹಾಕಿಕೊಂಡು ಮುಂದುಗಡೆ ಸಣ್ಣ ಪುಟ್ಟ ವ್ಯಾಪಾರಗಳನ್ನು ಮಾಡುತ್ತಿದ್ದಾರೆ. ಆ ಜಾಗವನ್ನು ಹಂಚಿಕೊಳ್ಳುವುದಕ್ಕೆ ಹೊರಟಿದ್ದಾರೆ. ದಯವಿಟ್ಟು ಫೈಲ್ ತರಸಿಕೊಂಡು ನೋಡಿ ಅದು ಸ್ಲಂ ಏರಿಯಾ ಎಂದು ನೋಟೀಫೈ ಆಗಿದೆ. ಸಣ್ಣ ಪುಟ್ಟ ಕೈಗಾರಿಕೆ ನಡೆಸಲಿಕ್ಕೆ ಆ ಜಾಗವನ್ನು ಕೊಡಬೇಕೆಂದು ಡಿಕ್ಲೇರ್ ಮಾಡಿದ್ದಾರೆ.

ಮಂಡ್ಯ ನಗರದಲ್ಲಿ ಸ್ಥಳೀಯವಾಗಿ ಆ ಜಾಗ 2 ಕೋಟಿ ರೂಪಾಯಿಗೆ ಹೋಗುತ್ತದೆ. ಆ ಜಾಗದಲ್ಲಿ ಸಣ್ಣ ಪುಟ್ಟ ಕೈಗಾರಿಕೆಗಳನ್ನು ಅಂದರೆ ಕುಂಬಾರರು, ಮರಗೆಲಸ ಮಾಡುವವರ ಇನ್ನಿತರೆ ಕೆಲಸ ಮಾಡುವವರು ಹೇಗೋ ಜೀವನ ಮಾಡುತ್ತಿದ್ದಾರೆ. ವಾಸ ಮಾಡುವುದಕ್ಕೆ ಹಿಂದುಗಡೆ ಜಾಗ ಮಾಡಿಕೊಂಡಿದ್ದಾರೆ. ಅಲ್ಲಿ ವಾಸ ಮಾಡತಕ್ಕವರಿಗೆ ಬೇರೆ ಕಡೆ ಜಾಗವಿಲ್ಲ. ಮಧ್ಯೆ ದಳ್ಳಾಳಿಗಳು ಸೇರಿಕೊಂಡು ಆ ಜಮೀನನ್ನು ಹೊಡೆದು ಶ್ರೀಮಂತರಿಗೆ ಹಂಚಲಿಕ್ಕೆ ಹೊರಟಿದ್ದಾರೆ.[32]

ಕೆ.ಎನ್. ನಾಗೇಗೌಡರು ನೀರಾವರಿ ಕ್ಷೇತ್ರದ ಬಗ್ಗೆ ಆಗಿರುವ ತೊಂದರೆಯ ಬಗ್ಗೆ ಸದನದಲ್ಲಿ ಗಮನ ಸೆಳೆಯುತ್ತಾ 27/03/1985 ರಂದು ತುಂಗಭದ್ರ ಎಡದಂಡೆ ನಾಲೆ ಹೊಡೆದು ಹೋಗಿದ್ದು ನಿಜವೇ, ಹೊಡೆದು ಹೋಗಲು ಕಾರಣಗಳೇನು ಈ ಘಟನೆಗೆ ಕಾರಣರಾದವರನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಲಾಗುವುದೇ ಈ ನಾಲೆ ಬಿರುಕಿನಂದ ರೈತರಿಗೆ ಆಗಿರಬಹುದಾದ ನಷ್ಟದ ಪರಿಹಾರವನ್ನು ನಿಗಧಿಪಡಿಸಲಾಗಿದಲ್ಲ, ನಾಲೆ ದುರಸ್ತಿ ಕಾರ್ಯ ತ್ವರಿತವಾಗಿ ನಡೆಯುತ್ತಿದೆಯೇ ಹಾಗೂ ನಾಲೆಯ ಒಳಭಾಗದ ಒಡ್ಡನ್ನು ಬಲಪಡಿಸಲು ತೆಗೆದುಕೊಂಡ ಕೆಲಸಗಳನ್ನು ಮುಗಿಸಲಾಗಿದೆಯೇ, ಈ ಸಂದರ್ಭದಲ್ಲಿ ಆ ನಾಲಾ ಬಯಲಿನ ರೈತರು ಚಳುವಳಿ ಮತ್ತು ಬಂದ್ ನಡೆಸಿದಾಗ ರೈತರ ಯೋಗಕ್ಷೇಮವನ್ನು ರಾಯಚೂರು ಜಿಲ್ಲಾ ಮಂತ್ರಿಗಳು ವಿಚಾರಿಸಲಿಲ್ಲ ಅಲ್ಲದೇ ನಾವು ಭೇಟಿ ನೀಡಿದಾಗ ಜಿಲ್ಲಾ ಮಂತ್ರಿಗಳು ಬರಲಿಲ್ಲ, ಗುತ್ತಿಗೆ ನೀಡುವುದರಲ್ಲಿ ಅವ್ಯವಹಾರ ನಡೆದಿದ್ದು, ಅನರ್ಹ ಕಂಟ್ರಾಕ್ಟರ್‌ಗೆ ಕೊಟ್ಟಿರುವುದರ ಬಗ್ಗೆ ಸಿ.ಓ.ಡಿ ತನಿಖೆಯನ್ನು ಮಾಡಿಸುತ್ತೇವೆ ಎಂದಿದ್ದರು. ಇದರ ಹಿಂದೆ ಯಾರು ಯಾರು ಶಾಮಿಲ್ ಆಗಿದ್ದಾರೆ ಎಂದು ಬಹಿರಂಗವಾಗಿ ಪತ್ರಿಕೆಗಳಿಗೆ ಹೇಳಿಕೆ ಕೊಟ್ಟು ಇವತ್ತು ಸದನದಲ್ಲಿ ತನಿಖೆ ಮಾಡುವುದಿಲ್ಲ ಎಂದು ಹೇಳಿದರೇ, ಇದರಲ್ಲಿ ಸರ್ಕಾರ ಏನೋ ಮುಚ್ಚುತಾ ಎಂದು ತಿಳಿಯುತ್ತದೆ ಎಂದು ಹೇಳಿದರು.[33] ಅಲ್ಲದೇ ಅಜ್ಜವಯ್ಯನಹಳ್ಳಿ ಸುರಂಗದಲ್ಲಿ ದೊಡ್ಡ ಪ್ರಮಾಣದಲ್ಲಿ ನೀರು ಜಿನುಗಿ ಹೇಮಾವತಿ ನಾಲೆ ಕಾರ್ಯ ಸ್ಥಗಿತವಾಗಿರುವುದನ್ನು ನೋಡಬಹುದು. ಸುರಂಗದ ಟನಲ್ ಕೆಲಸ ಸುಮಾರು 89 ಕೋಟಿ ರೂಪಾಯಿಗಳ ಕೆಲಸವಾಗಿದ್ದು, ದೊಡ್ಡ ಪ್ರಮಾಣದ ನೀರು ಸೋರಿಕೆಯಿಂದಾಗಿ ಕೆಲಸ ನಿಂತು ಹೋಗಿದೆ ಇವತ್ತಿನ ಪರಿಸ್ಥಿತಿ ಏನು ಎಂದು ಕೇಳಿದರು. ದೂದ್ ಗಂಗಾ ಪರಿಷ್ಕೃತ ಯೋಜನೆಗೆ ಮಹಾರಾಷ್ಟ್ರ ಸರ್ಕಾರ ಸಮ್ಮತಿ ಸೂಚಿಸಿದೆಯೇ? ಈ ಯೋಜನೆಯಿಂದ ರಾಜ್ಯಕ್ಕೆ ದೊರಕುವ ನೀರಿನ ಪ್ರಮಾಣ ಎಷ್ಟು ಈ ಯೋಜನೆಗೆ ತಗಲುವ ವೆಚ್ಚವೆಷ್ಟು, ಆದರೆ ಮಂತ್ರಿ ಪಿ.ಜಿ.ಆರ್. ಸಿಂಧ್ಯಾರವರು ಪತ್ರಿಕಾ ಹೇಳಿಕೆಯನ್ನು ಕೊಟ್ಟು ದೂದ್ ಗಂಗಾ ಯೋಜನೆಗೆ

ಮಹಾರಾಷ್ಟ್ರ ಸರ್ಕಾರದ ಸಮ್ಮತಿ ಇದೆ ಎಂದು ಹೇಳಿದ್ದಾರೆ. ಆದರೆ ಉತ್ತರ ನೀಡುವಾಗ ಇಲ್ಲವೆಂದು ಹೇಳಿದ್ದೀರಿ. ಈ ಯೋಜನೆಯಿಂದ ಎಷ್ಟು ಎಕರೆ ನೀರಾವರಿಗೆ ಒಳಪಡುತ್ತದೆ. ಆ ಜಲಾಶಯದಿಂದ ದೊರೆಯುವ ನೀರಿನಲ್ಲಿ ಮಹಾರಾಷ್ಟ್ರಕ್ಕೆ ಎಷ್ಟು ಕೊಡುತ್ತೀರಿ. ನಮ್ಮ ರಾಜ್ಯಕ್ಕೆ ಎಷ್ಟು ಉಪಯೋಗ ಮಾಡುತ್ತೀರಿ ಮತ್ತು ಇದಕ್ಕೆ ಮಂಜೂರಾಗಿರುವ ಹಣಕಾಸಿನ ಪರಿಸ್ಥಿತಿಯನ್ನು ತಿಳಿಸಿ ಎಂದರು. [34]

ಹೊಸ ಆಹಾರ ನೀತಿಯನ್ನು ಕುರಿತು ಕೆ.ಎನ್. ನಾಗೇಗೌಡರ ನಿಲುವು 29/03/1985 ರಲ್ಲಿ ರಾಜ್ಯದಲ್ಲಿ ಹೊಸ ಆಹಾರ ನೀತಿಯನ್ನು ಸಿದ್ಧ ಪಡಿಸುವ ಆಲೋಚನೆ ಸರ್ಕಾರಕ್ಕಿದೆಯೇ ನಾನು ರಾಜ್ಯದ ಹೊಸ ಆಹಾರ ನೀತಿ ಏನಿದೆ ಎಂದು ಕೇಳಿದ್ದಕ್ಕೆ ರಾಜ್ಯದಲ್ಲಿ ಹೊಸ ಆಹಾರ ನೀತಿಯ ಪ್ರಧಾನ ಅಂಶಗಳಾದ ಅಕ್ಕಿ ಸಂಗ್ರಹಣೆ ಮತ್ತು ಖರೀದಿಯ ಬಗ್ಗೆ ಯಾವ ಬದಲಾವಣೆ ಇರುವುದಿಲ್ಲ ಎಂದು ಹೇಳಿದ್ದಾರೆ. ಆಹಾರ ಸಂಗ್ರಹಣೆ ಯಾವ ರೀತಿ ಇದೆ, ವಿತರಣೆ ಯಾವ ರೀತಿ ಇದೆ ಡಿಸೆಂಬರ್‌ನಲ್ಲಿ ಫುಡ್ ಪಾಲಿಸಿ ಚೇಂಜ್ ಮಾಡುತ್ತೇವೆ ಎಂದು ವರ್ತಕರ ಸಭೆಯಲ್ಲಿ ತಿಳಿಸಿದ್ದೀರಾ ಇದರ ಬಗ್ಗೆ ವಿವರಣೆಯನ್ನು ಆಹಾರ ಮತ್ತು ನಾಗರೀಕ ಪೂರೈಕೆಯ ಮಂತ್ರಿಗಳಿಂದ ವಿವರಣೆ ಪಡೆದರು.[35]

ಕೆ.ಎನ್. ನಾಗೇಗೌಡರು ಮಾಜಿ ಪಟೇಲರಿಗೆ ನೀಡಲಾಗುತ್ತಿದ್ದ ಅನುಕಂಪದ ಭತ್ಯೆ ನೀಡುವ ಬಗ್ಗೆ 01/04/1985 ರಂದು ಗಮನ ಸೆಳೆಯುತ್ತಾ ಮಾಜಿ ಪಟೇಲರಿಗೆ ಅನುಕಂಪ ಭತ್ಯೆಯನ್ನು ಕೊಡಲಾಗುತ್ತಿದೆಯೇ, ಈ ಸೌಲಭ್ಯವನ್ನು ರಾಜ್ಯದಲ್ಲಿ ಎಷ್ಟು ಮಂದಿಗೆ ಕೊಡಲಾಗುತ್ತಿದೆ? ಮಾಜಿ ಪಟೇಲರನ್ನು ಗುರುತಿಸುವ ಕಾರ್ಯವನ್ನು ಯಾರಿಗೆ ವಹಿಸಲಾಗಿದೆ. ಈ ಮಾಜಿ ಪಟೇಲರಿಗೆ ಅನುಕಂಪ ಭತ್ಯೆ ಕೊಡುವುದರಿಂದ ರಾಜ್ಯದ ಬೊಕ್ಕಸಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎಂದು ಕೇಳಿದರು.[36]

ಕೆ.ಎನ್. ನಾಗೇಗೌಡರು ರಾಮಗುಂಡಂ ಶಾಖೋತ್ಪನ್ನ ಯೋಜನೆಯ ಕುರಿತು ವಿಧಾನ ಪರಿಷತ್‌ನಲ್ಲಿ ಮಾತನಾಡುತ್ತಾ ರಾಮಗುಂಡಂ ಶಾಖೋತ್ಪನ್ನ ವಿದ್ಯುತ್ ಸ್ಥಾವರದಿಂದ ಕೇರಳದ ಪಾಲನ್ನು ಕರ್ನಾಟಕಕ್ಕು ಕೊಡಲಾಗುವುದೇ ಇದರಿಂದಾಗಿ ರಾಜ್ಯದಲ್ಲಿನ ವಿದ್ಯುತ್ ಕೊರತೆ ಉತ್ತಮಗೊಳ್ಳುವುದೇ ರಾಮಗುಂಡಂ ಥರ್ಮಲ್ ಪವರ್ ಸ್ಟೇಷನ್‌ನಿಂದ ಕರ್ನಾಟಕದ ಪಾಲು 16%, ಕೇರಳದ ಪಾಲು 11% ಎಂದು ಹೇಳಿದಿರಿ, ಉಳಿದ ಪಾಲನ್ನು ಪಡೆಯುವುದಕ್ಕೆ ನೀವೇನಾದರೂ ಪ್ರಯತ್ನ ಮಾಡಿದ್ದೀರಾ ಆ ವಿದ್ಯುತ್‌ಗೆ ಎಷ್ಟು ದರ ಆ ವಿದ್ಯುತ್ ಯಾವಾಗ ಬರುತ್ತದೆ. ಈ ಬಾಬ್ತು ರಾಜ್ಯ ತಾನೇನಾದರೂ ಆಂಧ್ರ, ಕೇರಳ, ಮಹಾರಾಷ್ಟ್ರಕ್ಕೆ ಬಾಕಿ ಕೊಡಬೇಕೇ ಇದರಿಂದ ಎಷ್ಟು ಮೇಗಾವ್ಯಾಟ್ ವಿದ್ಯುತ್ ರಾಜ್ಯಕ್ಕೆ ದೊರಕುತ್ತದೆ. [37]

ಕೆ.ಎನ್ ನಾಗೇಗೌಡರು ರಾಜ್ಯ ಹಾಗೂ ರಾಷ್ಟ್ರದಲ್ಲೆ ಹೆಸರು ಪಡೆಯಲು ಕಾರಣವಾದ ಎನ್.ಜಿ.ಇ.ಎಫ್ ಕಾರ್ಖಾನೆಯ ನಷ್ಟ ಮತ್ತು ದುರಾಡಳಿತದ ಬಗ್ಗೆ ದಿನಾಂಕ: 30/08/1985 ರಲ್ಲಿ 300ನೇ ನಿಯಮದ ಪ್ರಕಾರ ಸದನದಲ್ಲಿ ಪ್ರಸ್ತಾಪಿಸಿದ್ದರು. ಎನ್.ಜಿ.ಇ.ಎಫ್ ಕಾರ್ಖಾನೆ 1962 ರಲ್ಲಿ ಸ್ಥಾಪನೆಯಾಯಿತು. 50 ಎಕರೆ ಜಮೀನು ಎಲ್ಲಾ ಆಸ್ತಿಯ ಒಟ್ಟಾರೆ 60–70 ಕೋಟಿ ಇದ್ದು ಇದರ ಮೇಲೆ 14 ಕೋಟಿ ಸಾಲ ಇದೆ. 20–22 ವರ್ಷಗಳು ಕಾರ್ಖಾನೆ ನಡೆದ ರೀತಿ, 2–3 ವರ್ಷಗಳಿಂದ ನಡೆಯುತ್ತಿರುವ ರೀತಿಯು ಬಗ್ಗೆ ತಿಳಿಸಿದ್ದರಲ್ಲದೇ 1981–82 ರಲ್ಲಿ ಲಾಭ 3 ಕೋಟಿ 71 ಲಕ್ಷ, 1982–83 ರಲ್ಲಿ 7 ಕೋಟಿ, 1983– 1984 ರಲ್ಲಿ 3 ಕೋಟಿ 65 ಲಕ್ಷ, ಪ್ರಸ್ತುತ ಲಾಭವು 70 ಲಕ್ಷಕ್ಕೆ ಇಳಿದಿದೆ. ಅಲ್ಲದೇ ಮ್ಯಾನೇಜಿಂಗ್ ಡೈರೆಕ್ಟರ್‌ಗಳ ಕಾಲದಲ್ಲಿ ವಹಿವಾಟುಗಳು, ಆಡಳಿತ ಮಂಡಳಿಯಲ್ಲಿರುವವರ ಬಗ್ಗೆ ತಿಳಿಸಿದ್ದಲ್ಲದೇ ಸಾರ್ವಜನಿಕ ಉದ್ದಿಮೆಗಳ ಬಗ್ಗೆ, ಅರ್ಜುನ್‌ಸೇನ್ ಗುಪ್ತರ ವರದಿ ಬಗ್ಗೆ ಗಮನ ಸೆಳೆದರು. ಅಲ್ಲದೇ ಪಕ್ಕದಲ್ಲಿ ಕಿರ್ಲೋಸ್ಕರ್ ಹಾಗೂ ಎನ್.ಜಿ.ಇ.ಎಫ್ ಬಗ್ಗೆ ತೌಲನಿಕ ಚರ್ಚೆ ಮಾಡಿದ್ದರು.

ಎನ್.ಜಿ.ಇ.ಎಫ್ 9 ಕೋಟಿ ಬಂಡವಾಳದೊಂದಿಗೆ ಪ್ರಾರಂಭವಾದರೇ, ಕಿರ್ಲೋಸ್ಕರ್ 7 ಕೋಟಿ ಬಂಡವಾಳದೊಂದಿಗೆ ಆರಂಭವಾಯಿತು. ಎನ್.ಜಿ.ಇ.ಎಫ್ ನಲ್ಲಿ 7,216 ಜನ ನೌಕರರಿದ್ದರೆ. ಕಿರ್ಲೋಸ್ಕರ್ ನಲ್ಲಿ 3,500 ಜನ ನೌಕರರಿದ್ದರು. ಕಿರ್ಲೋಸ್ಕರ್ ಕಂಪನಿ 1981–82 ರಲ್ಲಿ 9 ಕೋಟಿ ರೂ, 1982–1983 ರಲ್ಲಿ 5.49 ಕೋಟಿ, 1984–85 ರಲ್ಲಿ 16 ಕೋಟಿ ಲಾಭಗಳಿಸಿದೆ. ಕಿರ್ಲೋಸ್ಕರ್‌ನ 3 ವರ್ಷದ ಸಂಪಾದನೆ 16 ಕೋಟಿ ಆಗಿದ್ದು, ಎನ್.ಜಿ.ಇ.ಎಫ್ ನ ಸಂಪಾದನೆ 3 ವರ್ಷದಲ್ಲಿ 1.50 ಕೋಟಿ ಮಾತ್ರ.

ಉಷಾ ಕಂಪ್ಯೂಟರ್ಸ್‌ನಿಂದ 50 ಲಕ್ಷ ರೂಪಾಯಿ ಖರ್ಚು ಮಾಡಿ ಕಂಪ್ಯೂಟರ್ ಕೊಂಡು ಅದರ ಪ್ರಯೋಜನದ ಬಗ್ಗೆ ಗಮನಸೆಳೆದಿದ್ದರು. ಸುಜಾತ ಅಂಡ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಬೇರೆ ದೇಶಗಳಿಂದ ಯಂತ್ರಗಳನ್ನು ತರಿಸಿಕೊಳ್ಳಲು ಕ್ಲಿಯರಿಂಗ್ ಏಜೆಂಟ್ ಆಗಿದ್ದು 35 ಲಕ್ಷ ರೂಪಾಯಿ ಬಿಲ್ಲನ್ನು ಡಬಲ್ ಮಾಡಿ ಸರ್ಕಾರಕ್ಕೆ ಮೋಸಮಾಡಿದೆ. 1981 ರಲ್ಲಿ ಕಲ್ಕತ್ತಾದಿಂದ ಬರ್ಗರ್ ಪೆಯಿಂಟ್‌ಗೆ 10 ಲಕ್ಷರೂ ಖರ್ಚುಮಾಡಿ ಖರೀದಿಸಿದ್ದು. ರೈತರ ಮೋಟಾರ್‌ಗಳನ್ನು ಎನ್.ಜಿ.ಇ.ಎಫ್ ನಲ್ಲಿ ರಿಪೇರಿಗಾಗಿ ತೆಗೆದುಕೊಂಡು ಹೋದಾಗ ರಿಪೇರಿ ಮಾಡಿಸಲು 30 ಬೇನಾಮಿ ಹೆಸರಿನ ವರ್ಕ್‌ಸಾಪ್‌ಗಳಿಗೆ ತೆಗೆದುಕೊಂಡು ಹೋಗಿ ಕೆಲಸ ಮಾಡಿಸಿರುವುದರ ಬಗ್ಗೆ ತಿಳಿಸಿದರು. ಹೀಗೆ ಈ ಹಗರಣವನ್ನೆ ಬಯಲಿಗೆಳೆದು ರಾಮಕೃಷ್ಣ ಹೆಗ್ಗಡೆ ಸರ್ಕಾರದ ವರ್ಚಸ್ಸು ಕಡಿಮೆಯಾಗಲು ಕಾರಣರಾದರು. ಅಲ್ಲದೇ ಸದನದಲ್ಲಿ ಬಾಟ್ಲಿಂಗ್ ಮತ್ತು ರೇವುಜಿತ್ ಹಗರಣಗಳನ್ನು ಬೆಳಕಿಗೆ ತಂದು ಸರ್ಕಾರ ಬೀಳಲು ಕಾರಣರಾದರು.[38]

## ಕಿರುಗಾವಲು ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಕೆ.ಎನ್.ನಾಗೇಗೌಡರು

1994–1999 ರಲ್ಲಿ ಕಿರುಗಾವಲು ವಿಧಾನಸಭಾ ಕ್ಷೇತ್ರದಿಂದ ಜನತಾದಳ ಶಾಸಕರಾಗಿ ಆಯ್ಕೆಯಾಗಿ ವಿಧಾನ ಸಭೆ ಪ್ರವೇಶಿಸಿದ್ದ ನಾಗೇಗೌಡರು 1952 ರಿಂದ 1994 ರವರೆಗೆ ಕಿರುಗಾವಲು ಕ್ಷೇತ್ರದಲ್ಲಿ ಏನು ಅಭಿವೃದ್ಧಿ ಆಗಿತ್ತು ಅದಕ್ಕಿಂತ ಎರಡು ಪಟ್ಟು ಅಭಿವೃದ್ಧಿ ಕಾರ್ಯವನ್ನು 1994–99 ರ ಅವಧಿಯಲ್ಲಿ ನೂರಾರು ಕೋಟಿ ರೂಪಾಯಿಗಳಲ್ಲಿ ಯೋಜನೆಗಳನ್ನು ಕೈಗೊಂಡರು. ಕೆ.ಆರ್.ಎಸ್.ಆಧುನೀಕರಣದ ಅಡಿಯಲ್ಲಿ ಕಿರುಗಾವಲು ವಿಧಾನ ಸಭಾ ಕ್ಷೇತ್ರದ ಕೈಗೊಂಡ ಅಭಿವೃದ್ಧಿ ಕಾರ್ಯಗಳೆಂದರೆ 55 ಕಿರುತೊರೆಗಳನ್ನು ಪುನರ್ ನಿರ್ಮಾಣ ಮಾಡಲಾಯಿತು. ಮುಖ್ಯ ನಾಲೆಗಳಲ್ಲಿ ಹೂಳು ಮತ್ತು ನಾಲೆಯ ಸುತ್ತಲಿನ ಜಂಗಲೆ ತೆಗೆಯಲಾಯಿತು. ಹೆಬ್ಬಕವಾಡಿ, ನಿಡಘಟ್ಟ, ಹೆಬ್ಬಳ್ಳ, ಮತ್ತು ಇತರೆ ಉಪ ಸಾಂದ್ರತ ನಾಲೆಗಳ ಸ್ವಚ್ಛತೆ ನಿರ್ಮಾಣ ಮತ್ತು ಅಭಿವೃದ್ಧಿಯನ್ನು ನಿಡಘಟ್ಟ ಮತ್ತು ಹೆಬ್ಬಕವಾಡಿ ಮುಖ್ಯ ರೆಗ್ಯೂಲೇಟರ್ ರಕ್ಷಣಾ ಕಾಮಗಾರಿಯನ್ನು ನಡೆಸಿದರು.[39]

ಕೆ.ಎನ್.ನಾಗೇಗೌಡರು ಕಿರುಗಾವಲು ಕ್ಷೇತ್ರದ, ದುಗ್ಗನಹಳ್ಳಿ, ತಡಗವಾಡಿ, ಹಂಚಿಪುರ, ಗುಡಿಗೆರೆ, ಕನ್ನಲಿ, ಬಸವನಪುರ, ಹೆಬ್ಬಳ್ಳಚನ್ನಯ್ಯ ನಾಲೆ ಸಂಸೆಟ್ಟಿಪುರ, ಕಲ್ಕುಣಿ, ಮಿಕ್ಕೆರೆ, ಇತರ ಪ್ರದೇಶದ ಪಿಕಪ್ ನಾಲೆಗಳ ಪುನರ್ ನಿರ್ಮಾಣ ಪುನಶ್ಚೇತನ ಅಭಿವೃದ್ಧಿ ಕಾಮಗಾರಿಗಳನ್ನು ಕೋಟ್ಯಾಂತರ ರೂಪಾಯಿಗಳಲ್ಲಿ ಕೈಗೊಂಡರು ಮಳವಳ್ಳಿಕೆರೆ, ಯಲ್ಲದಹಳ್ಳಿ, ಕಾಡುಕೊತ್ತನಹಳ್ಳಿ, ಸಬ್ಬನಹಳ್ಳಿ, ಚಿಕ್ಕಮುಲಗೂಡು, ತೊರೆಬೊಮ್ಮನಹಳ್ಳಿ, ಸುಜ್ಜಲೂರು, ಮುಂತಾದ ಕೆರೆಗಳ ಹೂಳನ್ನು ತೆಗೆಸಿ ಅಭಿವೃದ್ಧಿ ಹಾಗೂ ರಕ್ಷಣಾ ಕಾಮಗಾರಿಗಳನ್ನು ಕೈಗೊಂಡು ಕೆರೆಗಳಿಗೆ ಕಾಯಕಲ್ಪ ನೀಡಿ ಅಲ್ಲದೆ ಪ್ರಸಿದ್ಧವಾದ ಸೂಳೆಕೆರೆಯ ಸಂರಕ್ಷಣೆಯಲ್ಲಿ ಕೆ.ಎನ್.ನಾಗೇಗೌಡರ ಕೊಡುಗೆ ಅಪಾರವಾದುದ್ದು, ನಾಲಾ ಹಳೆಯ ಸೇತುವೆಗಳ ಬದಲಾಗಿ ಹೊಸ ಸೇತುವೆಗಳನ್ನು ಹಾಗೂ ನಾಲಾ ಏರಿ ರಸ್ತೆಗಳನ್ನು ನಿರ್ಮಿಸಿದರು. ಕೆ.ಎನ್.ನಾಗೇಗೌಡರು ಕಿರುಗಾವಲು ಕ್ಷೇತ್ರದ ವ್ಯಾಪ್ತಿಯಲ್ಲಿ ಹಲವಾರು ಏತ ನೀರಾವರಿ ಯೋಜನೆಗಳನ್ನು ಕೈಗೊಂಡರು ಅವುಗಳೆಂದರೆ ನಂಜಪುರ ಏತ ನೀರಾವರಿ ಯೋಜನೆ, ಮುಡೀನಹಳ್ಳಿ, ಕಾಗೇಪುರ, ಕೆ.ಪಿ.ದೊಡ್ಡಿ, ಕೆ.ಬೆಳ್ಳೂರು, ಚಿಕ್ಕರಸಿನಕೆರೆ, ಹುಲಿಕೆರೆ, ಅರೆತಿಪ್ಪೂರು ಏತ ನೀರಾವರಿ ಯೋಜನೆಗಳನ್ನು ಕೈಗೊಂಡರು.

ಕಿರುಗಾವಲು ಕ್ಷೇತ್ರಕ್ಕೆ ಹೊಸದಾಗಿ ಶಾಲೆಗಳು ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಿಸಿದರು. ಪೀಠೋಪಕರಣಗಳು, ಆಟೋಪಕರಣಗಳು, ಬೋಧನ ಸಾಮಾಗ್ರಿಗಳನ್ನು ಗ್ರಂಥಲಾಯಕ್ಕೆ ಪುಸ್ತಕಗಳನ್ನು ನೀಡಿದರು. ಅಲ್ಲದೆ ಶಾಲೆಗಳಲ್ಲಿ ಕುಡಿಯುವ ನೀರಿನ ಸೌಲಭ್ಯಗಳುಮ ಶೌಚಾಲಯಗಳು, ಕೊಠಡಿಗಳು ಕಾಂಪೌಂಡ್ ನಿರ್ಮಾಣಗಳನ್ನು ಮಾಡಿಸಿದರು. ಹಲವು ಸಿ.ಆರ್.ಸಿ ಕೇಂದ್ರಗಳನ್ನು ಮಂಜೂರು

ಮಾಡಿಸಿದರು. ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಿ ಕಟ್ಟಡಗಳನ್ನು ನಿರ್ಮಿಸಿದರು. ಅಲ್ಲದೆ ಗ್ರಾಮೀಣಾ ಶಾಲಾ ವಿಜ್ಞಾನಕೇಂದ್ರಗಳನ್ನು ಒದಗಿಸಿದರು. ಪ್ರೌಢಶಾಲೆ ಹಾಗೂ ಕಿರಿಯ ಶಾಲೆಗಳ ಮಂಜೂರು ಮಾಡಿಸಿದರು. ಕೆ.ಎಂ.ದೊಡ್ಡಿಯಲ್ಲಿ ಸರ್ಕಾರಿ ಐ.ಟಿ.ಐ ಕಾಲೇಜನ್ನು ಸ್ಥಾಪಿಸಿದರು. ಕ್ಷೇತ್ರದಲ್ಲಿ ಹಿಂದುಳಿದವರ್ಗಗಳ ಅಭಿವೃದ್ಧಿ ಹಾಗೂ ಸಾಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕೆ.ಎಂ.ದೊಡ್ಡಿ, ಅಣ್ಣೂರು, ಕಿರುಗಾವಲು, ಹಿಟ್ಟನಹಳ್ಳಿಕೊಪ್ಪಲು, ಮೊದಲಾದವು ಕಡೆ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು. ಹಲವು ಗ್ರಾಮಗಳಿಗೆ ಗ್ರಂಥಾಲಯಗಳನ್ನು ಮಂಜೂರು ಮಾಡಿಸಿದರು. ಕಿರುಗಾವಲು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮೀನುಗಾರಿಕೆ ಇಲಾಖೆಯ ಮೂಲಕ ಮತ್ಸ ಕೊಳೆವೆಗಳ ನಿರ್ಮಾಣ ಮತ್ತು ಮೀನು ಮರಿಗಳ ಉತ್ಪಾದನೆಗೆ ಖಾಸಗಿಯವರಿಗೆ ದನಸಹಾಯ ಮಾಡಿದರು. ವೃತ್ತಿ ನಿರತ ಮೀನುಗಾರರಿಗೆ ಬಲೆ ಮತ್ತು ಹರಿಗೋಲನ್ನು ಸಹಾಯದನ ರೂಪದಲ್ಲಿ ವಿತರಣೆ ಮಾಡಿದ್ದಲ್ಲದೆ, ವಸತಿ ರೈತ ಮೀನುಗಾರರಿಗೆ ಕ್ಷೇತ್ರದಲ್ಲಿ 150 ಮನೆಗಳನ್ನು ಮಂಜೂರು ಮಾಡಿಸಿದರು. ಪರಿಶಿಷ್ಟಜಾತಿಯವರಿಗೆ ಮೀನುಗಾರಿಕೆ ಕೈಗೊಳ್ಳಲು ಬೈಸಿಕಲ್, ನೈಲಾನ್ ಬಲೆ ಮತ್ತು ಹರಿಗೋಲನ್ನು ನೀಡಿದರು.[40]

ಕೆ.ಎನ್.ನಾಗೇಗೌಡರು ಕ್ಷೇತ್ರದಲ್ಲಿ ಪಶು ಆಸ್ಪತ್ರೆ ಚಿಕಿತ್ಸಾಲಯಗಳನ್ನು ದುರಸ್ಥಿ ಮತ್ತು ನಿರ್ಮಾಣ ಮಾಡಿಸಿದರು ಕ್ಷೇತ್ರದಲ್ಲಿ ಗ್ರಾಮಗಳಿಗೆ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ ಪುನಶ್ಚೇತನ ಯೋಜನೆ ಕಿರು ನೀರು ಸರಬರಾಜು ಯೋಜನೆಗಳ ಮೂಲಕ ಜನರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಿದರು. ಅಲ್ಲದೆ ವಿಶ್ವಬ್ಯಾಂಕ್ ನೆರವಿನ ಗ್ರಾಮೀಣಾ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಗೆ ಹಲವು ಗ್ರಾಮಗಳನ್ನು ಒಳಪಡಿಸಿದರು. ನಬಾರ್ಡ್ ಯೋಜನೆ ಮತ್ತು ರಸ್ತೆಗಳು ಹಾಗೂ ಸೇತುವೆಗಳನ್ನು ನಿರ್ಮಾಣ ಮಾಡಿದ್ದರು ಅಲ್ಲದೆ ಲೋಕೋಯೋಗಿ ಇಲಾಖೆ, ಎ.ಪಿ.ಎಂ.ಸಿ, ಎಂ.ಎಲ್.ಎ ವಿಶೇಷ ಅದುನಾನ, ಹೆಗ್ಗೋಡ ಕಾಮಗಾರಿಗಳು ಮುಂತಾದ ಯೋಜನೆಗಳ ಮೂಲಕ ಕಿರುಗಾವಲು ವಿಧಾನ ಸಭಾ ಕ್ಷೇತ್ರಗಳ ರಸ್ತೆಗಳ ಅಭಿವೃದ್ದಿಯನ್ನು ಕೈಗೊಂಡರು.

ಕೆ.ಎನ್.ನಾಗೇಗೌಡರು ಆಶ್ರಯ, ಇಂದಿರಾ ಆವಾಜ್, ಅಂಬೇಡ್ಕರ್ ಯೋಜನೆಗಳ ಮೂಲಕ 2400 ಮನೆಗಳನ್ನು ಕ್ಷೇತ್ರದ ಜನತೆಗೆ ಹಂಚಿಕೆ ಮಾಡಿದರು ಕ್ಷೇತ್ರದಲ್ಲಿ 160 ಬೋರ್‌ವೆಲ್ (ಕೈಪಂಪು)ಗಳನ್ನು ಕೊರೆಸಿದರು. ಆರಾಧನಾ ಯೋಜನೆಗಳ ಅಡಿಯಲ್ಲಿ ಹಲವು ದೇವಾಲಯಗಳ ಜೀರ್ಣೋದ್ದಾರ, ದುರಸ್ಥಿ ನಿರ್ಮಾಣ ಕೈಗೊಂಡರು ಸಮುದಾಯ ಭವನಗಳು ಬಸ್ ಶೆಲ್ಟರ್‌ಗಳನ್ನು ನಿರ್ಮಿಸಿದರು. ಕ್ಷೇತ್ರದಲ್ಲಿ ಹಲವು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 2 ಆಯುರ್ವೇದ ಆಸ್ಪತ್ರೆಗಳನ್ನು ಸ್ಥಾಪಿಸಿದರು. ಕಿರುಗಾವಲು ಹಾಗೂ ಕೆ.ಎಂ.ದೊಡ್ಡಿ

ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲಾಯಿತು. ಕಿರುಗಾವಲಿನಲ್ಲಿ ಹೊಸ ಪೋಲೀಸ್ ಠಾಣೆ ಮತ್ತು ಕೆ.ಎಂ.ದೊಡ್ಡಿಗೆ ಹೊಸ ಅಗ್ನಿ ಶಾಮಕ ಠಾಣೆಯನ್ನು ಮಂಜೂರು ಮಾಡಿಸಿದರು. ಅನೇಕ ಗ್ರಾಮಗಳಲ್ಲಿ ಸ್ಮಶಾನ ಜಮೀನುಗಳನ್ನು ಕಾಯ್ದಿಟ್ಟು ಅವುಗಳ ಅಭಿವೃದ್ಧಿಯನ್ನು ಕೈಗೊಂಡರು. ಗ್ರಾಮೀಣ ಯುವಕರಿಗೆ ಹಲವು ಗ್ರಾಮಗಳಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಿದರು.

ಹೀಗೆ ಕೆ.ಎನ್.ನಾಗೇಗೌಡರು ಕಿರುಗಾವಲು ವಿಧಾನ ಸಭಾ ಕ್ಷೇತ್ರದ ಶಾಸಕರಾಗಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿ ಕೈಗೊಂಡರು.

## ಪಶುಸಂಗೋಪನಾ ಸಚಿವರಾಗಿ ಕೆ.ಎನ್.ನಾಗೇಗೌಡರ ಕೊಡುಗೆಗಳು [1992–94]

ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿ ವಿಧಾನ ಪರಿಷತ್ ಸದಸ್ಯರಾಗಿ ಕಾಂಗ್ರೆಸ್ ಪಕ್ಷದ ಬೆಳವಣಿಗೆಗೆ ಕಾರಣರಾಗಿದ್ದ ನಾಗೇಗೌಡರ ಸಾಮರ್ಥ್ಯವನ್ನು ಗುರುತಿಸಿ, ಸಚಿವರನ್ನಾಗಿ ಮಾಡಿಕೊಳ್ಳಲಾಯಿತು. 1992 ರಲ್ಲಿ ನಾಗೇಗೌಡರಿಗೆ ವೀರಪ್ಪಮೊಯ್ಲಿಯವರು ಪಶು ಸಂಗೋಪನಾ ಮತ್ತು ಪಶುವೈದ್ಯ ಖಾತೆಯನ್ನು ನೀಡಿದ್ದರು. ಈ ಖಾತೆಯ ಬಗ್ಗೆ ಅಸಮಧಾನಗೊಂಡಿದ್ದಾಗ ಪತ್ನಿ ಸಮಾಧಾನ ಪಡಿಸಿ ಗೋಮಾತೆ, ಮೂಕ ಪ್ರಾಣಿಗಳನ್ನು ರಕ್ಷಿಸುವ ಪವಿತ್ರ ಖಾತೆ ಇದು ನಿಮ್ಮ ಶಕ್ತಿ ಸಾಮರ್ಥ್ಯ, ವ್ಯಕ್ತಿತ್ವವನ್ನು ತೋರುವ ಸುಸಂಧರ್ಭ ಎಂದು ಧೈರ್ಯ ತುಂಬಿದರು.[41] ರಾಜ್ಯಪಾಲರಾದ ಖುರ್ಷಿದ್ ಆಲಂಖಾನ್ ರವರಿಂದ ಪ್ರಮಾಣ ವಚನ ಸ್ವೀಕರಿಸಿದರು. ನಂತರ ಪಶುಸಂಗೋಪನಾ ಇಲಾಖೆಯ ಹಿರಿಯ ಅಧಿಕಾರಿಗಳೆಲ್ಲರ ಸಭೆ ಕರೆದು ವಿಶ್ವಾಸಕ್ಕೆ ತೆಗೆದುಕೊಂಡು, ಇಲಾಖೆಯಿಂದ ಸಾರ್ವಜನಿಕರಿಗೆ ಆಗಬೇಕಾದ ಅನುಕೂಲಕ್ಕಾಗಿ ಕಾರ್ಯಯೋಜನೆ ರೂಪಿಸಿ ಅನುಷ್ಠಾನಕ್ಕೆ ತರುವಲ್ಲಿ ಪ್ರಯತ್ನ ಮಾಡುವುದಾಗಿ ಭರವಸೆ ಇತ್ತರು.

ಇವರ ರಚನಾತ್ಮಕ ಕಾರ್ಯಗಳಿಂದಾಗಿಯೇ ಪಶುಸಂಗೋಪನಾ ಇಲಾಖೆಗೆ ಗೌರವ ಬಂದಿತ್ತು. ಇಲಾಖೆಗೆ ಹೊಸ ಕಾಯಕಲ್ಪ ನೀಡಿದ್ದರು. ನಾಗೇಗೌಡರು ಇಲಾಖೆಯ ಅಧಿಕಾರಿಗಳೊಂದಿಗೆ ಸತತವಾಗಿ 2 ತಿಂಗಳುಗಳ ಕಾಲ ರಾಜ್ಯ ಪ್ರವಾಸ ಮಾಡಿದರು. ಇಲಾಖೆಯ ಬೇಕು – ಬೇಡಗಳು ಹಾಗೂ ರೈತಾಪಿ ವರ್ಗದ ಸಮಸ್ಯೆಗಳನ್ನು ಅರ್ಥೈಸಿಕೊಂಡು ಹತ್ತಾರು ಯೋಜನೆಗಳಿಗೆ ಹೆಚ್ಚುವರಿ ಬಜೆಟ್ ತರಿಸಿಕೊಳ್ಳಲು ಲೆಕ್ಕಾಚಾರ ಹಾಕಿದರು. ರೈತನ ಮಗನಾಗಿ ನಾಗೇಗೌಡರು ಕೃಷಿಕರ ಬದುಕಿನ ಜೀವನಾಡಿ ಪಶುಸಂಪತ್ತು. ಇದು ಗ್ರಾಮೀಣ ಮಕ್ಕಳ ಆರ್ಥಿಕ ಪರಿಸ್ಥಿತಿ ಸುಧಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಎಂಬುದಾಗಿ ನಂಬಿದ್ದರು.

ನಾಗೇಗೌಡರು ರಾಜ್ಯದಾದ್ಯಂತ 700 ಹೊಸ ಪಶುಚಿಕಿತ್ಸಾಲಯ ಕೇಂದ್ರಗಳನ್ನು ಸ್ಥಾಪಿಸಿದ್ದರು. ಇದರಲ್ಲಿ 500 ಕ್ಕೂ ಹೆಚ್ಚು ಗ್ರಾಮೀಣ ಪ್ರದೇಶದಲ್ಲಿ

ತೆರೆದಿದ್ದರು. 200 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಉನ್ನತ ದರ್ಜೆಗೆ ಏರಿಸಲಾಯಿತು. ಇದರಿಂದ ಗ್ರಾಮೀಣ ರೈತರ ಜಾನುವಾರುಗಳಿಗೆ ಪದವೀಧರ ಪಶುವೈದ್ಯರ ಸೇವೆ ದೊರಕುವಂತಾಯಿತು. ರಾಜ್ಯದ ಆಯ್ದ 20 ಸ್ಥಳಗಳಲ್ಲಿ ಪಶು ಆಸ್ಪತ್ರೆಗಳನ್ನು "ಪಾಲಿಕ್ಲಿನಿಕ್" ಗಳಾಗಿ ಮೇಲ್ದರ್ಜೆಗೇರಿಸಿ ಆಧುನಿಕ ಉಪಕರಣಗಳನ್ನು ಆಸ್ಪತ್ರೆಗಳಿಗೆ ಒದಗಿಸಲಾಯಿತು. ಜಾನುವಾರುಗಳಿಗೆ ಉಚಿತ ಚಿಕಿತ್ಸೆ ಮತ್ತು ಔಷಧಿ ವಿತರಣೆಯ ಆದೇಶ ಹೊರಬಿತ್ತು. ಇವರ ಕಾಲದಲ್ಲಿ ಪಶುವೈದ್ಯ ವಿಜ್ಞಾನ ಪದವಿ ಪಡೆದ ವೈದ್ಯರ ನೇಮಕಾತಿಯಾಯಿತು.

ಕರ್ನಾಟಕದಾದ್ಯಂತ 10 ಮಂದಿ ಸಹಾಯಕ ನಿರ್ದೇಶಕರು, 250 ಮಂದಿ ಪಶು ವೈದ್ಯಾಧಿಕಾರಿಗಳು, 10 ಮಂದಿ ಪಶು ವೈದ್ಯಕೀಯ ಮೇಲ್ವಿಚಾರಕರು, 500 ಮಂದಿ ಹಿರಿಯ ಪಶು ವೈದ್ಯಕೀಯ ಪರೀಕ್ಷಕರು, 500 ಮಂದಿ ಸಹಾಯಕರು ಹಾಗೂ 700 ಮಂದಿ 'ಡಿ' ಗ್ರೂಪ್ ನೌಕರರನ್ನು ನೇಮಕ ಮಾಡಕೊಳ್ಳಲಾಯಿತು.[42] ಅಲ್ಲದೇ ಪಶು ಸಂಗೋಪನಾ ಇಲಾಖೆಯ ಅವಶ್ಯಕತೆಗಳನ್ನು ಮನಗಂಡು ಗುತ್ತಿಗೆ ಆಧಾರದ ಮೇಲೂ ಸಹ ನೂರಾರು ಪಶು ವೈದ್ಯರನ್ನು ನೇಮಿಸಿಕೊಂಡರು.[43] ಈ ಸಂದರ್ಭ ಎಲ್ಲೆಂದರಲ್ಲಿ ಹಾದಿ ಬೀದಿಗಳಲ್ಲಿ ಆಸ್ಪತ್ರೆಗಳನ್ನು ತೆರೆಯಲಾಯಿತು. ಇವರ ಕಾಲದಲ್ಲಿ ಅವಶ್ಯಕತೆಗಿಂತ ಹೆಚ್ಚು ಪಶು ಔಷಧಿಗಳು ಪೂರೈಕೆಯಾಗಿ ನಂತರ Expired (ಕಾಲ ಮುಗಿದಿದ್ದು) ಕಸದ ರಾಶಿಗೆ ಸುರಿಯಲಾಯಿತು ಎಂದು ಟೀಕೆಗಳು ಇರುವುದನ್ನು ನೋಡಬಹುದು.

ನಾಗೇಗೌಡರು ಬೆಂಗಳೂರಿನ ಪ್ಯಾಲೇಸ್ ಗ್ರೌಂಡ್‌ನಲ್ಲಿ ಕುರಿ ಸಾಕಾಣಿಕಾದಾರರ ಬೃಹತ್ ಸಮಾವೇಶ ಏರ್ಪಡಿಸಿ ಮುಖ್ಯಮಂತ್ರಿಗೆ ಕುರಿಮರಿಯೊಂದನ್ನು ಉಡುಗೊರೆಯಾಗಿ ನೀಡಿದ್ದರು. ವಿದೇಶಗಳ ಗಮನ ಸೆಳೆದಿದ್ದರು. ಹೈನುಗಾರಿಕಾ ಸಮಾವೇಶ ಮತ್ತು ಕುಕ್ಕುಟ ಮೇಳಗಳನ್ನು ನಡೆಸಿ ಆಯಾಯ ಕ್ಷೇತ್ರದಲ್ಲಿನ ಸಮಸ್ಯೆಗಳನ್ನು ಗಮನಕ್ಕೆ ತಂದುಕೊಂಡು ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳುತ್ತಿದ್ದರು. ಪ್ರಾಣಿಜನ್ಯ ಆಹಾರ ನಿಗಮದ ವ್ಯಾಪ್ತಿ ಬೆಂಗಳೂರಿಗೆ ಮಾತ್ರ ಸೀಮಿತವಾಗಿತ್ತು. ನಾಗೇಗೌಡರು ಅದರ ಕಾರ್ಯ ವ್ಯಾಪ್ತಿಯನ್ನು ರಾಜ್ಯಕ್ಕೆ ವಿಸ್ತರಿಸಿ **"ಕರ್ನಾಟಕ ಮಾಂಸ & ಕೋಳಿ ಮಾರಾಟ ನಿಗಮ"** ಎಂದು ನಾಮಕರಣ ಮಾಡಿ ಆಧುನಕ ವಧಾಗಾರಗಳನ್ನು ಸ್ಥಾಪಿಸಲು ಮೈಸೂರುನಲ್ಲಿರುವ ಸಿ.ಎಫ್.ಟಿ.ಆರ್.ಐ ಸಹಯೋಗದೊಂದಿಗೆ ಯೋಜನಾ ವರದಿಗಳನ್ನು ತಯಾರಿಸಿದ್ದರು. ಇದಕ್ಕಾಗಿ ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ, ಗುಲ್ಬರ್ಗ & ಬೆಳಗಾವಿ ಕಾರ್ಪೋರೇಷನ್‌ಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದ್ದರು. ಮಂಡ್ಯ ಜಿಲ್ಲೆಯ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಪಶು ಚಿಕಿತ್ಸಾಲಯಗಳನ್ನು ಮಂಜೂರು ಮಾಡಲಾಯಿತು. ಜಿಲ್ಲಾ ಗೆಜ್ಜಲಗೆರೆಯ ಮಂಡ್ಯ ಜಿಲ್ಲಾ ಹಾಲು ಒಕ್ಕೂಟವು 8 ಕೋಟಿ ರೂಪಾಯಿ ನಷ್ಟದಲ್ಲಿ ನಡೆಯುತ್ತಿತ್ತು. ನಾಗೇಗೌಡರು

ಮನ್‌ಮುಲ್ ಡೈರಿಯ ಹಾಲು ಮಾರಾಟ ವಿಸ್ತರಣೆಯನ್ನು ಹೆಚ್ಚಿಸಲು ತೀರ್ಮಾನಿಸಿ, ಬೆಂಗಳೂರು ಹೊರವಲಯದಲ್ಲಿನ ಅನೇಕ ಬಡಾವಣೆಗಳಿಗೆ ನಂದಿನ ಹಾಲು ಮಾರಾಟದ ವಿಸ್ತರಣೆಗೆ ಅವಕಾಶ ಕಲ್ಪಿಸಿದ್ದರಿಂದ 25 ಸಾವಿರ ಲೀಟರ್ ಮಾರಾಟವಾಗುತ್ತಿದ್ದುದು, ಇಂದು 1 ಲಕ್ಷ ಲೀಟರ್ ಮಾರಾಟವಾಗುತ್ತಿದೆ. ಅಂದು ಬೆಂಗಳೂರು ನಗರದ ಹೊರವಲಯದಲ್ಲಿದ್ದ ಹಾಲು ಮಾರಾಟ ಕೇಂದ್ರಗಳು ಇಂದು ನಗರದ ಮಧ್ಯಭಾಗದಲ್ಲಿವೆ. ಮನ್‌ಮುಲ್‌ನ ಇಂದು ತಿರುಪತಿಯ ಲಡ್ಡು ತಯಾರಿಕೆಗೆ ತುಪ್ಪ ಹಾಗೂ ಇತರ ಹೊರ ರಾಷ್ಟ್ರಗಳಿಗೆ ಹಾಲಿನ ಉತ್ಪನ್ನಗಳನ್ನು ರಫ್ತು ಮಾಡುತ್ತಿದೆ. ಅಲ್ಲದೆ ನಷ್ಟದಲ್ಲಿ ತುಮಕೂರು ಡೈರಿ ಹಾಗೂ ಇತರ ಜಿಲ್ಲೆಯ ಡೈರಿಗಳಿಗೆ ಪುನಃಶ್ಚೇತನ ನೀಡಿದ ಕೀರ್ತಿ ನಾಗೇಗೌಡರದ್ದು.

ನಾಗೇಗೌಡರು ಮಂತ್ರಿಯಾಗಿದ್ದಾಗ "ಕರ್ನಾಟಕ ರಾಜ್ಯದಲ್ಲಿ ಕುಕ್ಕುಟ ಉದ್ಯಮ ಅಭಿವೃದ್ಧಿ ಪಡಿಲು & ಖಾಸಗಿಯಾಗಿ ಕೋಳಿ ಫಾರಂ ನಡೆಸುತ್ತಿರುವ ರೈತರನ್ನು ಸಂಘಟಿಸಿ ಕುಕ್ಕುಟ ಸಹಾಕಾರ ಸಂಘ ರಚಿಸಲು ಯೋಜಿಸಿದ್ದರು ಆದರೆ ಕೈಗೂಡಲಿಲ್ಲ. ಇದು 1995 ರಲ್ಲಿ ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿ ಸ್ಥಾಪನೆಗೊಂಡು ಸಹಸ್ರಾರು ರೈತರು ಸದಸ್ಯತ್ವ ಪಡೆದಿದ್ದಾರೆ. ಸಹಸ್ರಾರು ಸಂಖ್ಯೆ ಮಂಡಳಿಗಳು ಇದರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. 7 ಸಹಕಾರ ಸಂಘಗಳಿಗೆ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ [ಎನ್.ಸಿ.ಡಿ.ಸಿ] ಸಹಯೋಗದಿಂದ 48 ಲಕ್ಷರೂ ಆರ್ಥಿಕ ನೆರವು ದೊರೆತಿದೆ.

ನಾಗೇಗೌಡರು ಕೃಷಿ ಕುಟುಂಬದಿಂದ ಬಂದಂತಹವರು, ಪ್ರಾಥಮಿಕ ಶಾಲೆಯ ಮಕ್ಕಳಿಗೆ ಪೌಷ್ಠಿಕ ಆಹಾರದ ಕೊರತೆ ನೀಗಿಸಲು ಮತ್ತು ಬೆಳೆಯುವ ಮಕ್ಕಳ ದೈಹಿಕ & ಬೌದ್ಧಿಕ ಬೆಳವಣಿಗೆಯ ದೃಷ್ಟಿಯಿಂದ ಮಧ್ಯಾಹ್ನದ ವೇಳೆ ಪ್ರತಿದಿನ ಉಚಿತವಾಗಿ ಹಾಲು ನೀಡುವ ಯೋಜನೆಯನ್ನು ಜಾರಿಗೆ ತಂದು ಮಕ್ಕಳಲ್ಲಿ ಚುರುಕುತನ ಮೂಡುವುದರ ಜೊತೆಗೆ ಹಾಜರಾತಿ ಗಣನೀಯ ಪ್ರಮಾಣದಲ್ಲಿ ಏರುತ್ತದಲ್ಲದೇ ರೈತರಿಗೆ, ಹಾಲಿನ ಡೈರಿಗಳಿಗೆ ಆಗುತ್ತಿದ್ದ ನಷ್ಟವನ್ನು ತಪ್ಪಿಸಿದರು. ಈ ಯೋಜನೆ ರಾಷ್ಟ್ರದ ಗಮನ ಸೆಳೆಯಿತು. ದೇವಸ್ಥಾನದ ಅರ್ಚಕರು ದೇವರಿಗೆ ಹಾಲಿನ ಅಭಿಷೇಕ ಮಾಡಲು ಪರದಾಡುತ್ತಿದ್ದ ದೃಶ್ಯವನ್ನು ಕಂಡಿದ್ದರು. ಗಂಜಿಗೂ ಸಾಲದ ಗೌರವಧನ ಪಡೆದು ನಿತ್ಯ ಪೂಜೆಯ ಕಾರ್ಯ ನಡೆಸುತ್ತಿದ್ದ ಅರ್ಚಕ ವೃಂದ ಹಾಲು ಕೊಂಡು ಅಭಿಷೇಕ ಮಾಡುವುದು ಕಷ್ಟವೆಂದು ತಿಳಿದ ನಾಗೇಗೌಡರು ಮಂತ್ರಿಯಾಗಿದ್ದಾಗ "ದೇಗುಲಗಳಿಗೆ ಗೋಸಂಪತ್ತು" ಎಂಬ ಯೋಜನೆಯನ್ನು ಜಾರಿಗೆ ತಂದು ರಾಜ್ಯದಲ್ಲಿ ನಿತ್ಯ ಪೂಜೆ ಕಾರ್ಯವಿರುವ ದೇಗುಲಗಳಿಗೆ ಸುಪುಷ್ಟ ಹಸುಗಳನ್ನು ದಾನವಾಗಿ ನೀಡಿದ್ದರು.[44]

ಕರ್ನಾಟಕ ರಾಜ್ಯದ ಹಾಲು ಒಕ್ಕೂಟಗಳ ಅಧ್ಯಕ್ಷತೆಯಲ್ಲಿ ಗ್ರಾಮೀಣ ಭಾಗದ ರೈತಾಪಿ ವರ್ಗದಿಂದ ಬಂದಂತವರು, ಇವರು ಹಾಲು ಉತ್ಪಾದನೆಯ ಬಗ್ಗೆ ಅರೆ ಬರೆ ತಿಳುವಳಿಕೆ ಹೊಂದಿದ್ದರು. ಇವರನ್ನು "ಕ್ಷೀರ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯನ್ನು ನೋಡಿ ಅಲ್ಲಿನ ಉನ್ನತ ಅಂಶಗಳನ್ನು ತಿಳಿದು ಅದನ್ನು ನಮ್ಮಲ್ಲೂ ಅಳವಡಿಸಿಕೊಳ್ಳಲಿ" ಎಂಬ ಉದ್ದೇಶದಿಂದ ಕ್ಷೀರ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದ್ದ ಡೆನ್ಮಾರ್ಕ್ ಮತ್ತು ಇತರ ರಾಷ್ಟ್ರಗಳಿಗೆ ಪ್ರವಾಸ ಮಾಡಲು ಕಳುಹಿಸಿಕೊಟ್ಟು ಅವರ ಜ್ಞಾನ ಇಮ್ಮಡಿಯಾಗಲು ಶ್ರಮಿಸಿದರು. ನಾಗೇಗೌಡರು ಇಲಾಖೆಗೆ ಹೊಸ ಕಾಯಕಲ್ಪ ನೀಡಿದ್ದಲ್ಲದೇ ನಿರುದ್ಯೋಗ ನಿವಾರಣೆ, ವಿನೂತನ ಯೋಜನೆ ಮೂಲಕ ಪಶು ಸಂಗೋಪನೆ ಮತ್ತು ಪಶು ವೈದ್ಯ ಇಲಾಖೆಯು ಒಂದು ಪ್ರಮುಖ ಇಲಾಖೆ ಎಂದು ತೋರಿಸಿದ್ದರು.

## ನೀರಾವರಿ ಸಚಿವರಾಗಿ ಕೆ.ಎನ್.ನಾಗೇಗೌಡರು [1996–99]

ಕೆ.ಎನ್ ನಾಗೇಗೌಡರು ಜನತಾ ಪರಿವಾರಕ್ಕೆ ಬಂದ ನಂತರ ಆ ಪಕ್ಷದ ಶಾಸಕರಾಗಿ ಪಕ್ಷಕ್ಕೆ ಅವಿರತ ದುಡಿದರು. ಜೆ.ಹೆಚ್ ಪಟೇಲರು ಮುಖ್ಯಮಂತ್ರಿಯಾಗಿದ್ದಾಗ ನಾಗೇಗೌಡರ ಶಕ್ತಿ ಸಾಮರ್ಥ್ಯದ ಅರಿವಿದ್ದರಿಂದ ಹಾಗೂ ನೀರಾವರಿ ವಿಷಯದಲ್ಲಿ ಹೆಚ್.ಎನ್ ನಂಜೇಗೌಡರ ಗರಡಿಯಲ್ಲಿ ಅಪಾರ ಪರಿಣಿತಿ ಪಡೆದಿದ್ದರು. ಇದನ್ನು ಮನಗಂಡು ಜೆ.ಹೆಚ್. ಪಟೇಲರು ತಮ್ಮ ಸಚಿವ ಸಂಪುಟದಲ್ಲಿ ಬೃಹತ್ ಹಾಗೂ ಮಧ್ಯಮ ನೀರಾವರಿ ಸಚಿವ ಸ್ಥಾನವನ್ನು ನೀಡಿದರು. ಸ್ವತಃ ಸಿವಿಲ್ ಇಂಜಿನಿಯರ್ ಆಗಿದ್ದ ನಾಗೇಗೌಡ ಕರ್ನಾಟಕದ ನೀರಾವರಿ ತಜ್ಞರಲ್ಲೂ ಸಹ ಒಬ್ಬರು. ಬಂಗಾರಪ್ಪ ಸಾರಥ್ಯದಲ್ಲಿ ಕಾವೇರಿ ವಿವಾದದ ಸಮಸ್ಯೆಯನ್ನು ದಿಟ್ಟತನದಿಂದ ಎದುರಿಸಿದ್ದ ವ್ಯಕ್ತಿ ವಿಧಾನಪರಿಷತ್ ಸದಸ್ಯರಾಗಿದ್ದಾಗ 1985 ರಲ್ಲಿ ನಾಗೇಗೌಡರು ರಾಜ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರಿಗೆ ಕೃಷ್ಣರಾಜ ಸಾಗರದ ರಕ್ಷಣೆಯ ದೃಷ್ಟಿಯಿಂದ ಕನ್ನಂಬಾಡಿಯ ಏರಿಯ ಮೇಲಿನ ರಸ್ತೆಗೆ ಬದಲಾಗಿ ವಾಹನ ಸಂಚಾರಿ ರಸ್ತೆಯನ್ನು ನಿರ್ಮಿಸಲು ಕ್ರಮ ಕೈಗೊಳ್ಳಿ ಎಂದರು. ಆದರೆ ಅಂದು ಭರವಸೆಯಾಗಿದ್ದ ಸಲಹೆಯನ್ನು ಅವರು 1996 ರಲ್ಲಿ ನೇರವೇರಿಸಿದರು.

ನೀರಾವರಿ ಸಚಿವರಾದ ನಂತರ ರಾಜ್ಯದ ಎಲ್ಲಾ ಜಲಾಶಯಗಳ ನೇರ ಪರಿಚಯ ಮಾಡಿಕೊಂಡು ಅಗತ್ಯವಾಗಿ ಆಗಬೇಕಾಗಿರುವ ಕೆಲಸಗಳ ಪಟ್ಟಿ, ನೀರಿನ ಸದ್ಬಳಕೆ, ಅಂದಾಜು ವೆಚ್ಚಗಳ ಬಗ್ಗೆ ಸಚಿವ ಸಂಪುಟದ ಮುಂದುವರಿಸಿ ಒಪ್ಪಿಗೆ ಪಡೆಯುತ್ತಿದ್ದರು. ಅತ್ಯಂತ ಕಠಿಣವಾದ ನೀರಾವರಿ ಇಲಾಖೆ ಜವಾಬ್ದಾರಿಯನ್ನು ವಹಿಸಿಕೊಂಡ ನಂತರ ಹಾರಂಗಿ, ಹೇಮಾವತಿ, ಕಾವೇರಿ, ಇಪ್ಪರಗಿ, ದೂದ್‌ಗಂಗಾ, ಮಾರ್ಕಂಡೇಯಾ ತುಂಗಾ ಮೇಲ್ದಂಡೆಯ ಹಾಗೂ ಇನ್ನಿತರ ಎಲ್ಲಾ ನೀರಾವರಿ ಯೋಜನೆಯ ಸಂಪೂರ್ಣ ವಿವರಗಳನ್ನು ಅಧಿಕಾರಿ ಹೇಳುವ ಮೊದಲೆ ಹೇಳಿಬಿಡುತ್ತಿದ್ದರು.

ನಾಗೇಗೌಡರು ನೀರಾವರಿ ಸಚಿವರಾಗಿ ತೆಗೆದುಕೊಂಡ ಐತಿಹಾಸಿಕ ತೀರ್ಮಾನ ಮಂಡ್ಯ ಜಿಲ್ಲೆಯ ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣ, 1970 ರ ದಶಕದಿಂದಲೂ ಸರ್ಕಾರಗಳು ಹೇಳುತ್ತಿದ್ದರೂ ಸಂಪೂರ್ಣವಾಗಿ ಈ ಆಧುನೀಕರಣವನ್ನು ಕೈಗೊಂಡಿರಲಿಲ್ಲ. ಕೃಷ್ಣರಾಜ ಸಾಗರ ಜಲಾಶಯದ ವಿಶ್ವೇಶ್ವರಯ್ಯ ನಾಲೆಯ ಅಚ್ಚುಕಟ್ಟು ಪ್ರದೇಶದಲ್ಲಿ ಮುಖ್ಯನಾಲೆ, ಉಪನಾಲೆ & ವಿತರಣಾ ನಾಲೆ ವ್ಯವಸ್ಥೆ ಒಂದು ರೀತಿ ಜೇಡರ ಬಲೆಯಂತಿವೆ. ಈ ಎಲ್ಲಾ ನಾಲೆಗಳ ಒಟ್ಟು ಉದ್ದ 900 ಕೀ.ಮೀ ಈ ರೀತಿಯ ನಾಲಾ ವ್ಯವಸ್ಥೆ ಇಡೀ ಭಾರತದಲ್ಲಿ ಮೊದಲನೆಯದು ಎಂಬ ಹೆಗ್ಗಳಿಕೆ. ಈ ನಾಲಾ ರೂವಾರಿ ಸರ್.ಎಂ. ವಿಶ್ವೇಶ್ವರಯ್ಯನವರಿಗೆ ಸಲ್ಲುತ್ತದೆ. ಇವರು ಕನ್ನಂಬಾಡಿ ನೀರನ್ನು ಕೊಪ್ಪದ ಮೂಲೆಹಳ್ಳಿ, ಮಳವಳ್ಳಿಯ ಚಂದಹಳ್ಳಿಯವರೆಗೆ ತೆಗೆದುಕೊಂಡು ಹೋಗಬೇಕೆಂದಿದ್ದರು ಆದರೆ ಸಾಧ್ಯವಾಗಲಿಲ್ಲ. ನಾಲೆಯ ಉದ್ದಕ್ಕೆ ಮಣ್ಣು ಸಂಗ್ರಹವಾಗಿ ತೂಬುಗಳು ಹಾಳು ಬಿದ್ದು ನೀರು ಕಾಲುವೆಯ ಏರಿಯ ಮೇಲೆ ಉಕ್ಕಿ ಹರಿದು ವ್ಯರ್ಥವಾಗುತ್ತಿತ್ತು. ಕೊನೆ ಭಾಗಕ್ಕೆ ನೀರು ಕೊಡುವುದೆ ಆಧುನೀಕರಣದ ಮುಖ್ಯ ಉದ್ದೇಶವಾಗಿತ್ತು.

ನಾಲೆಯಲ್ಲಿ ನೀರು ನಿಲ್ಲಿಸುವುದಾಗಿ ರೈತ ಮುಖಂಡರ ಜೊತೆ ಚರ್ಚಿಸಿ ವಿಷಯವನ್ನು ಪತ್ರಿಕೆ ಮತ್ತು ಭಾಷಣಗಳ ಮೂಲಕ ರೈತರಿಗೆ ಮನವರಿಕೆ ಮಾಡಿಕೊಡಲಾಯಿತು. 1997 ರ ಜನವರಿ 20 ರಂದು ನಾಲೆಯಲ್ಲಿ ನೀರು ನಿಲುಗಡೆ ಮಾಡಿ ಆಧುನೀಕರಣ ಕಾಮಗಾರಿಗಳು ತೀವ್ರವಾಗಿ ಆರಂಭವಾಗಿದ್ದವು. ವಿಶ್ವೇಶ್ವರಯ್ಯ ನಾಲೆಯ ಮುಖ್ಯನಾಲೆ, ಉಪನಾಲೆ, ಮತ್ತು ಶಾಖಾ ನಾಲೆಗಳ ಏರಿ ಎತ್ತರಿಸುವುದಕ್ಕಾಗಿ ಅಡ್ಡಮೋರಿ, ತೂಬುಗಳ ರಿಪೇರಿ, ವಾಟರ್ ಸ್ಪ್ರೆಡ್ ಕಾಮಗಾರಿ, ಮುಖ್ಯ ನಾಲೆಯ 27 ಸೇತುವೆಗಳ ದುರಸ್ತಿ, ರೆಗ್ಯುಲೇಟರ್ ಕಂ ಎಸ್ಕೇಟರ್ ನಿರ್ಮಾಣ ಶ್ರೀರಂಗಪಟ್ಟಣ ತಾಲ್ಲೂಕು ಆಲುಗೂಡು ಹತ್ತಿರ 1,275 ಮೀಟರ್ ಉದ್ದದ ಸುರಂಗ ನಾಲೆಯ ನಿರ್ಮಾಣ, ಪಿಕಪ್ ನಾಲೆಗಳ ದುರಸ್ತಿ, ವಿ.ಸಿ ನಾಲೆಯ ಉದ್ದಕ್ಕೂ ಹೂಳೆತ್ತುವುದು, ಪ್ರಮುಖ ಕೆರೆಗಳ ಹೂಳೆತ್ತಿ ನೀರು ಶೇಖರಣೆಯಾಗುವಂತೆ ಮಾಡಿದರು. 350 ಕೋಟಿ ರೂ ವೆಚ್ಚ ಆಧುನೀಕರಣದ ಸಂದರ್ಭದಲ್ಲಿ ಮಂಡ್ಯ ಜಿಲ್ಲೆ ರೈತ ಹಿತರಕ್ಷಣ ಸಮಿತಿಯ ಸಮಕ್ಷಮದಲ್ಲಿ ಆಧುನೀಕರಣಗಳ ಮೇಲುಸ್ತುವಾರಿ ಸಮಿತಿಯನ್ನು ರಚಿಸಿದರು. ವಿ. ಸಿ. ನಾಲೆಯ ನಿರ್ಮಾಣದ ಸಂದರ್ಭದಲ್ಲಿ "0." ಕಿ.ಮೀ ಹತ್ತಿರ ನಾಲೆ, ತೂಬಿನ ಬಾಯಿಗಳಿಂದ ಅತ್ಯಂತ ರಭಸವಾಗಿ ಹೊರಬೀಳುವ ನೀರಿನ ರಭಸವನ್ನು ಕಡಿಮೆ ಆಗುವ ಸಲುವಾಗಿ ದೊಡ್ಡ ಕಲ್ಲು ಬಂಡೆಯನ್ನು ಕಳೆದುಕೊಂಡಂದ್ದಲ್ಲದೇ, ಎರಡು ಕಡೆಯ ರಕ್ಷಣಾ ಗೋಡೆ ಮತ್ತು ಏರಿಯಲ್ಲಿ 25 ರಿಂದ 30 ಅಡಿ ಉದ್ದದ ದೂಗರು ಬಿದ್ದಿದ್ದವು, ಏರಿಯ ಕಡೆಗೆ ಗಮನ ಹರಿಸಿದ ನಾಗೇಗೌಡರು ಒರಿಸ್ಸಾ ಮೂಲದವನಾದ ವಾಮದೇವ್‌ನಾಯಕ್ ಎಂಬ ಗುತ್ತಿಗೆದಾರನಿಗೆ ಹೊಂಡ ಮುಚ್ಚುವ ಕಾಮಗಾರಿಯನ್ನು ವಹಿಸಲಾಯಿತು. ಕಾರ್ಮಿಕರು ಹಗಲಿರುಳು ಎರಡು ಪಾಳಿಯಲ್ಲಿ ಕೆಲಸ ಮಾಡಿದ್ದರು.

ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡುವ ನಿಟ್ಟಿನಲ್ಲಿ ಒಂದು ಹೈಪವರ್ ಸಮಿತಿಯನ್ನು ನೇಮಿಸಿದ್ದರು.

1930 ರಲ್ಲಿ ವಿ.ಸಿ. ನಾಲೆಗೆ ಅಳವಡಿಸಿದ್ದ 3 ಬಾಗಿಲುಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರಲಿಲ್ಲ. ರೋಲರ್ ಕಳಚಿ ಬಿದ್ದಿದ್ದವು ಬಾಗಿಲು ಮುಚ್ಚಿದ್ದರೂ ಸದಾ ಕಾಲ ನೀರು ಹರಿಯುತ್ತಿತ್ತು. ಹೊಸ ಬಾಗಿಲುಗಳನ್ನು ಅಳವಡಿಸಿ ದುರಸ್ತಿ ಮಾಡಿಸಿದ್ದರು ಕೆ.ಆರ್.ಎಸ್ ಸಾಗರದ ನೃತ್ಯ ಕಾರಂಜಿಯನ್ನು ದುರಸ್ತಿ ಮಾಡಿಸಿದರು. ರೈತರು ಎತ್ತು ಎಮ್ಮೆಗಳಿಗೆ ನೀರು ಕುಡಿಸಲು, ಅವುಗಳ ಮೈತೊಳೆಯಲು ಎಲ್ಲೆಂದರಲ್ಲಿ ನಾಲೆಗೆ ಇಳಿಸುತ್ತಿದ್ದರಿಂದ ಏರಿಯ ಮಣ್ಣು ಜಾರುತ್ತಿತ್ತು. ಅಲ್ಲದೇ ಕೊರೆತ ಉಂಟಾಗಿ ಹೆಚ್ಚು ಮಣ್ಣು ನಾಲೆಯೊಳಗೆ ಬೀಳುತ್ತಿತ್ತು. ಜಾನುವಾರುಗಳು ನೀರು ಕುಡಿಯಲು ಇಳಿಯಲು ಇಳಿದಾಣ, ಗ್ರಾಮಗಳ ಮಹಿಳೆಯರು ಬಟ್ಟೆ ಹೊಗೆಯಲು ಮತ್ತು ಪಾತ್ರೆ ತೊಳೆಯಲು ಸೋಪಾನ ಕಟ್ಟೆಗಳನ್ನು ನಾಲೆಯೂದಕ್ಕೂ ನಿರ್ಮಾಣ ಮಾಡಿಸಿದ್ದರು. ಮಂಡ್ಯ ಜಿಲ್ಲೆಯ ಬಹುದೊಡ್ಡ ಕೆರೆ ಸೂಳೆ ಕೆರೆ ಹೂಳೆತ್ತಿಸಿ ಅಭಿವೃದ್ಧಿ ಪಡಿಸಿದರು.

ನಾಗೇಗೌಡರು ಮಂಡ್ಯ ನಗರದ ಅಭಿವೃದ್ಧಿಗಾಗಿ ಕೆರೆಯನ್ನು ಮುಚ್ಚಿಸಿ 280 ಎಕರೆಯನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೂ, 200 ಎಕರೆಯನ್ನು ಗೃಹಮಂಡಳಿಗೂ ನೀಡಿದರು. ನೀರಿನ ಕಾಲುವೆಗಳ ಆಳ – ಅಗಲಗಳ ನಕ್ಷೆ ಸಿದ್ದಪಡಿಸಲು ಅಧಿಕಾರಿಗಳಿಗೆ ಆದೇಶ ನೀಡಿ, 15 ಮೀಟಿಂಗ್‌ಗಳನ್ನು ನಡೆಸಿ, ಎಂತಹ ಪ್ರವಾಹ ಬಂದರೂ ವಸತಿ ಪ್ರದೇಶಕ್ಕೆ ಯಾವುದೇ ಅಪಾಯವಾಗದಂತೆ ಸ್ವತಃ ಸಿವಿಲ್ ಇಂಜಿನಿಯರ್ ಆದ ನಾಗೇಗೌಡರೇ ನಾಲೆಯ ಡಿಜೈನ್ ಮಾಡಿಸಿದ್ದರು. ಇದು ಅವರ ಅನುಭವ ಮತ್ತು ತಾಂತ್ರಿಕ ನೈಪುಣ್ಯತೆಯನ್ನು ಕಂಡ ಎಂತಹವರಿಗೂ ಆಶ್ಚರ್ಯ ಉಂಟುಮಾಡಿತ್ತು.[45]

ಪಾಂಡವಪುರ ತಾಲ್ಲೂಕು ಕನಗನಮರಡಿಯಲ್ಲಿ ನಾಲೆಯ ಗುಣಮಟ್ಟದ ಕುಸಿತದ ಶಂಕೆ ಉಂಟಾಗಿದ್ದರಿಂದ ವಿರೋಧ ಪಕ್ಷದ ನಾಯಕರು, ರೈತ ಸಂಘದವರು, ಶಾಸಕರು ಹೀಗೆ ಎಲ್ಲರೊಂದಿಗಿನ ತಂಡದೊಂದಿಗೆ ನಾಗೇಗೌಡ ದಿನನಿತ್ಯ ನಾಲೆಯನ್ನು ತಪಾಸಣೆ ನಡೆಸಿ ಕಾಮಗಾರಿಯನ್ನು ವೀಕ್ಷಿಸಿದ್ದರು. ಮೈಸೂರು ಸಕ್ಕರೆ ಕಾರ್ಖಾನೆಗೆ ಸಹ ವಿದ್ಯುತ್ ಘಟಕ ಆರಂಭಕ್ಕೆ ಸಚಿವ ಸಂಪುಟದಲ್ಲಿ ಅನುಮೋದನೆ ದೊರಕಿಸಿದರು. ಕೃಷ್ಣ ಮೇಲ್ದಂಡೆ ಯೋಜನೆಯನ್ನು ನಾರಾಯಣಪುರ ಬಲದಂಡೆಯ ಕಾಲುವೆಯ 95 ಕಿ.ಲೋ ಮೀಟರ್ ಉದ್ದದ ಕಾಮಗಾರಿಗಳನ್ನು ಕೃಷ್ಣಭಾಗ್ಯ ಜಲ ನಿಗಮದ ಅನುದಾನದಲ್ಲಿ 1995–96ರಲ್ಲಿ ಕೈಗೊಂಡಿದ್ದರಿಂದ 79.195 ಎಕರೆ ನೀರಾವರಿ ಪ್ರದೇಶವಾಗಿದೆ.

ಕೆ.ಎಸ್.ನಾಗೇಗೌಡರ ಹಣ ಮುಗ್ಗಟ್ಟಿನ ಅನೇಕ ವರ್ಷಗಳಿಂದ ನೆನೆಗುದ್ದಿಗೆ ಬಿದ್ದದಂತಹ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವ ಉದ್ದೇಶದಿಂದ 1996–97ರಲ್ಲಿ ಕೇಂದ್ರ ಸರ್ಕಾರದ ತ್ವರಿತ ನೀರಾವರಿ ಲಾಭ ಕಾರ್ಯಕ್ರಮಗಳ (ಎ.ಐ.ಬಿ.ಪಿ) ಜಾರಿಗೊಳಿಸಿ ರಾಜ್ಯದ 11 ನೀರಾವರಿ ಯೋಜನೆಗಳಾದ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1, ಘಟ್ಟ –3, ಮಲಪ್ರಭ, ಹೀರೆಹಳ್ಳಿ, ಘಟಪ್ರಭ, ಕರಾಂಜಾ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–2, ಮಸ್ಕಿನಾಲಾ, ಭೀಮ ಏತ ನೀರಾವರಿ ಯೋಜನೆ, ವರಾಹಿ, ಗುಡ್ಡದಮಲ್ಲಪುರ ಏತಾ ನೀರಾವರಿ ಯೋಜನೆ ಹಾಗೂ ಗಂಡೋರಿ ನಾಲಾ ಯೋಜನೆಗಳನ್ನು ಎ.ಐ.ಬಿ.ಪಿ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದ ಸಾಲ ಮತ್ತು ನೆರವನ್ನು ಪಡೆದು ಪೂರ್ಣಗೊಳಿಸಿದರು. ಪ್ರಯತ್ನಿಸಿದರು ಅಲ್ಲದೆ ಈ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹಂಚಿಕೆ ಅನುಪಾತ 50:50 ರಷ್ಟರಲ್ಲಿ ತ್ವರಿತ ಕಾಮಗಾರಿಯನ್ನು ಕೈಗೊಂಡರು ಇದರಲ್ಲಿ ವಿಶೇಷ 20 ವರ್ಷಗಳಿಂದ ಪ್ರಗತಿ ಕಾಣದ ಮಸ್ಕಿನಾಲಾ ನೀರಾವರಿ ಯೋಜನೆಯ ಅಣೆಕಟ್ಟು ಮತ್ತು ನಾಲೆಗಳು ತೀವ್ರ ಪ್ರಗತಿ ಸಾಧಿಸಲು ಶ್ರಮಿಸಿದ್ದಾರೆ. ತುಂಗಭದ್ರಾ ಎಡೆದಂಡೆ ಕಾಲುವೆಯಲ್ಲಿ ವ್ಯರ್ಥವಾಗುತ್ತಿದ್ದ ನೀರಿನ ಸೋರಿಕೆಯನ್ನು ತಪ್ಪಿಸಲು ಎಡದಂಡೆ ನಾಲೆಯ ಆಧುನೀಕರಣ ನೆರವೇರಿಸಿದ್ದು ಮಹತ್ವದ ವಿಚಾರ. ಬೆಳಗಾವಿ ಜಿಲ್ಲೆಯ ಮಸ್ತಿ ಗ್ರಾಮದ ಹತ್ತಿರ ಘಟಪ್ರಭ ನದಿಯಿಂದ ನೀರತ್ತೆ ಒಣ ಪ್ರದೇಶದ ನೀರಾವರಿಗಾಗಿ ದಡ್ಡಿನಾಗನೂರು ಏತ ನೀರಾವರಿ ಯೋಜನೆಯಡಿಯಲ್ಲಿ 1996ರಲ್ಲಿ ಪ್ರಾರಂಭಿಸಿದರು. ಹಾವೇರಿ ಜಿಲ್ಲೆಯ ಬಸಾಪುರದ ಗ್ರಾಮದ ಹತ್ತಿರ ವರದಾ ನದಿಗೆ ಅಣೆಕಟ್ಟೆಯನ್ನು ನಿರ್ಮಿಸಿ 9.36 ಕೋಟಿ ವೆಚ್ಚದ ಬಸಾಪುರ ಏತ ನೀರಾವರಿ ಯೋಜನೆ 9.04.1996ರಲ್ಲಿ ಆಡಳಿತಾತ್ಮಕ ಮತ್ತು ತಾಂತ್ರೀಕ ಅನುಮೋದನೆ ನೀಡಿ ಕಾಮಗಾರಿಯನ್ನು ಕೈಗೊಂಡರು.

ಬೇಲೂರು ತಾಲ್ಲೂಕಿನ ಲಕ್ಕನೇಹಳ್ಳಿ ಬಳಿ ವಾಟೆಹೊಳೆ ನದಿಗೆ ಆಡಲಾಗಿ ಅಣೆಕಟ್ಟನ್ನು ನಿರ್ಮಿಸಲು 38 ಕೋಟಿ ರೂಪಾಯಿಗಳನ್ನು 22.02.1996ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದರು. ಗದಗ ಜಿಲ್ಲೆ ಇಟಗಿ ಗ್ರಾಮದ ಬಳಿ ತುಂಗಭದ್ರನದಿಗೆ ಇಟಗಿ –ಸಾಸಲವಾಡ ಏತ ನೀರಾವರಿ ಯೋಜನೆಗೆ 5.06.1996ರಲ್ಲಿ ತಾಂತ್ರೀಕ ಮತ್ತು ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಕಾಮಗಾರಿಯನ್ನು ಕೈಗೊಂಡರು. ಹೆಗ್ಗಡದೇವನಕೋಟೆ ತಾಲ್ಲೋಕಿನ ಪೆಂಜಳ್ಳಿ ಬಳಿಯ ತಾರಕಾ ಜಲಾಶಯಕ್ಕೆ ನೀರಿನ ಕೊರತೆ ಗಮನಿಸಿ ಮಳೆಗಾಲದ ಮೂರು ತಿಂಗಳ ಅವಧಿಯಲ್ಲಿ ಕಬಿನಿ ಜಲಾಶಯದ ಹಿನ್ನಿರಿನಿಂದ ನೀರನ್ನು ಎತ್ತಿ ತಾರಕಾ ಜಲಾಶಯಕ್ಕೆ ನೀರು ಒದಗಿಸುವ ಯೋಜನೆಗೆ 1997ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರಕಿಸಿ ಕಾಮಗಾರಿಯನ್ನು ಕೈಗೊಂಡರು ಗದಗ ಜಿಲ್ಲೆ ಹೆಮ್ಮಿಗೆ ಗ್ರಾಮದ ಬಳಿ ತುಂಬಭದ್ರನದಿಗೆ ಬ್ಯಾರೆಜ್ ನಿರ್ಮಿಸಿ ಸಿಂಗಟಾಲೂರು ಏತ ನೀರಾವರಿ ಯೋಜನೆಯಡಿಯಲ್ಲಿ 1998ರ ಮಾರ್ಚ್‌ನಲ್ಲಿ ಆರಂಭಿಸಿದರು. ಯಗಚಿ

ಯೋಜನೆಯನ್ನು ಪೂರ್ಣಗೊಳಿಸಲು 1998ರಲ್ಲಿ 2.5 ಕಿ.ಮೀ ಮೇಲ್ಗಾಲುವೆ ಕಟ್ಟಲು ತಾಂತ್ರೀಕ ಅನುಮೋದನೆ ನೀಡಿದರು. ಶಿರೂರು ಗ್ರಾಮದ ಬಳಿ 1998ರಲ್ಲಿ ಮಾರ್ಕಂಡೇಯ ಜಲಾಶಯ ಯೋಜನೆಯನ್ನು ಪ್ರಾರಂಭಿಸಿದರು ಇದರಿಂದ ಬೆಳಗಾವಿ ಜಿಲ್ಲೆ ಹಸಿರಾಗಲು ಕಾರಣರಾದರು.

ಕೆ.ಎನ್.ನಾಗೇಗೌಡರು ಮಲಪ್ರಭ ಉಪನದಿಯಾದ ಹರಿನಾಲಾ ನದಿಗೆ ತಿಗಡಿ ಗ್ರಾಮದಲ್ಲಿ ಹರಿನಾಲಾ ನೀರಾವರಿ ಯೋಜನೆಯಡಿ 1998ರಲ್ಲಿ ಪ್ರಾರಂಭಿಸಿ ಆಡಳಿತಾತ್ಮಕ ಮತ್ತು ತಾಂತ್ರೀಕ ಅನುಮೋದನೆ ನೀಡಿ ಮಂಜೂರಾತಿ ದೊರಕಿಸಿದರು. ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಹೊರೆತು ಪಡಿಸಿ ಇದೆಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ನೀರಾವರಿ ನಿಗಮ ನಿಯಮಿತವನ್ನು 26.11.1998ರಲ್ಲಿ ರಚಿಸಿ ನಿಗಮವು 09 ಡಿಸೆಂಬರ್ 1998ರಲ್ಲಿ ಕಾರ್ಯ ಆರಂಭಿಸುವಂತೆ ಮಾಡಿದರು.[46] ಕೃಷ್ಣ ನದಿಯ ಪಾತ್ರ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಲು ಕೃಷ್ಣಭಾಗ್ಯ ಜಲನಿಗಮದ ಮೂಲಕ ಷೇರುಗಳ ಮೂಲಕ ಹೆಚ್ಚುವರಿ ಹಣದ ಸಂಪನ್ಮೂಲಗಳನ್ನು ಸಂಗ್ರಹಿಸಿದ್ದರು.[47] ತುಂಗ ಏತ ನೀರಾವರಿ ಯೋಜನೆಯನ್ನು ಗಾಜನೂರು ಅಣೆಕಟ್ಟೆಯಿಂದ ಹಾಯಾಹೊಳೆ ಬಾರೆಹಳ್ಳ, ಗೌಡನ ಕೆರೆಗಳಿಗೆ ಏತ ನೀರಾವರಿ ಮೂಲಕ ನೀರುಳಿಸಲು ಯೋಜನೆಗೆ ಆಡಳಿತಾತ್ಮಕ ಮತ್ತು ತಾಂತ್ರೀಕ ಅನುಮೋದನೆಯನ್ನು 30.03.1999ರಲ್ಲಿ ನೀಡಲಾಯಿತು. ನರಗುಂದ ತಾಲ್ಲೂಕಿನಲ್ಲಿ 5 ಸರಣಿ ಬ್ಯಾರೇಜ್‌ಗಳನ್ನು ಬನಹಟ್ಟಿ, ಕುರ್ಲಗೇರಿ, ಸುರಕೋಡ, ಖಾನಪುರ, ರಡ್ಡೇರ-ನಾಗನೂರು, ಗಳಲ್ಲಿ ನಿರ್ಮಿಸಿ 17.33 ಕೋಟಿ ವೆಚ್ಚದಲ್ಲಿ ಬೆಣ್ಣೆಹಳ್ಳ ಏತ ನೀರಾವರಿ ಯೋಜನೆಯನ್ನು ಆರಂಭಿಸಿದರು. ಗದಗ ಜಿಲ್ಲೆಯ ಆಸೋಟಿ ಗ್ರಾಮದ ಬಳಿ ಬೆಣ್ಣೆಹಳ್ಳದಿಂದ ಕೊಳಚಿ ಏತ ನೀರಾವರಿ ಯೋಜನೆಯನ್ನು 1999ರಲ್ಲಿ ಆರಂಭಿಸಲು ಸರ್ಕಾರದ ಆದೇಶ ನೀಡಿದರು. ಕೂಣ್ಣೂರು, ಏತ ನೀರಾವರಿ ಯೋಜನೆಯನ್ನು ಮಲಪ್ರಭ ನದಿಗೆ 1999 ರಲ್ಲಿ ಆರಂಭಿಸಿದರು. ನಾಗಮಂಗಲ ತಾಲ್ಲೂಕು ಮತ್ತು ತಮಕೂರು ಜಿಲ್ಲೆಯ ಒಣ ಪ್ರದೇಶಗಳಿಗೆ ಹೇಮಾವತಿ ನೀರು ಒದಗಿಸಿದರು. ಆಲಮಟ್ಟಿ ಅಣೆಕಟ್ಟನ್ನು ಎತ್ತರಿಸಿದ್ದರಿಂದ ಉಂಟಾದ ನಿರಾಶ್ರಿತರ ಸಮಸ್ಯೆಯನ್ನು ಬಗೆಹರಿಸಿದರು. ಬಾಗಲಕೋಟೆ ರೈತರ ಪುನರ್‌ವಸತಿ ಮತ್ತು ಪರಿಹಾರ ಕಾರ್ಯವನ್ನು ಕೈಗೊಂಡರು. [48] ನೀರಾವರಿ ಮಂತ್ರಿಯಾಗಿದ್ದಾಗ ವರುಣಾ ನಾಲಾ ವಿಚಾರ ಪ್ರಸ್ತಾಪ ಬಂದಾಗ ನಾಗೇಗೌಡರು ನಾನು ಎರಡು ಜಿಲ್ಲೆಗಳನ್ನು ಒಂದೇ ದೃಷ್ಟಿಯಿಂದ ನೋಡುತ್ತೇನೆ. 1978-79 ರ ಮೂಲ ಒಪ್ಪಂದದ ಪ್ರಕಾರ ವರುಣಾ ಮತ್ತು ವಿ.ಸಿ. ನಾಲಾ ಅಭಿವೃದ್ಧಿ ಕೈಗೊಳ್ಳುತ್ತೇನೆಂದರು.[49] ಬಚಾವತ್ ತೀರ್ಪಿನ ಅನ್ವಯ ಕೃಷ್ಣ ಕೊಳ್ಳದ ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಕೈಗೊಂಡು ಕರ್ನಾಟಕದ ಪಾಲಿನ ನೀರಿನ ಪ್ರಮಾಣವನ್ನು ಬಳಸಿಕೊಳ್ಳಲು ಕಾರಣರಾದರು. ಇಡೀ ರಾಜ್ಯದಲ್ಲಿ 1,28,705 ಹೆಕ್ಟೇರ್ ಪ್ರದೇಶಕ್ಕೆ ನೀರೊದಗಿಸಿದ್ದರು.

ಕಾವೇರಿ ಟ್ರಿಬ್ಯುನಲ್ ಕೇವಲ ಅಧಿಕಾರಿಗಳ ಮಟ್ಟದ ಸಭೆಯಾಗಿತ್ತು. ಇವರಿಗೆ ರೈತರ ಕಷ್ಟಗಳು ಅರ್ಥವಾಗುವುದಿಲ್ಲ. ಇದಕ್ಕೆ ಬದಲಾಗಿ ನಾಗೇಗೌಡರು ಜೆ.ಹೆಚ್. ಪಟೇಲರಿಗೆ ಕಾವೇರಿ ನದಿ ಪ್ರಾಧಿಕಾರ ರಚಿಸಲು ಪ್ರಧಾನಿಗಳೊಂದಿಗೆ ಚರ್ಚಿಸಲು ಸಲಹೆ ನೀಡಿದ್ದರು. ಪ್ರಧಾನ ಮಂತ್ರಿಯ ಅಧ್ಯಕ್ಷತೆಯಲ್ಲಿ ಕಾವೇರಿ ನದಿ ನೀರು ಪ್ರಾಧಿಕಾರ ರಚನೆಯಾಯಿತು. ಕರ್ನಾಟಕ, ತಮಿಳುನಾಡು, ಕೇರಳ, ಪುದುಚೆರಿ ರಾಜ್ಯಗಳ ಮುಖ್ಯ ಮಂತ್ರಿಗಳು ಇದರ ಸದಸ್ಯರಾಗಿದ್ದಾರೆ. ಭಾರತೀಯ ಇತಿಹಾಸದಲ್ಲಿ ಇಂತದ್ದೊಂದು ಪ್ರಾಧಿಕಾರ ರಚನೆಯಾಗಲು ನಾಗೇಗೌಡರು ಕಾರಣರಾದರು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧಿಕೃತ ಆದೇಶಗಳು ನಮ್ಮ ರಾಜ್ಯದ ನೀರಿನ ಹಕ್ಕಿಗಾಗಿ ಅವರು ಸಂಗ್ರಹಿಸಿದ ಹಾಗೂ ಕ್ರೋಢೀಕರಿಸಿದ ದಾಖಲೆಗಳು ಕಾವೇರಿ ಮತ್ತು ಕೃಷ್ಣ ನ್ಯಾಯಮಂಡಳಿಯ ಮುಂದೆ ನಮ್ಮ ರಾಜ್ಯದ ವಾದವನ್ನು ಮಂಡಿಸಲು ಸಹಾಯವಾಗಿದೆ.

## ಕಾವೇರಿ ನದಿ ಪ್ರಾಧಿಕಾರ ರಚನೆಯಲ್ಲಿ ಕೆ.ಎನ್.ನಾಗೇಗೌಡರು

ದಿನಾಂಕ:04.08.1997 ರಲ್ಲಿ ಭಾರಿ ನೀರಾವರಿ ಖಾತೆ ಸಚಿವರಾಗಿ ಕೆ.ಎನ್.ನಾಗೇಗೌಡರು ಕರ್ನಾಟಕ ರಾಜ್ಯ ವಿಧಾನ ಸಭೆಯಲ್ಲಿ ಕಾವೇರಿ ನದಿ ಪ್ರಾಧಿಕಾರದ ರಚನೆಯ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಂಡು ಸುಮಾರು ಎರಡು ಎರಡೂವರೆ ಗಂಟೆಗಳ ಕಾಲ ಹಲವು ಹಿರಿಯ ನಾಯಕರುಗಳು ಕಾವೇರಿ ವಿಚಾರದಲ್ಲಿ ಈಗಿರತಕ್ಕ ಸದ್ಯದ ಪರಿಸ್ಥಿಯನ್ನು ಅವರದೇ ಆದಂಥ ವಿಚಾರಧಾರೆಯಲ್ಲಿ ವಿಚಾರವನ್ನು ಪ್ರಸ್ತಾಪ ಮಾಡಿದ ಸಂದರ್ಭದಲ್ಲಿ ಉತ್ತರಿಸುತ್ತಾ ಬಹುಶಃ ನನಗೂ ಒಂದಷ್ಟು ಅನುಭವ ಇರುವುದರ ಪ್ರಯುಕ್ತ ಈ ವಿಚಾರದಲ್ಲಿ ಹೇಳುವುದಾದರೆ ರಾಜ್ಯದ ಯಾವುದೇ ಸರ್ಕಾರ ಯಾವುದೇ ರಾಜಕೀಯ ಪಕ್ಷಕ್ಕೆ ನಮ್ಮ ಕಾವೇರಿ ಜಲದ ವಿಚಾರದಲ್ಲಿ ಭಿನ್ನಾಭಿಪ್ರಾಯ ಬರುವುದಿಲ್ಲ. ಎಲ್ಲರೂ ರಾಜ್ಯದ ಹಿತವನ್ನು ಕಾಪಾಡತಕ್ಕದ್ದರಲ್ಲಿ ಹತ್ತಾರು ವರ್ಷಗಳಿಂದ ಅವರದೇ ಅದಂಥ ಪ್ರಯತ್ನವನ್ನು ಸಂಧರ್ಭಕ್ಕೆ ಅನುಗುಣವಾಗಿ ಎದುರಿಸಿಕೊಂಡು ಬಂದಿದ್ದಾರೆ. ಅದು ತಪ್ಪಾಗಿರಬಹುದು ಅಥವಾ ಸರಿ ಇರಬಹುದು. ಆದರೂ ಕೂಡ ಸಮಸ್ಯೆಯನ್ನು ಸಂಪೂರ್ಣವಾಗಿ ಎಲ್ಲಾ ಸರ್ಕಾರಗಳವರೂ ಎದುರಿಸಿಕೊಂಡು ಬಂದಿದ್ದಾರೆ ಎಂದು ಹೇಳಿದರೆ, ಯಾರೂ ಅನ್ಯಥಾ ಭಾವಿಸುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಕರ್ನಾಟಕ ರಾಜ್ಯದ ಯಾವುದೇ ಶಾಸಕ ಆಗಲೀ ಯಾವುದೇ ಪ್ರಜೆಯಾಗಲೀ ಕರ್ನಾಟಕ ರಾಜ್ಯದ ರೈತರ ಹಿತಕ್ಕೆ ಧಕ್ಕೆ ಬರುವಂಥ ಕೆಲವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಮಾಡುವುದೂ ಇಲ್ಲ ಎನ್ನತಕ್ಕ ಅಪಾರ ನಂಬಿಕೆ ಜನರಲ್ಲೂ ಇದೆ, ರಾಜಕೀಯ ಪಕ್ಷದಲ್ಲೂ ಇದೆ, ನಾಯಕರಲ್ಲೂ ಇದೆ ಎಂದು ಅಂದುಕೊಂಡಿದ್ದೇನೆ.

ಟ್ರಿಬ್ಯೂನಲ್ ಅಪಾಯಿಂಟ್‌ಮೆಂಟ್‌ನ್ನು ತೀವ್ರವಾಗಿ ವಿರೋಧ ಮಾಡಿದ್ದೇವೆ. ಟ್ರಿಬ್ಯೂನಲ್ ಅಪಾಯಿಂಟ್ ಮಾಡಿದಾಗ ಎಲ್ಲರೂ ವಿರೋಧ ಮಾಡಿದ್ದೇವೆ. ಆ ಹಿನ್ನಲೆಯಲ್ಲಿ ಆ ಮಾತನ್ನು ಹೇಳಿದೆ. ಆದ್ದರಿಂದ ಇವತ್ತೂ ಸಹ ಪ್ರಮುಖವಾಗಿರತಕ್ಕಂಥ ವಿಚಾರ ಇವತ್ತು ಏನು ಈ ಸ್ಕೀಮನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಒಂದು ಡ್ರಾಫ್ಟ್ ನೋಟಿಫಿಕೇಷನ್‌ನನ್ನು ನಮ್ಮ ರಾಜ್ಯ ಸರ್ಕಾರದ ಪರಿಶೀಲನೆಗೆ ಕಳುಹಿಸಿಕೊಟ್ಟಿದ್ದಾರೆ. ಅದು ಬಹಳ ಮಹತ್ತರವಾಗಿರತಕ್ಕದ್ದು ಎಂದು ನಾನಂದುಕೊಂಡಿದ್ದೇನೆ.  ಪ್ರತಿಭಟನೆಯನ್ನು ವ್ಯಕ್ತಪಡಿಸಿ ಪತ್ರಿಕೆಯಲ್ಲಿ ಪ್ರಕಟಣೆ ನೀಡಿದೆ. ಬಹುಶಃ ಎಲ್ಲಾ ಪತ್ರಿಕೆಗಳಲ್ಲಿ ಕಾವೇರಿ ವಿವಾದ ಕೇಂದ್ರದ ಕರಡು ಪ್ರಸ್ತಾವನೆಗೆ ರಾಜ್ಯದ ವಿರೋಧ ಎಂದು ಬಂದಿದೆ. ಈ ಮಾತನ್ನ ಅದು ನಮಗೆ ತಲುಪಿದ್ದ ಅಲ್ಪ ದಿನದಲ್ಲೇ ನಾನು ತೀವ್ರವಾದ ಪ್ರತಿಭಟನೆಯನ್ನು ನಮ್ಮ ವಕೀಲರನ್ನು ಎಲ್ಲರನ್ನೂ ನೋಡಿ ನಾನು ಸೂಕ್ಷ್ಮವಾಗಿ ಹೇಳಿದಂಥ ಕಾಲದಲ್ಲಿ ಅತ್ಯಂತ ಶೀಘ್ರದಲ್ಲೇ ಎಲ್ಲಾ ವಿರೋಧಪಕ್ಷದ ನಾಯಕರುಗಳನ್ನು ಸದನದ ಎಲ್ಲಾ ಮುಖಂಡರುಗಳನ್ನು ಕರೆಸಿಕೊಂಡು ಇದರ ಬಗ್ಗೆ ಅಭಿಪ್ರಾಯ ಪಡೆದು, ತದನಂತರ ಆರುವಾರಗಳ ಕಾಲ ಅವಕಾಶ ಕೊಟ್ಟಿದ್ದಾರೆ. ಅಷ್ಟರಲ್ಲಿ ನಮ್ಮ ಕರ್ನಾಟಕ ಸರ್ಕಾರದ ನಿಲುವನ್ನು ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇವೆ ಎನ್ನತಕ್ಕದ್ದನ್ನು ನಾನು ಅಂದಿನ ದಿವಸವೇ 17ನೇ ತಾರೀಖು ಜೂನ್‌ನಲ್ಲೇ ತೀವ್ರ ಪ್ರತಿಭಟನೆಯನ್ನು ದೆಹಲಿಯಲ್ಲಿ ಮಾಡಿದೆ. ಮಾಡಿದ ನಂತರ ಮಾನ್ಯ ಮುಖ್ಯಮಂತ್ರಿಗಳು ಕಾಗದ ಏನು ಬರೆದಿದ್ದರು ಎನ್ನತಕ್ಕದ್ದನ್ನು ಮಾನ್ಯ ವಿರೋಧಪಕ್ಷದ ನಾಯಕರು ಕೇಳಿದರು.

ದೆಹಲಿಯಲ್ಲಿ ನಡೆದಂಥ ಪ್ರಮುಖವಾದ ವಿಚಾರವನ್ನು, ಲೀಗಲ್ ಸ್ಟೆಪ್ಸ್ ಬಗ್ಗೆ ಮಾತನಾಡಲು ನಮ್ಮ ಲಾಯರ್ ನಾರಿಮನ್ ಅವರ ಹತ್ತಿರ ಹೋಗಿದ್ದಾಗ ಅನೇಕ ಸ್ನೇಹಿತರೆಲ್ಲರೂ ಕೂಡ ಆ ಸಂದರ್ಭದಲ್ಲಿದ್ದರು. ಆಗ ಅಲ್ಲಿ ನಡೆದಂತಹ ಕೆಲವು ವಿಚಾರಗಳನ್ನು ಅವರು ಕೇಳಿಕೊಂಡಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ತದನಂತರ ಈ ನ್ಯಾಷನಲ್ ವಾಟರ್ ಪಾಲಿಸಿ ಬಗ್ಗೆ ಏನೂ ಮಾಡಲಿಲ್ಲ, ಏನೂ ಕ್ರಮತೆಗೆದುಕೊಂಡೇ ಇಲ್ಲ ಎನ್ನತಕ್ಕಂಥ ಬಹಳ ಗಂಭೀರವಾದ ವಿಚಾರವನ್ನು ಸ್ನೇಹಿತರು ಹೇಳಿದರು. ನ್ಯಾಷನಲ್ ವಾಟರ್ ಪಾಲಿಸಿ ಬಗ್ಗೆ 6ನೇ ಫೆಬ್ರವರಿ 96ರಲ್ಲಿ ನ್ಯಾಷನ್ ವಾಟರ್ ರಿಸೋರ್ಸಸ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಮಾಟಿ ಫೈಡ್ ಡ್ರಾಫ್ಟ್‌ನ್ನು ನಮ್ಮ ಸಿ.ಎಂ.ಅವರು ಹಿಂದೆ ಏನು ಕೊಟ್ಟಿದ್ದಾರೂ, ಅದನ್ನು 6ನೇ ಫೆಬ್ರವರಿ 96ರಲ್ಲಿ ಜೆ.ಹೆಚ್.ಪಟೇಲರು ಬಂದ ಮೇಲೆ ಅಲ್ಲಿ ಪ್ರಸ್ತಾಪ ಮಾಡಿ 20.02.97ರಲ್ಲಿ ಅಂದರೆ 97ನೇ ಫೆಬ್ರವರಿ 20 ರಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳೇ ಅಲ್ಲಿಗೆ ಒಂದು ಕಾಗದವನ್ನು ಬರೆದಿದ್ದಾರೆ.

ಬಹುಶಃ ಅದನ್ನು ಓದತಕ್ಕ ಅವಶ್ಯಕತೆ ಇಲ್ಲ ಎಂದು ನಾನಂದುಕೊಳ್ಳುತ್ತೇನೆ. ಪ್ರಮುಖವಾದಂಥ ವಿಚಾರ ಅಂದರೆ ಈ ನ್ಯಾಷನಲ್ ವಾಟರ್ ಪಾಲಿಸಿಗೆ ಒಂದು ಗೈಡ್‌ಲೈನ್ ಮಾಡಬೇಕೆಂದು ಹಿಂದಿನಿಂದ ಒತ್ತಾಯ ಮಾಡಿಕೊಂಡು ಬಂದಿರತಕ್ಕ ಆಧಾರದ ಮೇಲೆ 20-2-97 ರಲ್ಲಿ ಪ್ರೈಮ್ ಮಿನಿಸ್ಟರ್‌ಗೆ ಕಾಗದ ಬರೆದಿರತಕ್ಕದ್ದು ಇಲ್ಲಿದೆ ಎಂಬುದನ್ನು ನಾನು ಸದನದ ಗಮನಕ್ಕೆ ತಂದರೆ ಒಳ್ಳೆಯದಾಗುತ್ತದೆ. ಅಂದರೆ ನ್ಯಾಷನಲ್ ವಾಟರ್ ಪಾಲಿಸಿಗೆ ಗೈಡ್ ಲೈನ್ಸ್ ಹಾಕಬೇಕು ಎಂಬ ಬಗ್ಗೆ ರಾಜ್ಯ ಸರ್ಕಾರ ಕಳೆದ ಸುಮಾರು ಎರಡು ಎರಡೂವರೆ ವರ್ಷಗಳಿಂದ ಸತತವಾಗಿ ಪ್ರಯತ್ನ ಮಾಡಿದೆ. ಅನೇಕ ಕಾಗದಗಳನ್ನು ಬರೆದಿದೆ. ಪ್ರಧಾನಮಂತ್ರಿಗಳ ಹತ್ತಿರ ಚರ್ಚೆಯವರೆಗೆ ಒತ್ತಾಯ ಮಾಡಿರುವುದನ್ನು ಎಲ್ಲಾ ಸದಸ್ಯರ ಗಮನಕ್ಕೆ ತರತಕ್ಕದ್ದು ಈ ಸಂದರ್ಭದಲ್ಲಿ ಸೂಕ್ತವೆಂದು ನಾನು ಅದು ಕೊಳ್ಳುತ್ತೇನೆ. ಉಳಿದಿರತಕ್ಕ ಹಲವಾರು ವಿಚಾರಗಳಲ್ಲಿ ಮೇಜರಾಗಿ ನಮ್ಮ ನಂಜೇಗೌಡರು ಪ್ರಸ್ತಾಪ ಮಾಡಿದರು. ನೀವು ಎಲ್ಲಿಯವರೆಗೆ ನೀರು ಬಿಟ್ಟಿದ್ದೀರಿ? ಇದರಲ್ಲಿ ಮುಚ್ಚುಮರೆ ಏನಿದೆ? ಸೂಕ್ಷ್ಮವಾಗಿ ಹೇಳತಕ್ಕದ್ದು ಏನೂ ಇಲ್ಲ, ಹೇಳಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ಅವರು ಹೇಳಿದರು. 91 ರಿಂದ 97 ರವರೆಗೆ ಪ್ರತಿವರ್ಷ ತಾವು ಹೇಳಿದ ಹಾಗೆ ಬಿಳಿಗುಂಡಲುನಲ್ಲಿ ಎಷ್ಟು? ಮೆಟ್ಟೂರಿನಲ್ಲಿ ಎಷ್ಟು? ಎಂದು ಸುಪ್ರೀಂಕೋರ್ಟ್‌ಗೆ ಕೊಟ್ಟಿದ್ದೇವೆ. ಟ್ರಿಬ್ಯುನಲ್‌ಗೆ ಕೊಡುತ್ತಿದ್ದೇವೆ. ಮೆಟ್ಟೂರಿನಲ್ಲಿ ನಮ್ಮ ಗೇಜ್ ಇಲ್ಲ. ತಮಿಳುನಾಡಿನವರೇ ಮೈಂಟನೇನ್ ಮಾಡುತ್ತಿದ್ದಾರೆ. ಬೆಳಗುಂಡಲುನಲ್ಲಿ ಸಿ.ಡಬ್ಲ್ಯೂ.ಸಿ ಯವರು ಮೆಂಟೆನನ್ಸ್ ಇದೆ. ಇದರ ಬಗ್ಗೆ ತಕರಾರಿದೆ ಎಂಬುದು ಮಾನ್ಯ ಮೊಯಿಲಿವರಿಗೂ ಗೊತ್ತಿದೆ. ಆದರೆ ನಾನು ಎರಡೂ ಫಿಗರ್‌ನ್ನು ಹೇಳುವುದಾದರೆ 91-91ರಲ್ಲಿ ನಮ್ಮದಿರುವುದು ಟ್ರಿಬ್ಯುನಲ್ ಆರ್ಡರ್ ಪ್ರಕಾರ_ ಜೂನ್‌ನಂದ ಮೇವರೆಗೆ ಮೆಟ್ಟೂರು ರಿಸರ್ವಾಯರ್ ಹತ್ತಿರ 205 ಟಿ.ಎಂ.ಸಿ ನೀರು ಇರಬೇಕು. ಎಂದು ಟ್ರಿಬ್ಯುನಲ್ ಕೊಟ್ಟ ಆರ್ಡರ್‌ನ್ನು ನಾವು ಒಪ್ಪಿಲ್ಲ. ಆದರೂ ಕೂಡ ಅಲ್ಲಿರತಕ್ಕ ಆರ್ಡರ್ ಪ್ರಕಾರ ನಾವು ಇಲ್ಲಿಯವರೆಗೆ ರಿಲೀಸ್ ಮಾಡಿರತಕ್ಕ, ಆಕ್ಚುಯಲ್ಲಾಗಿ ಮಾಡಿರತಕ್ಕದ್ದನ್ನು ಹೇಳುತ್ತೇನೆ. 1991-92ರಲ್ಲಿ ಬಿಳಿಗುಂಡ್ಲು ಹತ್ತಿರ 340.55 ಟಿ.ಎಂ.ಸಿ.ಮೆಟ್ಟೂರು ಹತ್ತಿರ 332-38 ಟಿ.ಎಂ.ಸಿ. 1992-93ಕ್ಕೆ ಬಿಳಿಗುಂಡ್ಲು ಹತ್ತಿರ 3580-61 ಮೆಟ್ಟೂರು ಹತ್ತಿರ 367.3701995-96ಕ್ಕೆ ಬಿಳಿಗುಂಡ್ಲುನಲ್ಲಿ 197.03 ಮತ್ತು ಮೆಟ್ಟೂರಿನಲ್ಲಿ 183.09.96-97ಕ್ಕೆ ಬಿಳಿಗುಂಡ್ಲುನಲ್ಲಿ 245.45 ಮತ್ತು ಮೆಟ್ಟೂರಿನಲ್ಲಿ 244.05 ಪ್ರತಿವರ್ಷ ಬಹುಶಃ ಒಂದು 4-5 ಟಿ.ಎಂ.ಸಿ ಬಿಟ್ಟರೆ ಪ್ರತಿವರ್ಷ ಹೆಚ್ಚು ಕಡಿಮೆ ಟ್ರಿಬ್ಯುನಲ್‌ನವರು ಏನು ಹೇಳಿದ್ದಾರೆ ಅಷ್ಟು ನೀರು ನಾವು ಬಿಟ್ಟಿದ್ದೇವೆ. ಮೆಟ್ಟೂರು ಹತ್ತಿರ ಗೇಜ್ ಎಷ್ಟು, ಬೆಳಗುಂಡ್ಲು ಗೇಜ್ ಎಷ್ಟು ಎನ್ನುವ ಅಂಕಿ ಅಂಶಗಳನ್ನು ಸದನದಲ್ಲಿ ಕೊಟ್ಟಿದ್ದೇನೆ. ಅದು ಬಹಳ ಪ್ರಾಮುಖ್ಯವಾದ ವಿಚಾರವೆಂದು ನಾನು

ಅಂದುಕೊಂಡಿದ್ದೇನೆ. ಆದ್ದರಿಂದ ಈಗಾಗಲೇ ಸುಪ್ರೀಂ ಕೋರ್ಟ್‌ಗೆ ಕೊಟ್ಟಿದ್ದೇವೆ. ಟ್ರಿಬ್ಯುನಲ್‌ಗೂ ಕೊಟ್ಟಿದ್ದೇವೆ. ಬಿಳಿಗುಡ್ಲು ಹತ್ತಿರ ಸೆಂಟ್ರಲ್‌ವಾಟರ್ ಕಮೀಷನ್ ರವರು ಇದ್ದಾರೆ. [50]

ತಮ್ಮ ಕಿರುಗಾವಲು ಕ್ಷೇತ್ರ ವ್ಯಾಪ್ತಿಯಲ್ಲಿ ಕಿರುಗಾವಲು, ಬಿ.ಜಿ ಪುರ, ಸೋಸಲೆ ಹೋಬಳಿಗಳ 12,576 ಎಕರೆ ಒಣ ಪ್ರದೇಶಕ್ಕೆ 119 ಕ್ಯೂಸೆಕ್ಸ್ ನೀರಿನಿಂದ ನಂಜಾಪುರ ಏತ ನೀರಾವರಿ ಯೋಜನೆಯನ್ನು 31.61 ಕೋಟಿ ಮಂಜೂರಾತಿಯೊಂದಿಗೆ ಕೈಗೊಂಡಿರದಲ್ಲದೆ ಬಿ.ಜಿ.ಪುರದಿಂದ ಸೂರ್ಕಳ್ಳಿ , ಬಿ.ಜಿ.ಪುರದಿಂದ ಚೊಟ್ಟನಹಳ್ಳಿ ವಿತರಣಾ ನಾಲಾ ನಿರ್ಮಾಣ ಕೈಗೊಂಡರು. ಇದರಿಂದ ಇಂದು ಈ ಒಣ ಪ್ರದೇಶ ಹಸಿರಾಗಲು ಕಾರಣರಾಗಿದ್ದಾರೆ. ಹೀಗೆ ಕೆ.ಎನ್. ನಾಗೇಗೌಡರು ಸ್ವತಃ ನೀರಾವರಿ ತಜ್ಞರಾಗಿ ರಾಜ್ಯದಲ್ಲಿ ಚಿರಸ್ಮರಣೀಯರಾಗಿದ್ದಾರೆ.

ವಿ. ಸಿ. ನಾಲಾ ಅಧುನೀಕರಣದ ಸಂದರ್ಭದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಮಂಡ್ಯ ಜಿಲ್ಲೆ ರೈತ ಹಿತರಕ್ಷಣಾ ಸಮಿತಿಯವರು ನಾಗೇಗೌಡರ ಪತ್ನಿ ಮತ್ತು ಮಗನ ಮೇಲೆ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. 24/06/1999 ರಲ್ಲಿ ವಿಧಾನ ಸಭೆಯಲ್ಲಿ ನೀರಾವರಿ ಯೋಜನೆಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಮಲ್ಲಿಕಾರ್ಜುನ ಖರ್ಗೆ, ಎಂ. ವೀರಪ್ಪಮೋಯ್ಲಿ, ಜಗದೀಶ್ ಶೆಟ್ಟರ್ ಮತ್ತಿತರರು ಸದನದಲ್ಲಿ ಪ್ರಸ್ತಾಪಿಸಿ ಸಿ.ಎ.ಜಿ ರಿಪೋಟನ್ನು ಸಿ.ಬಿ.ಐಗೆ ವಹಿಸುವಂತೆ ಕೋರಿದಾಗ ಅವರು ಸಾರ್ವಜನಿಕರ ಎದುರು ಚರ್ಚೆ ಮಾಡಲು ಸಿದ್ದ ಎಂದರು. ಹೀಗೆ ಕೆ.ಎನ್. ನಾಗೇಗೌಡು ಕರ್ನಾಟಕ ಕಂಡ ನೀರಾವರಿ ಸಚಿವ ಹಾಗೂ ನೀರಾವರಿ ತಜ್ಞರಾಗಿ ಜನ ಮಾನಸದಲ್ಲಿ ಅಚ್ಚಳಿಯದೇ ಉಳಿದಿದ್ದಾರೆ.

## ಅಡಿಟಿಪ್ಪಣಿಗಳು

1. ಸಂದರ್ಶನ, ಸಂಶೋಧಕನಿಂದ ಸಿ. ಚಿನ್ನಸ್ವಾಮಿ (ಚಿಕ್ಕಪಂಚಯ್ಯನವರ ಮಗ) ದಿನಾಂಕ : 05/05/2012
2. ಹೆಚ್.ಎಸ್. ಮುದ್ದೇಗೌಡ (ಪ್ರ.ಸಂ.) ಛಲಗಾರ (ಕೆ.ಎನ್. ನಾಗೇಗೌಡ ಸಂಸ್ಮರಣ ಗ್ರಂಥ) ಪುಟ –248
3. ಸಂಸದೀಯ ಪಟುಗಳ ಮಾಲಿಕೆ, – ಕೆ.ಎನ್.ನಾಗೇಗೌಡ, ಪುಟ–38
4. ಹೆಚ್.ಎಸ್.ಮುದ್ದೇಗೌಡ, ಪೂರ್ವೋಕ್ತ, ಪುಟ–218
5. ಪಿ.ಕೆ ರಾಜಶೇಖರ (ಪ್ರ.ಸಂ.) ಮಣ್ಣಿನ ಹಣತೆ, ಪುಟ – 284
6. ಸಂದರ್ಶನ : ಸಂಶೋಧಕನಿಂದ ಹೆಚ್. ತಿಮ್ಮೇಗೌಡ (ನಾಗೇಗೌಡರ ಒಡನಾಡಿ) 05/05/2012
7. ಸಂಸದೀಯ ಪಟುಗಳ ಮಾಲಿಕೆ, – ಕೆ.ಎನ್. ನಾಗೇಗೌಡ ಪುಟ – 38
8. ಹೆಚ್.ಎಸ್. ಮುದ್ದೇಗೌಡ, ಪೂರ್ವೋಕ್ತ, ಪುಟ –232

9. ಸಂದರ್ಶನ : ಸಂಶೋಧಕನಿಂದ, ಎಂ.ಕೆ. ನಾಗಮಣಿ ನಾಗೇಗೌಡರ ಪತ್ನಿ 30/ 04/2012

10. ಪಿ.ಕೆ ರಾಜಶೇಖರ, ಪೂರ್ವೋಕ್ತ, ಪುಟ – 284

11. ಸಂದರ್ಶನ : ಸಂಶೋಧಕನಿಂದ, ಎಂ. ಹೆಚ್. ಕೆಂಪಯ್ಯ (ನಾಗೇಗೌಡರ ಒಡನಾಡಿ) 08/05/2012

12. ಎಂ.ಜಿ. ನಾಗರಾಜು, ಕರ್ನಾಟಕ ರೈತ ಚಳುವಳಿ ಮತ್ತು ಸತ್ಯಾಗ್ರಹ ಸಂ. – 2 ಪುಟ – 214

13. ಅದೇ ಸಂ. – 2 ಪುಟ – 215

14. ಅದೇ ಸಂ. – 2 ಪುಟ – 217

15. ಅದೇ ಸಂ. – 2 ಪುಟ – 218

16. ಶಿವರಾಮು .ಎಸ್, ಕೆ.ವಿ. ಶಂಕರಗೌಡರ ಜೀವನ ಸಾಧನೆ, ಪುಟ – 101

17. ಬಿ.ಟಿ. ಶ್ರೀನಿವಾಸ್‌ಗೌಡ, ಕಾವೇರಿ ಕಣ್ಣೀರು – ತಣ್ಣೀರು, ಪುಟ – 27

18. ಶಿವರಾಮು .ಎಸ್, ಪೂರ್ವೋಕ್ತ, ಪುಟ – 103

19. ಎಲ್. ಸಂದೇಶ್, ಕಾವೇರಿ ಕದನ, ಪುಟ – 159

20. ಸಂಸದೀಯ ಪಟುಗಳ ಮಾಲಿಕೆ, – ಕೆ.ಎನ್. ನಾಗೇಗೌಡ ಪುಟ – 50

21. ಹೆಚ್.ಎಸ್. ಮುದ್ದೇಗೌಡ, ಪೂರ್ವೋಕ್ತ, ಪುಟ –114

22. ಸಂದರ್ಶನ : ಸಂಶೋಧಕನಿಂದ ಎಂ.ಕೆ. ನಾಗಮಣಿ ನಾಗೇಗೌಡ (ನಾಗೇಗೌಡರು ಪತ್ನಿ)30/04/2012

23. Karnataka state legislative Council Debates, Dated: 01/06/1982

24. Karnataka state legislative Council Debates, Dated: 16/06/1982

25. Ibid, Dated : 23/06/1992

26. ಕರ್ನಾಟಕ ರಾಜ್ಯ ವಿಧಾನ ಪರಿಷತ್‌ನ ನಡಾವಳಿ, ಸಂಪುಟ 137 (23.06.1982) ಪುಟ, 150–154.

27 ಕರ್ನಾಟಕ ರಾಜ್ಯ ವಿಧಾನ ಪರಿಷತ್‌ನ ನಡಾವಳಿ, ಸಂಪುಟ 147 (26.11.1982) ಪುಟ, 183–189

28 ಕರ್ನಾಟಕ ರಾಜ್ಯ ವಿಧಾನ ಪರಿಷತ್‌ನ ನಡಾವಳಿ, ಸಂಪುಟ 153 (31.01.1984) ಪುಟ, 291–319

29 Ibid, Dated : 19/03/1984

30. Ibid, Dated : 26/03/1984

31. Ibid, Dated : 26/03/1985

32 Ibid, Dated : 26.03.1984

33 Ibid, Dated : 27/03/1985

34 Ibid, Dated : 27/03/1985

35 Ibid, Dated : 29/03/1985

36 Ibid, Dated : 23/06/1985

37 Ibid, Dated : 01/05/1985

38 Ibid, Dated : 30/08/1985

39 ಕೈಪಿಡಿ – ಭಾರೀ ನೀರಾವರಿ ಸಚಿವರಾಗಿ ಶಾಸಕರಾಗಿ ಕೆ.ಎನ್.ನಾಗೇಗೌಡರ ಕಿರುಗಾವಲು ಕ್ಷೇತ್ರದ ಸಾಧನೆ, ಪುಟ 7–11



40. ಅದೇ, ಪುಟ 24–25

41 ಸಂದರ್ಶನ : ಸಂಶೋಧಕನಿಂದ, ಎಂ.ಕೆ. ನಾಗಮಣಿ (ನಾಗೇಗೌಡರ ಪತ್ನಿ), 30/04/2012

42. ಸಂದರ್ಶನ : ಸಂಶೋಧಕನಿಂದ, ಎಂ.ಕೆ. ನಾಗಮಣಿ (ನಾಗೇಗೌಡರ ಪತ್ನಿ), 30/04/2012

43. ಸಂದರ್ಶನ : ಸಂಶೋಧಕನಿಂದ, ಹೆಚ್. ತಿಮ್ಮೇಗೌಡ (ನಾಗೇಗೌಡರ ಒಡನಾಡಿ) 05/05/2012

44 ಸಂಸದೀಯ ಪಟುಗಳ ಮಾಲಿಕೆ, – ಕೆ.ಎನ್. ನಾಗೇಗೌಡ, ಪುಟ 94

45 ಹೆಚ್.ಎಸ್. ಮುದ್ದೇಗೌಡ, ಪೂರ್ವೋಕ್ತ, ಪುಟ –195

46. ಅದೇ ಪುಟ 141

47 ಸಂದರ್ಶನ : ಸಂಶೋಧಕನಿಂದ, ಸಿ.ಕೆ ರಾಜಶೇಖರಪ್ಪ (ನಾಗೇಗೌಡರ ಒಡನಾಡಿ) ಚಿಕ್ಕಮೂಲಗೂಡು ದಿನಾಂಕ: 06/05/2012

48 ಸಂಸದೀಯ ಪಟುಗಳ ಮಾಲಿಕೆ, – ಕೆ.ಎನ್. ನಾಗೇಗೌಡ, ಪುಟ 210

49 ಹೆಚ್.ಎಸ್. ಮುದ್ದೇಗೌಡ, ಪೂರ್ವೋಕ್ತ ಪುಟ –21

50. Karnataka State Legislative Assembly Debates, Dated : 04.08.1997

# ಅಧ್ಯಾಯ – ನಾಲ್ಕು

# ಶಿಕ್ಷಣ ಕ್ಷೇತ್ರಕ್ಕೆ ನಾಗೇಗೌಡರ ಕೊಡುಗೆಗೆಗಳು

## ಮಂಡ್ಯ ಜಿಲ್ಲೆಯಲ್ಲಿ ಶಿಕ್ಷಣ :

ಮಾನವನನ್ನು ಅಜ್ಞಾನದ ಕತ್ತಲೆಯಿಂದ ಜ್ಞಾನ ಬೆಳಕಿ ಕಡೆಗೆ ಕೊಂಡ್ಯೂಯುವ ಸಾಧನವೇ ಶಿಕ್ಷಣ. ಇಂತಹ ಸಾಧನವಾದ ಶಿಕ್ಷಣವು 1939ರಲ್ಲಿ ಮಂಡ್ಯ ಜಿಲ್ಲೆ ರೂಪುಗೊಂಡಾಗ ಇಲ್ಲಿನ ಸಾಕ್ಷರತೆಯ ಮಟ್ಟ ಶೇ.1 ರಷ್ಟು ಇತ್ತು. ಮಂಡ್ಯ ಜಿಲ್ಲೆಯ ಜನರ ಹಿಂದಿನಿಂದಲೂ ಶಿಕ್ಷಣದ ಕಡೆ ತೋರಿರುವ ಒಲವು ಕಡಿಮೆ. ಸ್ವಾತಂತ್ರ್ಯ ನಂತರ ಮಂಡ್ಯ ಜಿಲ್ಲೆಯ ಜನರು ಬೇಸಾಯದಷ್ಟೆ ಶಿಕ್ಷಣ ಕ್ಷೇತ್ರಕ್ಕೂ ಗಮನ ನೀಡಿರುವುದನ್ನು ನೋಡಬಹುದು.

ಮಂಡ್ಯ ಜಿಲ್ಲೆಯ ಶಿಕ್ಷಣದ ಬಗ್ಗೆ ತಿಳಿಯಬೇಕಾದರೆ ಪ್ರಾಚೀನ ಕಾಲ, ಧರ್ಮ ಮತ್ತು ಸಂಸ್ಕೃತಿಯಿಂದ ನೋಡಬಹುದು. ಗಂಗರು, ಹೊಯ್ಸಳರ ಕಾಲದಲ್ಲಿ ಜೈನಮಠಗಳು, ಜಿನಾಲಯ, ದೇವಾಲಯಗಳು ಅಗ್ರಹಾರಗಳಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ಅಂತಹ ವಿದ್ಯಾಕೇಂದ್ರಗಳಲ್ಲಿ ಮುಖ್ಯವಾದವುಗಳು ಸಂತೆಬಾಚಹಳ್ಳಿ, ತೊಣ್ಣೂರು, ಮಳವಳ್ಳಿ, ಸಾಸಲು, ವಿಜಯನಗರ ಕಾಲದಲ್ಲಿ ಕನ್ನಡದಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ಟಿಪ್ಪು ಕಾಲದಲ್ಲಿ ಕನ್ನಡ, ಪರ್ಶಿಯನ್, ಅರಾಬಿಕ್, ಮತ್ತು ಇಸ್ಲಾಂ ಭಾಷೆಗಳಲ್ಲಿ ಶಿಕ್ಷಣ ನೀಡಲಾಗುತ್ತಿತ್ತು.[1] ಇಂತಹ ಕಲಿಕಾ ಕೇಂದ್ರಗಳಿಗೆ ಆಳರಸರು ಉದಾರವಾಗಿ ದಾನದತ್ತಿಗಳನ್ನು ನೀಡಿ ಪ್ರೋತ್ಸಾಯಿಸುತ್ತಿದ್ದರು. ಮೈಸೂರು ರಾಜ್ಯದಲ್ಲಿ ಬ್ರಿಟಿಷರ ಆಳ್ವಿಕೆಯ ಕಾಲವನ್ನು ಶಿಕ್ಷಣದ ಸಂಕ್ರಮಣ ಕಾಲ, ಕ್ರೈಸ್ತ ಪಾದ್ರಿಗಳು ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿದ್ದರಿಂದ ಇಂಗ್ಲೀಷ್ ಭಾಷೆಯ ಕಲಿಕೆ ಮತ್ತು ಶಿಕ್ಷಣ ಪದ್ಧತಿಗಳು ಜಾರಿಗೆ ಬಂದಿತ್ತು.[2] 1854ರ ವುಡ್ಸ್ ವರದಿಯ ನಂತರ ಮೈಸೂರು ಸಂಸ್ಥಾನದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಸ್ಥಾಪಿಸಿ ಬಿ.ಎಲ್..ರೈಸ್ ಇದರ ಮುಖ್ಯಸ್ಥರಾದ ನಂತರ ಇಂಗ್ಲೀಷ್ ಮಾದರಿಯ ಪಠ್ಯಕ್ರಮ ಜಾರಿಗೆ ಬಂದಿತು.[3] 1878 ರ ವೇಳೆಗೆ ಮಂಡ್ಯ ಜಿಲ್ಲೆಯಲ್ಲಿ ಹೋಬಳಿ ಮಟ್ಟದಲ್ಲಿ ಕಿರಿಯ ಪ್ರಾಥಮಿಕ, ತಾಲ್ಲೂಕು ಕೇಂದ್ರಗಳಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಮೈಸೂರು ಸಂಸ್ಥಾನದ ಆಡಳಿತ ಕಾಲದಲ್ಲಿ ಸ್ಥಾಪಿಸಿತು. 1921 ರಲ್ಲಿ ಶಿಕ್ಷಣ ಇಲಾಖೆಯು ಅನೇಕ ಶಾಲೆಗಳನ್ನು ತೆರೆಯಲಾಯಿತು. 1930 ರಲ್ಲಿ ಪ್ರಾಥಮಿಕ ಶಾಲೆಗಳ ಆಡಳಿತವನ್ನು ಸ್ಥಳೀಯ ಸರ್ಕಾರಗಳಿಗೆ ವಹಿಸಲಾಯಿತು. ಮಂಡ್ಯ ಜಿಲ್ಲೆಯು ರೂಪಗೊಳ್ಳುವ ಮೊದಲೇ ಇದ್ದ ಪ್ರೌಢಶಾಲೆಗಳೆಂದರೆ ಮಳವಳ್ಳಿ ಪುರಸಭೆ ಪ್ರೌಢಶಾಲೆ (1928) ಹಾಗೂ ಮಂಡ್ಯ ಪುರಸಭಾ ಪ್ರೌಢಶಾಲೆ (1937) ಗಳಿದ್ದುವು, 1941ರ ಜನಗಣತಿ ಪ್ರಕಾರ

ಮಂಡ್ಯ ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣ 8.4% ಮಾತ್ರ 1961ರಲ್ಲಿ 17.30% ರಷ್ಟು 2001 ರಲ್ಲಿ ಶೇ 61.21% 2011ರಲ್ಲಿ ಶೇ 74.02ರಷ್ಟು ಸಾಕ್ಷರತೆಯ ಪ್ರಮಾಣವಿದೆ.

ಸ್ವಾತಂತ್ರ ಪೂರ್ವದಲ್ಲಿ ಮಂಡ್ಯ ಜಿಲ್ಲೆ ಶಿಕ್ಷಣ ಸ್ಥಿತಿ ಕೆಳಹಂತದಲ್ಲಿತ್ತು. ಸ್ವಾತಂತ್ರ್ಯಾದ ನಂತರ ಜಿಲ್ಲೆ ಶಿಕ್ಷಣ ಕ್ಷೇತ್ರ ಪ್ರಗತಿ ಸಾಕಷ್ಟಾಗಿದೆ. ಮಂಡ್ಯ ಜಿಲ್ಲೆಯ ಶಿಕ್ಷಣದ ಪ್ರಗತಿಗಾಗಿ ಕೆ.ವಿ.ಶಂಕರಗೌಡ, ಹೆಚ್.ಕೆ.ವೀರಣ್ಣಗೌಡ, ಎಸ್.ಎಂ.ಲಿಂಗಪ್ಪ, ಜಿ.ಮಾದೇಗೌಡ, ಕೆ.ಎನ್.ನಾಗೇಗೌಡ ಮುಂತಾದವರ ಪರಿಶ್ರಮ ಸಾಕಷ್ಟಿದೆ. ಇವರುಗಳ ಪರಿಶ್ರಮದ ಫಲವಾಗಿ ಮಂಡ್ಯ ಜಿಲ್ಲೆಯಲ್ಲಿ ಹಲವು ಶಿಕ್ಷಣ ಸಂಸ್ಥೆಗಳು ಸ್ಥಾಪಿಸಲ್ಪಟ್ಟವು. ಮಂಡ್ಯ ಜಿಲ್ಲೆಯ ಶೈಕ್ಷಣಿಕ ಪ್ರಗತಿಗೆ ಸರ್ಕಾರಕ್ಕಿಂತ ಖಾಸಗಿ ಶಿಕ್ಷಣ ಸಂಸ್ಥೆಗಳ ಕೊಡುಗೆಯೇ ಅಪಾರವಾದದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಮಂಡ್ಯದ ಜನತಾ ಶಿಕ್ಷಣ ಸಂಸ್ಥೆ, ಕಾಳಮುದ್ದನದೊಡ್ಡಿಯ ಭಾರತೀ ಶಿಕ್ಷಣ ಸಂಸ್ಥೆ, ಮಳವಳ್ಳಿಯ ಶಾಂತಿ ಶಿಕ್ಷಣ ಸಂಸ್ಥೆ, ಮದ್ದೂರಿನ ಹೆಚ್.ಕೆ.ವೀರಣ್ಣಗೌಡರ ಶಿಕ್ಷಣ ಸಂಸ್ಥೆ, ಪಾಂಡವಪುರದ ವಿದ್ಯಾ ಪ್ರಚಾರ (ವಿಜಯ) ಶಿಕ್ಷಣ ಸಂಸ್ಥೆ ಮೊದಲಾದ ಪ್ರಮುಖ ಶೈಕ್ಷಣಿಕ ಸಂಸ್ಥೆಗಳನ್ನು ಕಾಣಬಹುದು, ಜಿಲ್ಲೆಯ ಶೈಕ್ಷಣಿಕ ರೂವಾರಿಗಳೆನಿಸಿದ ಕೆ.ವಿ.ಶಂಕರಗೌಡ, ಜಿ.ಮಾದೇಗೌಡ, ಕೆ.ಎನ್.ನಾಗೇಗೌಡ, ಎಸ್.ಎಂ.ಲಿಂಗಪ್ಪರವರುಗಳ ಶ್ರಮದ ಜೊತೆ ಆದಿಚುಂಚನಗಿರಿ ಮಠದ ವತಿಯಿಂದ ಇಂದು ಜಿಲ್ಲೆ ಹಾಗೂ ರಾಜ್ಯಾದ್ಯಂತ ಶಿಕ್ಷಣದ ಪ್ರಗತಿಗೆ ಸಹಕಾರಿಯಾಗಿದೆ.

## ಮಂಡ್ಯ ಜಿಲ್ಲೆಯ ಶಿಕ್ಷಣ ಒಂದು ಪಕ್ಷಿನೋಟ

ಆಧುನಿಕ ಮಂಡ್ಯದ ರೂವಾರಿ ಕೆ.ವಿ.ಶಂಕರಗೌಡರು "ಶಿಕ್ಷಣವೊಂದು ಪ್ರಗತಿಯ ಬಹುಮುಖ್ಯ ಅಂಶ ಎಂದು ಮನಗಂಡಿದ್ದರು"[4] ಪ್ರಾಥಮಿಕ ಶಿಕ್ಷಣದ ಶಾಲೆಗಳ ಬೆಳವಣಿಕೆಯನ್ನು ನೋಡಿದ್ದಾಗ 1937ರ ನಂತರ ಶಾಲೆಗಳು ಜಿಲ್ಲೆಯಲ್ಲಿ ಸ್ಥಾಪನೆಯಾದವು. ನಂತರ ಎನ್.ಟಿ.ಎಂ.ಎಸ್ (ನ್ಯೂ ಟೈಪ್ ಮಿಡಲ್ಸ್ ಸ್ಕೂಲ್) ಗಳೆಂಬ ಹೆಸರಿನ ಶಾಲೆಗಳು ಆರಂಭವಾದ್ದವು[5] 2011-12ಸಾಲಿನಲ್ಲಿ ಜಿಲ್ಲೆಯಲ್ಲಿ 1052 ಕಿರಿಯ ಹಾಗೂ 1108 ಹಿರಿಯ ಪ್ರಾಥಮಿಕ ಶಾಲೆಗಳಿವೆ[6] ನಂತರ ಸರ್ಕಾರ ಹಾಗೂ ಖಾಸಗಿ ಸಂಸ್ಥೆಗಳು ಪ್ರೌಢಶಾಲೆಗಳನ್ನು ಸ್ಥಾಪಿಸಿವೆ. 2011-12ನೇ ಸಾಲಿನ 437 ಫ್ರೌಢಶಾಲೆಗಳೊಂದಿಗೆ ಮೊರಾರ್ಜಿದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಆದರ್ಶ ವಸತಿ ಶಾಲೆಗಳು, ನವೋದಯ ಹಾಗೂ ಇತರೆ ಕೇಂದ್ರಿಯ ವಿದ್ಯಾಲಯಗಳು ಮಂಡ್ಯ ಜಿಲ್ಲೆಯಲ್ಲಿ ಫ್ರೌಡಶಾಲಾ ಶಿಕ್ಷಣ ನೀಡುತ್ತಿವೆ.

ಮಂಡ್ಯದ ಹಿರಿಯ ರಾಜಕಾರಣಿ ಶಂಕರಗೌಡರು ಶಿಕ್ಷಣ ಸಚಿವರಾಗಿದ್ದಾಗ 1972ರಲ್ಲಿ 2 ವರ್ಷದ ಪಿ.ಯು.ಸಿ ಶಿಕ್ಷಣ ಕ್ರಮವನ್ನೇ ಕರ್ನಾಟಕದಲ್ಲಿ ಜಾರಿಗೆ

ತರಲಾಯಿತು. ಮಂಡ್ಯ ಜಿಲ್ಲೆ ಪ್ರಸ್ತುತ ಸುಮಾರು 100 ಕ್ಕೂ ಹೆಚ್ಚು ಕಾಲೇಜುಗಳಿವೆ. ಕರ್ನಾಟಕ ರಾಜ್ಯದ ಕೇಂದ್ರ ಮಾನವ ಸಂಪನ್ಮೂಲ ಶಾಖೆಯ ಪದವಿ ಪೂರ್ವ ಹಂತದಲ್ಲಿ ವೃತ್ತಿ ಶಿಕ್ಷಣ ಆರಂಭಿಸಬೇಕೆಂಬ ಆದೇಶದಂತೆ 1978-79 ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಕೃಷಿ ಮತ್ತು ಕೃಷಿಯೇತರ ವಿಷಯಗಳ ಬಗ್ಗೆ ವೃತ್ತಿ ಶಿಕ್ಷಣ ಕೋರ್ಸ್‌ಗಳು ಆರಂಭಗೊಂಡವು. ಮಂಡ್ಯ ಜಿಲ್ಲೆಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಬೇಕಾದ ತರಬೇತಿ ಹೊಂದಿದ ಶಿಕ್ಷಕರ ಅವಶ್ಯಕತೆಯನ್ನು ಮನಗಂಡು ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಜಿಲ್ಲೆಯಲ್ಲಿ 1974ರಲ್ಲಿ ಮೊಟ್ಟಮೊದಲು ಬಾರಿಗೆ ಶಂಕರಗೌಡ ಶಿಕ್ಷಣ ಮಹಾವಿದ್ಯಾಲಯವನ್ನು ಜನತಾ ಶಿಕ್ಷಣ ಸಂಸ್ಥೆ ವತಿಯಿಂದ ಮಂಡ್ಯದಲ್ಲಿ ಸ್ಥಾಪಿಸಲಾಯಿತು. ಪ್ರಸ್ತುತ ಮಂಡ್ಯ ಜಿಲ್ಲೆಯಲ್ಲಿ 10 ಬಿ.ಇಡಿ ಶಿಕ್ಷಣ ಸಂಸ್ಥೆಗಳಿವೆ.

ಮಂಡ್ಯ ಜಿಲ್ಲೆಯಲ್ಲಿ ತಾಂತ್ರಿಕ ಶಿಕ್ಷಣ ವಿವಿಧ ರೀತಿಯಲ್ಲಿ ನೀಡಲಾಗುತ್ತಿದೆ. ಜಿಲ್ಲೆ ಮೊದಲ ಬಾರಿಗೆ ಗ್ರಾಮೀಣ ಕುಶಲಕರ್ಮಿಗಳ ತರಬೇತಿ ಕೇಂದ್ರ ಎಂಬ ಹೆಸರಿನಲ್ಲಿ ನಾಗಮಂಗಲದಲ್ಲಿ 29.09.1956 ರಲ್ಲಿ ಪ್ರಾರಂಭ ವಾಯಿತು ಜಿಲ್ಲೆಯಲ್ಲಿ 2005ರ ವರೆಗೆ ಕಾರ್ಯ ನಿರ್ವಹಿಸುತ್ತಿದ್ದ ಏಕೈಕ ತಾಂತ್ರಿಕ ಶಿಕ್ಷಣ ಮಹಾವಿದ್ಯಾಲಯವಾದ ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು ಮಂಡ್ಯದಲ್ಲಿ 1962ರಲ್ಲಿ ಪ್ರಾರಂಭವಾಯಿತು. ಪ್ರಸ್ತುತ ನಾಗಮಂಗದಲ್ಲಿ ಆದಿಚುಂಚನಗಿರಿ ಇಂಜಿನಿಯರಿಂಗ್ ಕಾಲೇಜು ಕೆ.ಆರ್.ಪೇಟೆಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಕೆ.ಎಂ.ದೊಡ್ಡಿಯ ಭಾರತಿ ಶಿಕ್ಷಣ ಟ್ರಸ್ಟ್‌ನ ಜಿ.ಮಾದೇಗೌಡ ತಾಂತ್ರಿಕ ಕಾಲೇಜುಗಳಿವೆ. ಜಿಲ್ಲೆಯಲ್ಲಿ ಪ್ರಥಮ ಭಾರಿಗೆ ಪಾಲಿಟೆಕ್ನಿಕ್ ಸಂಸ್ಥೆಯನ್ನು ಕೃಷ್ಣರಾಜ ಪೇಟೆಯಲ್ಲಿ 1960ರಲ್ಲಿ ಸರ್ಕಾರದಿಂದ ಪ್ರಾರಂಬಿಸಲ್ಪಟ್ಟಿತು. ಇಂದು ಸರ್ಕಾರಿ ಹಾಗೂ ಖಾಸಗಿ ಹಲವು ಪಾಲಿಟೆಕ್ನಿಕ್ ಕಾಲೇಜುಗಳನ್ನು ಕಾಣಬಹುದು. ಮಂಡ್ಯ ಜಿಲ್ಲೆಯಲ್ಲಿ 8 ಸರ್ಕಾರಿ ಹಾಗೂ ಹಲವು ಖಾಸಗಿ ಐ.ಟಿ.ಐ ಕಾಲೇಜುಗಳು ಹಲವಾರು ವಿಷಯಗಳಲ್ಲಿ ತರಬೇತಿ ನೀಡುತ್ತಿವೆ.

ಮಂಡ್ಯ ಜಿಲ್ಲೆಯಲ್ಲಿ ಫ್ರೌಡಶಾಲೆಗಳಿಂದ ಹೊರಬಂದ ವಿದ್ಯಾರ್ಥಿಗಳು ತಮ್ಮ ಉನ್ನತ ವ್ಯಾಸಂಗಕ್ಕಾಗಿ ಮೈಸೂರು ಬೆಂಗಳೂರು ಹಾಸನಗಳಿಗೆ ಹೋಗುತ್ತಿದ್ದರು. ಇಂದು ಪ್ರಸ್ತುತ 15 ಸರ್ಕಾರಿ ಮತ್ತು 15 ಖಾಸಗಿ ಪ್ರಥಮ ದರ್ಜೆ ಕಾಲೇಜುಗಳಿವೆ. ಮಂಡ್ಯದ ತೂಬಿನ ಕೆರೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸರ್.ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರವಿದೆ. ಅಲ್ಲದೆ ಜಿಲ್ಲೆಯ ಹಲವು ಕಾಲೇಜುಗಳಲ್ಲೂ ಸ್ನಾತಕೋತ್ತರ ಕೋರ್ಸ್‌ಗಳನ್ನು ತೆರೆಯಲಾಗಿದೆ. ವಿ.ಸಿ.ಫಾರಂನ ಕೃಷಿ ವಿಜ್ಞಾನ ಕಾಲೇಜು ರಾಜ್ಯ ಪ್ರಮುಖ ಕೃಷಿ ವಿಜ್ಞಾನ ಕೇಂದ್ರವಾಗಿದೆ. ಮಂಡ್ಯ ಜಿಲ್ಲೆಯಲ್ಲಿ ವೈದ್ಯಕೀಯ ಮತ್ತು ಆರೇ ವೈದ್ಯಕೀಯ ಶಿಕ್ಷಣವನ್ನು ನೀಡಲು ಮಂಡ್ಯ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಬೆಳ್ಳೂರಿನಲ್ಲಿ ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯವು 1986ರಲ್ಲಿ

ಸ್ಥಾಪನೆಯಾಯಿತು. ಪ್ರಸ್ತುತ ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆ (ಮಿಮ್ಸ್) ಮತ್ತೊಂದು ವೈದ್ಯಕೀಯ ಕಾಲೇಜಾಗಿದೆ. ಅಲ್ಲದೆ ಹಲವಾರು ನರ್ಸಿಂಗ್‌ಶಾಲೆ, ನರ್ಸಿಂಗ್ ಕಾಲೇಜು ಫಾರ್ಮಸಿ ಕಾಲೇಜುಗಳಲ್ಲಿ ವೈದ್ಯಕೀಯ ಮತ್ತು ಆರೇ ವೈದ್ಯಕೀಯ ಶಿಕ್ಷಣ ನೀಡುತ್ತಿವೆ.

ಮಂಡ್ಯ ಜಿಲ್ಲೆಯ ಶಿಕ್ಷಣ ಕ್ಷೇತ್ರದಲ್ಲಿ ಪ್ರಮುಖ ಸಂಸ್ಥೆಗಳಾದ ಮಂಡ್ಯದ ಪಿ.ಇ.ಟಿ(ರಿ), ಮಳವಳ್ಳಿಯ ಶಾಂತಿ ಶಿಕ್ಷಣ ಸಂಸ್ಥೆ (ರಿ), ಕೆ.ಎಂ.ದೊಡ್ಡಿಯ ಭಾರತೀಶಿಕ್ಷಣಟ್ರಸ್ಟ್ (ರಿ) ಪಾಂಡವಪುರದ ವಿದ್ಯಾ ಪ್ರಚಾರ ಸಂಘ (ರಿ) ನಾಗಮಂಗಲದ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ (ರಿ) ಇನ್ನು ಮೊದಲಾದ ಸಂಸ್ಥೆಗಳು ಶಿಕ್ಷಣದ ಪ್ರಗತಿಗೆ ತಮ್ಮ ಅವಿಸ್ಮರಣೆಯ ಕೊಡುಗೆ ನೀಡುತ್ತಿವೆ.

**ಶಿಕ್ಷಣ ಸಂಸ್ಥೆಗಳ ಸ್ಥಾಪನೆಯಲ್ಲಿ ನಾಗೇಗೌಡರು**

ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆಯಲ್ಲಿ ಹಿಂದುಳಿದ ತಾಲ್ಲೋಕಾಗಿದೆ. 1969–70ರ ವರೆಗೂ ಮಳವಳ್ಳಿಯ ಜನರು ಫ್ರೌಡಶಾಲೆಯನಂತರ ಉನ್ನತ ವ್ಯಾಸಂಗವನ್ನು ಮೈಸೂರು ಬೆಂಗಳೂರು ಇತರೆಡೆಗೆ ಹೋಗಿ ಮಾಡಬೇಕಿತ್ತು. ಸ್ವತಃ ನಾಗೇಗೌಡರೇ ಫ್ರೌಡಶಾಲೆಯ ನಂತರ ಪಿ.ಯು.ಸಿಗೆ ಬೆಂಗಳೂರಿಗೆ ಹೋಗಿ ಸೇರಿದ್ದರು. ಆರ್ಥಿಕ ಅನುಕೂಲ ಇದ್ದವರು ಮಾತ್ರ ಬೇರೆಡೆಗೆ ಹೋಗಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಆದರೆ ಬಡ ಜನತೆಗೆ ಸಾಧ್ಯವಾಗುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಕೆ.ಎನ್.ನಾಗೇಗೌಡರು ಮಳವಳ್ಳಿಯಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲು ಪಟ್ಟಶ್ರಮ ಹೋರಾಟ ಅಷ್ಟಿಷ್ಟಲ್ಲ. ಕಾಲೇಜು ಸ್ಥಾಪನೆಗೆ ಕಾರಣವಾದ ಹಿನ್ನಲೆಯನ್ನು ನೋಡಿದಾಗ ಮಳವಳ್ಳಿಯ ಪುರಸಭೆಯ ಮುಂದೆ ಇದ್ದ ಉದ್ಯಾನವನದಲ್ಲಿ ಆಕಾಶವಾಣಿಯ ಸುದ್ಧಿ ಕೇಳಲು ಸಮಾನ ಮನಸ್ಕ ಯುವಕರ ಮನಸ್ಸಿನಲ್ಲಿ ಕಾಲೇಜು ಸ್ಥಾಪಿಸಲೆಂದು ಈ ವಿಚಾರ ರೂಪತಳೆಯಿತು.[7] ಯುವ ವಿದ್ಯಾರ್ಥಿ ಮುಖಂಡ ಕೆ.ಎನ್.ನಾಗೇಗೌಡರು ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡು ಕೆ.ಎಂ.ದೊಡ್ಡಿಯಂತಹ ಸಣ್ಣ ಊರಿಗೆ ಕಾಲೇಜು ಮಂಜೂರು ಮಾಡಿದ್ದಾರೆ. ಮಂಡ್ಯ ಜಿಲ್ಲೆ ಸ್ಥಾಪನೆಗೂ ಮುನ್ನ ಮೊದಲ ಫ್ರೌಢಶಾಲೆ ಮಳವಳ್ಳಿಯಲ್ಲಿದೆ. ನಾಗೇಗೌಡರು ಕಾಲೇಜು ಸ್ಥಾಪಿಸಲು ಶಿಕ್ಷಣ ಇಲಾಖೆಗೆ ಪತ್ರ ಬರೆದರು. ಇದಕ್ಕೆ ಅನುಮತಿ ಕೊಡಲು ಸಾಧ್ಯವಿಲ್ಲ ಎಂದು ಉತ್ತರ ಬಂತು. ಇದ್ದರಿಂದ ನಾಗೇಗೌಡರು ಗೆಳೆಯರನ್ನು ಸಂಘಟಿಸಿ ಮಳವಳ್ಳಿಯ ಕೇಂದ್ರ ಸ್ಥಳವಾದ ಇಂದಿನ ಬಾಲಕಿಯರ ಮಾಧ್ಯಮಿಕ ಆವರಣದಲ್ಲಿ ಉಪವಾಸ ಸತ್ಯಾಗ್ರಹ ಹಾಗೂ ಮುಷ್ಕರ ನಡೆಸಿದ್ದರು. ಈ ಸಂದರ್ಭ ಮಳವಳ್ಳಿಯ ಹಿರಿಯರಾಗಿ ಕೌನ್ಸಿಲರ್‌ಗಳಾದ ಶ್ರೀ ಸುಬ್ಬೇಗೌಡರು ಮತ್ತು ನಂಜುಂಡಯ್ಯ ನವರ ಬೆಂಬಲದಿಂದಾಗಿ ಕೆ.ಎನ್.ನಾಗೇಗೌಡರು 32 ದಿನ ಕಾಲ ಮುಷ್ಕರ ನಡೆಸಿದ್ದರು[8]. ಈ ಸಂದರ್ಭದಲ್ಲಿ ಕೆ.ವಿ.ಶಂಕರಗೌಡರು ಶಿಕ್ಷಣ ಮಂತ್ರಿಗಳು ಡಾ.ದೇ.ಜವರೇಗೌಡರು ಮೈಸೂರು ವಿಶ್ವವಿದ್ಯಾನಲಯದ ಉಪಕುಲಪತಿಗಳಾಗಿದ್ದರು. ಶಾಸಕರಾದ

ಎಂ.ಮಲ್ಲಿಕಾರ್ಜುನಸ್ವಾಮಿ, ಶಿವಪ್ಪ, ಸಂಸದರಾದ ಎಸ್.ಎಂ.ಕೃಷ್ಣರ ಬೆಂಬಲವು ನಾಗೇಗೌಡರಿಗೆ ಶಿಕ್ಷಣ ಸಂಸ್ಥೆ ಸ್ಥಾಪನೆ ಮಾಡಲು ದೊರೆಯಿತು ನಾಗೇಗೌಡರ ಮುಷ್ಕರಕ್ಕೆ ಮಣಿದು ಕೆ.ವಿ.ಶಂಕರಗೌಡರು ಮಳವಳ್ಳಿಗೆ ಬಂದು. ಈ ಸಂದರ್ಭ ಕೆ.ವಿ.ಶಂಕರಗೌಡರು "ಕಾಲೇಜಿಗೆ ಅನುಮತಿ ಕೊಡೋದು ದೊಡ್ಡ ವಿಚಾರವಲ್ಲ ಅದನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗುವ ಸಾಮರ್ಥ್ಯ ಇರಬೇಕು. ಆ ಸಾಮರ್ಥ್ಯ ನಿಮ್ಮಲಿದೆಯೇ? ಎಂದಾಗ, ನಾಗೇಗೌಡರು ತಮ್ಮ ಸ್ವಾತಿಕ ಹೋರಾಟವನ್ನು ಶಂಕರಗೌಡರಿಗೆ ಮನದಟ್ಟು ಮಾಡಿದರ ಫಲವಾಗಿ ಕಾಲೇಜನ್ನು ಮಂಜೂರು ಮಾಡಿದ್ದರು ಜಿ.ಸುಬ್ಬೇಗೌಡರು, ನಂಜುಂಡಯ್ಯ, ಕೆ.ಎನ್.ನಾಗೇಗೌಡರು, ಅಂದಿನ ಉಪಕುಲಪತಿ ದೇ.ಜವರೇಗೌಡರಿಗೆ ಸಮಸ್ಯೆಯ ನೈಜತೆ ಅರಿವನ್ನು ಮಾಡಿಕೊಟ್ಟರು. ತತ್ಪರಿಣಾಮವಾಗಿ ಖಾಸಗಿ ಕಾಲೇಜಿನ ಸ್ಥಾಪನೆಗೆ ಕೆಲವು ಷರತ್ತುಗಳೊಡನೆ 50 ಸಾವಿರ ರೂ ಠೇವಣಿಯನ್ನು ವಿಶ್ವವಿದ್ಯಾನಿಲಯಕ್ಕೆ ಇಡಬೇಕೆಂಬ ನಿಬಂಧನೆಯ ಮೂಲಕ ಕಾಲೇಜಿಗೆ ಅನುಮತಿಯನ್ನು ನೀಡಲಾಯಿತು. ಈ ಸಂದರ್ಭ ಮುಷ್ಕರ ನಡೆಸುತ್ತಿದ್ದ ಸ್ಥಳದಲ್ಲಿ ಜನರಿಂದ 34.000 ರೂ ಸಂಗ್ರಹವಾಯಿತು. ಸುಬ್ಬೇಗೌಡರು 10 ಸಾವಿರ ರೂಪಾಯಿ ನೀಡಿದ್ದರು ಉಳಿದ ಹಣವನ್ನು ರಸಮಂಜರಿ ಕಾರ್ಯಕ್ರಮ ನಡೆಸುವುದರ ಮೂಲಕ ನಾಗೇಗೌಡರು ಸಂಗ್ರಹಿಸಿದ್ದರು.

ನಾಗೇಗೌಡರು ಹೋರಾಟ ಮೂಲಕ ಕಾಲೇಜಿಗೆ ಅನುಮತಿ ದೊರಕಿದ್ದ ನಂತರ ಶಾಂತಿ ಶಿಕ್ಷಣ ಸಂಸ್ಥೆಯ ಹೆಸರಿನಲ್ಲಿ ಕಾಲೇಜಿನ ಆಡಳಿತ ಮಂಡಳಿಯು ರಚನೆಯಾಯಿತ್ತು. ಸ್ವಾತಂತ್ರ್ಯ ಹೋರಾಟಗಾರ ಹೆಚ್.ವಿ.ವೀರೆಗೌಡರು ಅಧ್ಯಕ್ಷರಾದ ನಂಜುಂಡಯ್ಯ ನವರು ಉಪಾಧ್ಯಾಕ್ಷರಾಗಿ ಕೆ.ಎನ್.ನಾಗೇಗೌಡರು ಪ್ರಧಾನ ಕಾರ್ಯದರ್ಶಿಯಾಗಿ ಎನ್.ಸುಬ್ಬೇಗೌಡ ಖಂಜಾಚಿಯಾಗಿ ಆಯ್ಕೆಯಾದರು. ಕಾಲೇಜಿನ ಪ್ರಥಮ ಪ್ರಾಂಶುಪಾಲರಾಗಿ ಎಂ.ಮಲ್ಲಿಕಾರ್ಜುನಸ್ವಾಮಿಯವರು ಆಡಳಿತದ ಚುಕ್ಕಾಣಿ ಹಿಡಿದ್ದರು. ಶ್ರೀ ಲಕ್ಷೀನರಸಿಂಹ ಸ್ವಾಮಿ ವ್ಯವಸಾಯ ಸೇವಾ ಸಹಕಾರ ಸಂಘದ (ಸೊಸೈಟಿ) ಕಟ್ಟಡದ ಸ್ವಲ್ಪ ಭಾಗವನ್ನು ತಾತ್ಕಾಲಿಕವಾಗಿ ಪಡೆದ್ದು ಜೂನ್ 16.1970ರಂದು ವಿದ್ಯಾಮಂತ್ರಿ ಕೆ.ವಿ.ಶಂಕರಗೌಡರು ಕಾಲೇಜನ್ನು ಉದ್ಘಾಟಿಸಿದರು.[9] ಪ್ರಾರಂಭದಲ್ಲಿ ಪಿ.ಯು.ಸಿ. ಮಟ್ಟದಲ್ಲಿ ನಂತರ 1971ರ ಶೈಕ್ಷಣಿಕ ವರ್ಷದಿಂದ ಪದವಿ ತರಗತಿಗಳು ಆರಂಭವಾದ್ದವು ಪುರಸಭೆಯ ವತಿಯಿಂದ ನಡೆಯುತ್ತಿದ್ದ ಪ್ರೌಢಶಾಲೆಯ ಕಟ್ಟಡದಲ್ಲಿ ತರಗತಿಗಳನ್ನು ನಡೆಸಲು ಶಿಕ್ಷಣ ಇಲಾಖೆಯಲ್ಲಿ ಹಾಗೂ ಪುರಸಭೆಯ ಅನುಮತಿ ಪಡೆಯಲಾಯಿತು. ವಿಶ್ವವಿದ್ಯಾನಿಲಯ ವಿಧಿಸಿದ್ದ ಷರತ್ತುಗಳನ್ನು ಪರಿಮಿತ ಕಾಲಾವಧಿಯಲ್ಲಿ ಪೂರೈಸಲು ಅಸಾಧ್ಯವಾಯಿತು ಕಾಲೇಜಿನ ಕೊರತೆಗಳನ್ನು "ಕಾಲೇಜು ಅಂಗೀಕಾರ ಸಮಿತಿ" ಅಕ್ಷೇಪಿಸಿ ಅಫಿಲಿಯೇಷನ್ (ಮಾನ್ಯತೆ) ರದ್ದುಗೊಳಿಸಿತ್ತು.[10] ಮಾನ್ಯತೆ ರದ್ದುಪಡಿಸಿದಾಗ ನಾಗೇಗೌಡರು ಮತ್ತೆ ಹೋರಾಟ ಮಾಡಿ ಮಾನ್ಯತೆ ಗಳಿಸುವಲ್ಲಿ ಯಶಸ್ವಿಯಾದರು.

ಕೆ.ಎನ್.ನಾಗೇಗೌಡರು ಮೈಸೂರು ಸಕ್ಕರೆ ಕಂಪನಯ ಅಧ್ಯಕ್ಷರಾಗಿದ್ದಾಗ ಈ ಶಿಕ್ಷಣ ಸಂಸ್ಥೆಗೆ ಹಣ ಒದಗಿಸಿದ್ದರು[11] ಈ ಹಣದಿಂದ ಮಳವಳ್ಳಿ-ಮೈಸೂರು ರಸ್ತೆಯಲ್ಲಿ 6 ಎಕರೆ ಜಮೀನು ಖರೀದಿಸಿತು. ಪ್ರಾರಂಭದಲ್ಲಿ 8 ಕೊಠಡಿಯನ್ನು ನಿರ್ಮಿಸಲಾಯಿತು. ನಂತರ ಇಗೀನ 3 ಅಂತಸ್ಥಿನ ಕಟ್ಟಡವನ್ನು ನಿರ್ಮಿಸಲು ಪ್ರಾರಂಭಿಸಿದ್ದರು. ಇದ್ದಕ್ಕಾಗಿ ಕೆ.ಎನ್.ನಾಗೇಗೌಡರು ಹಲವಾರು ಸಂಘ ಸಂಸ್ಥೆಗಳಿಂದ ಸಾಲವನ್ನು ತಂದರು. ಅಧ್ಯಾಪಕರು ಮತ್ತು ಸಿಬ್ಬಂದಿ ವರ್ಗದವರು ಸಾರ್ವಜನಿಕರಿಂದ ಧನ ಸಹಾಯ ಯೋಜಿಸಿದ್ದರು. ಇದಕ್ಕೆ ನಾಟಕಗಳು ಹಾಗೂ ಹಲವು ಪ್ರದರ್ಶನ ಕಲೆಗಳ ಮೂಲಕ ಹಣ ಸಂಗ್ರಹಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು[12]

ಕೆ.ಎನ್.ನಾಗೇಗೌಡರು ಪದವಿ ತರಗತಿಯಲ್ಲಿ ಎಲ್ಲಾ ಕೋರ್ಸುಗಳನ್ನು ಪರಿಚಯಸಿದ್ದರು. ಅಲ್ಲದೆ ಕಾನೂನು ಕಾಲೇಜು ಐ.ಟಿ.ಐ ಕಾಲೇಜು ವೃತ್ತಿ ಶಿಕ್ಷಣ ಕೋರ್ಸುಗಳನ್ನು ತೆರೆಯಲು ತಾವೇ ಸ್ವತಃ ಹಣವನ್ನು ವಿನಿಯೋಗಿಸುತ್ತಿದ್ದರು. 1996 ರಲ್ಲಿ ಸಂಸ್ಥೆ ಬೆಳ್ಳಿಹಬ್ಬವನ್ನು ಆಚರಿಸಿ ಕೊಂಡಿದೆ. ಆ ಸಂದರ್ಭದಲ್ಲಿ ಕೆ.ಎನ್.ನಾಗೇಗೌಡರ ದೂರಾಲೋಚನೆಯ ಫಲವಾಗಿ **"ಶಾಂತಿ ಸೇವಾ ಟ್ರಸ್ಟ್"** ಮಳವಳ್ಳಿಯಲ್ಲಿ ರೂಪುಗೊಂಡಿತು. ಈ ಟ್ರಸ್ಟ್ ಮೂಲಕ ನಾಗೇಗೌಡರು 100 ಸರಳ ಸಾಮೂಹಿಕ ವಿವಾಹವನ್ನು ನಡೆಸಿದ್ದರು. ಈ ಸಂದರ್ಭದಲ್ಲಿ ಆರೋಗ್ಯ ಶಿಬಿರಗಳು, ಗ್ರಾಮೀಣ ಜನತೆ ಸ್ವಚ್ಚತೆ ಹಾಗೂ ಶಿಕ್ಷಣದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು[13] ಕಾಲೇಜಿನ ಕಟ್ಟಡ ಅಪೂರ್ಣಗೊಂಡಾಗ ತಮ್ಮ ಮನೆಯನ್ನೇ ಆಡಮಾನ ಇಟ್ಟು 45 ಲಕ್ಷ ರೂ ಸಾಲ ಪಡೆದು ಕಟ್ಟಡವನ್ನು ಪೂರ್ಣಗೊಳಿಸಿದ್ದರು ತಮ್ಮ ಕೊನೆಯ ಉಸಿರಿರುವತನಕ ಶಾಂತಿ ಶಿಕ್ಷಣ ಸಂಸ್ಥೆಯ ಉನ್ನತಿಗೆ ಹಗಲಿರುಳು ದುಡಿದಿದ್ದಾರೆ.

## ಶಾಂತಿ ಶಿಕ್ಷಣದ ಸಂಸ್ಥೆ (ರಿ) ಮಳವಳ್ಳಿ

ಮಳವಳ್ಳಿ ತಾಲ್ಲೋಕು ಮಂಡ್ಯ ಜಿಲ್ಲೆಯಲ್ಲಿಯೇ ಶೈಕ್ಷಣಿಕ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ತಾಲ್ಲೋಕಾಗಿದ್ದು ಇಲ್ಲಿನ ಬಹುತೇಕ ಭೂಭಾಗವು ಒಣ ಪ್ರದೇಶವಾಗಿದೆ. ಮಳವಳ್ಳಿಯಲ್ಲಿ ಜಿಲ್ಲೆಯಲ್ಲೇ ಪ್ರಥಮ ಹೈಸ್ಕೂಲ್ (ಪುರಸಭೆ ಹೈಸ್ಕೂಲ್) ಸ್ಥಾಪನೆಯಾಯಿತು. ಈ ಹಿಂದುಳಿದ ತಾಲ್ಲೋಕಿನ ವಿದ್ಯಾರ್ಥಿಗಳು ಪ್ರೌಢಶಾಲೆಯ ವಿದ್ಯಾಭ್ಯಾಸದ ನಂತರ ಮುಂದಿನ ಶಿಕ್ಷಣಕ್ಕಾಗಿ ಮಂಡ್ಯ, ಮೈಸೂರು, ಬೆಂಗಳೂರಿಗೆ ಹೋಗುತ್ತಿದ್ದರು ಮುಂದುವರಿಸಬೇಕೆಂಬ ಕನಸು ಕನಸಾಗಿಯೇ ಉಳಿಯುತ್ತಿತ್ತು. ಇಂತಹ ತಾಲ್ಲೋಕಿನ ಜನತೆಗೆ ಉನ್ನತ ವಿದ್ಯಾಭ್ಯಾಸದ ಸೌಲಭ್ಯವನ್ನು ಕಲ್ಪಿಸಿಕೊಡುವ ಉದ್ದೇಶದಿಂದ 1970 ರಲ್ಲಿ ಶಿಕ್ಷಣ ಸಂಸ್ಥೆಯು ಕೆ.ಎನ್.ನಾಗೇಗೌಡ ನೇತೃತ್ವದಲ್ಲಿ ಪ್ರಾರಂಭಗೊಂಡಿತು.

ಈ ಸಂದರ್ಭದಲ್ಲಿ ಮೈಸೂರು ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್ 1960 ರ ಪ್ರಕಾರ ಶಾಂತಿ ಶಿಕ್ಷಣ ಸಂಸ್ಥೆಯು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ವಿ.ವೀರೇಗೌಡರನ್ನು ಅಧ್ಯಕ್ಷರಾನ್ನಾಗಿ, ನಂಜುಂಡಯ್ಯನವರು ಉಪಾಧ್ಯಕ್ಷರಾಗಿ, ಎನ್.ಸುಬ್ಬೇಗೌಡರು ಖಜಾಂಚಿಯಾಗಿ, ಕೆ.ಎನ್.ನಾಗೇಗೌಡರು ಪ್ರಧಾನ ಕಾರ್ಯದರ್ಶಿಯಾಗಿ, ಎಂ.ಎಸ್.ಮರಿಯಪ್ಪನವರು ಕಾರ್ಯದರ್ಶಿಯಾಗಿ ಆಯ್ಕೆಯಾದ್ದರು. ಅಲ್ಲದೆ ಬಿ.ಪಿ.ನಾಗರಾಜಮೂರ್ತಿ, ಎಂ.ಮಲ್ಲಿಕಾರ್ಜುನ ಸ್ವಾಮಿ, ನಾಗರಾಜಪ್ಪ, ಹೆಚ್.ಕೆ.ರಾಮಚಂದ್ರಯ್ಯ, ಬಿ.ಆರ್.ಸುಂದಯ್ಯ ಅಯ್ಯಂಗಾರ್ ಬಿ, ಎಂ.ಎನ್.ಮಲ್ಲಪ್ಪ, ಕೆ.ಸಿ.ಪುಟ್ಟವೀರೇಗೌಡ, ಪುಟ್ಟೇಗೌಡರು ಆಡಳಿತ ಮಂಡಳಿಯ ಸದಸ್ಯರಾಗಿ ಆಯ್ಕೆಯಾದ್ದರು ಈ ಸಂಸ್ಥೆ ಎಸ್.ನಂ 11/70–71ಮಂಡ್ಯ ದಿನಾಂಕ/ 25.06.1970ರಲ್ಲಿ ಸ್ಥಾಪನೆಯಾಯಿತು.

**ಶಾಂತಿ ಶಿಕ್ಷಣ ಸಂಸ್ಥೆಯ ಧ್ಯೆಯೋದ್ದೇಶಗಳು**

- ನರ್ಸರಿ, ಪ್ರಾಥಮಿಕ, ಪ್ರೌಢಶಾಲೆಗಳು, ಕಾಲೇಜು ಮತ್ತು ಔದ್ಯಮಿಕ ಶಿಕ್ಷಣ ಸಂಸ್ಥೆಗಳ ನಡೆಸುವುದು.
- ಶಾಲೆಗೆ ಹೋಗುವ ಹೆಣ್ಣು ಮತ್ತು ಗಂಡು ಮಕ್ಕಳ ಶ್ರೇಯೋಭಿವೃದ್ದಿಗಾಗಿ ಜಾತಿ ಮತಗಳ ಬೇಧವಿಲ್ಲದೆ ಸಾಮಾಜಿಕ ಅಭಿವೃದ್ಧಿ ಕಾರ್ಯಗಳನ್ನು ಬೆಂಬಲಿಸುವುದು.
- ಶಾಲೆ ಹೋಗುವ ಮಕ್ಕಳ ಭೌತಿಕ, ಭೌದ್ಧಿಕ, ನೈತಿಕ ವಿಚಾರಗಳನ್ನು ಹೆಚ್ಚಿಸುವ ಸಲುವಾಗಿ ಸೂಕ್ತ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ಅನುಸರಿಸುವುದು.
- ಗ್ರಂಥಾಲಯಗಳನ್ನು ರಾತ್ರಿ ಮತ್ತು ಹಗಲು ಶಾಲಾ ಮತ್ತು ಕಾಲೇಜುಗಳನ್ನು ತೆರೆಯುವುದನ್ನು ಮಕ್ಕಳಲ್ಲಿನ ಸಾಂಸ್ಕೃತಿಕ ಹಾಗೂ ಕ್ರೀಡಾ ಸಾಮರ್ಥ್ಯಗಳನ್ನು ಹೊರತೆಗೆಯಲು ಪ್ರೇರೇಪಿಸುವ ಸಲುವಾಗಿ ಸ್ಪರ್ಧೆಗಳನ್ನು ನಡೆಸುವುದರ ಮೂಲಕ ಶೈಕ್ಷಣಿಕ ಜ್ಞಾನವನ್ನು ಹರಡುವುದು. ಶಾಂತಿ ಶಿಕ್ಷಣ ಸಂಸ್ಥೆಯ ನಿಬಂಧನೆ ಮತ್ತು ನಿಯಮ.

* ಸದಸ್ಯತ್ವ ಶುಲ್ಕ ಸಂಗ್ರಹಣೆ
* 2 ವರ್ಷಕ್ಕೊಮ್ಮೆ ಆಡಳಿತ ಮಂಡಳಿಯ ಸರ್ವಸದಸ್ಯರ ಸಭೆ.
* ಆಡಳಿತ ಮಂಡಳಿಯು ಸ್ವಚ್ಚ ಹಾಗೂ ಪಾರದರ್ಶಕವಾಗಿ ಕಾರ್ಯನಿರ್ವಹಿಸುವುದು

* ಸಾರ್ವಜನಿಕರು ಸ್ವಇಚ್ಛೆಯಿಂದ ವಂತಿಗೆ ನೀಡಿದರ ವಂತಿಗೆ ಸ್ವೀಕರಿಸುವುದು

* ಗ್ರಾಮೀಣ ಪ್ರದೇಶದ ಶಿಕ್ಷಣಕ್ಕಾಗಿ ಹೊಸ ಕೋರ್ಸ್‌ಗಳನ್ನು ತೆರೆಯುವುದು.

* ಅಂದು ಪ್ರಧಾನ ಕಾರ್ಯದರ್ಶಿಗಳಿಗೆ ಆಡಳಿತ ನಿರ್ವಹಣೆಯ ಅಧಿಕಾರ ನೀಡುವುದು.[14]

ಶಾಂತಿ ಕಾಲೇಜನ್ನು 16 ಜೂನ್ 1970ರಲ್ಲಿ ವಿದ್ಯಾಮಂತ್ರಿ ಕೆ.ವಿ.ಶಂಕರಗೌಡ ಉದ್ಘಾಟಿಸಿದ್ದರು. ಇದು "ತಮಸೋಮ ಜ್ಯೋತಿರ್ಗಮಯ" ಎಂಬ ಧ್ಯೇಯ ವಾಕ್ಯದೊಡನೆ 200 ವಿದ್ಯಾರ್ಥಿಗಳೊಂದಿಗೆ ಪಿ.ಯು.ಸಿ. ಮಟ್ಟದ ಕಲಾ & ವಿಜ್ಞಾನಗಳು ಪ್ರಾರಂಭವಾದವು. 1971ರ ಶೈಕ್ಷಣಿಕ ಸಾಲಿನಿಂದ ಕಲಾ ವಿಷಯದಲ್ಲಿ ಪದವಿ ತರಗತಿಗಳು ಆರಂಭವಾದ್ದವು ಇದರ ಪ್ರಥಮ ಪ್ರಾಂಶುಪಾಲರಾಗಿ ಎಂ.ಮಲ್ಲಿಕಾರ್ಜುನ ಸ್ವಾಮಿಯವರು ಕಾರ್ಯನಿರ್ವಹಿಸಿದ್ದರು, ಪ್ರಾರಂಭದಲ್ಲಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಸೊಸೈಟಿಯ ಕಟ್ಟಡದಲ್ಲಿ ಹಾಗೂ ಪುರಸಭಾ, ಪ್ರೌಢಶಾಲೆ ಹಾಗೂ ಅಂಚೀಪುರದ ವೆಂಕಟೇಗೌಡರ ಮನೆಯಲ್ಲಿ ತೆಂಗಿನ ಗರಿಗಳಿಂದ ನಿರ್ಮಿಸಿದ ಗುಡಿಸಿಲಿನಲ್ಲಿ ಕಾರ್ಯನಿರ್ವಹಿಸುತ್ತಿತ್ತು.

ಶಾಂತಿ ಕಾಲೇಜಿನಲ್ಲಿ 1970ರಲ್ಲಿ ಶಾಂತಿ ಕಲಾ & ವಿಜ್ಞಾನ ಪಿ.ಯು. ಕಾಲೇಜನ್ನು 1971ರಲ್ಲಿ ಕಲಾ ಪದವಿ ಕಾಲೇಜಿನಲ್ಲಿ ಪ್ರಾರಂಭಿಸಲಾಯಿತು. 1982 ರಲ್ಲಿ ಪಿ.ಯು.ಸಿ. ಹಾಗೂ ಪದವಿ ಮಟ್ಟದಲ್ಲಿ ವಾಣಿಜ್ಯ ವಿಷಯಗಳನ್ನು ಪ್ರಾರಂಭಿಸಲಾಯಿತು. 1989–90 ರಲ್ಲಿ ವಿಜ್ಞಾನ ವಿಷಯಗಳನ್ನು ಪದವಿಮಟ್ಟದಲ್ಲೂ ಪಿ.ಯು.ಸಿ ಮಟ್ಟದಲ್ಲಿ ವೃತ್ತಿ ಶಿಕ್ಷಣ ಕೋರ್ಸ್‌ಗಳು ತರಲಾಯಿತ್ತು. 1996ರ ಪೆಬ್ರವರಿ 11 ಮತ್ತು 12 ರಂದು ಶಾಂತಿ ಶಿಕ್ಷಣ ಸಂಸ್ಥೆಯ ಬೆಳ್ಳಿ ಹಬ್ಬವನ್ನು ಆಚರಿಸಿಕೊಂಡಿದೆ. ಈ ಸಂದರ್ಭದಲ್ಲಿ "ಶಾಂತಿ ಸೇವಾ ಟ್ರಸ್ಟ್" ಸ್ಥಾಪಿಸಿ ಜನಪಯೋಗಿ ಕಾರ್ಯದಲ್ಲಿ ತೊಡಗಿಕೊಂಡಿದೆ. ಸಾರ್ವಜನಿಕ ಉಪಯೋಗಕ್ಕಾಗಿ ಹಾಗೂ ಬೆಳ್ಳಿಹಬ್ಬದ ಕಾಣಿಕೆಯಾಗಿ "ಶಾಂತಿ ಭವನ"ವನ್ನು ನಿರ್ಮಿಸಲಾಗಿದೆ.

ಹೀಗೆ ಶಾಂತಿ ಶಿಕ್ಷಣಸಂಸ್ಥೆ "ತಮಸೋಮ ಜ್ಯೋತಿರ್ಗಮಯ" ಎಂಬ ಧ್ಯೇಯ ವಾಕ್ಯದೊಂದಿಗೆ ಹಿಂದುಳಿದ ಮಳವಳ್ಳಿ ಭಾಗದ ಜನತೆಯ ಉನ್ನತ ವ್ಯಾಸಂಗವನ್ನು ಪಡೆದು ತಮ್ಮ ಕತ್ತಲ ಬದುಕಿನಿಂದ ಜ್ಞಾನ ಬೆಳಕಿನಡೆಗೆ ಸಾಗುತ್ತಿದ್ದಾರೆ.

## ಸಮಾಜ ಸೇವೆಯಲ್ಲಿ ನಾಗೇಗೌಡರು.

1996 ಪೆಬ್ರವರಿಯಲ್ಲಿ ನಡೆದ ಶಾಂತಿ ಶಿಕ್ಷಣ ಸಂಸ್ಥೆ ಬೆಳ್ಳಿಹಬ್ಬ ಸಂದರ್ಭದಲ್ಲಿ "ಶಾಂತಿ ಸೇವಾ ಟ್ರಸ್ಟ್" ಅನ್ನು ರಚಿಸಿದರು. ಈ ಟ್ರಸ್ಟ್ ಮೂಲಕ ಗ್ರಾಮೀಣ ಜನರಿಗೆ ಆರೋಗ್ಯ ತಪಸಾಣಾ ಶಿಬಿರ, ಉಚಿತ ಸಾಮೂಹಿಕ ವಿವಾಹಗಳನ್ನು ನಡೆಸಿದ್ದರು ಅಲ್ಲದೆ. ಅನೇಕ ದೇವಾಲಯಗಳ ಜೀರ್ಣೋದ್ಧಾರ, ಆರೋಗ್ಯ

ಸುಧಾರಣಾ ಕಾರ್ಯಕ್ರಮಗಳು, ದೀನದಲಿತರ ಉನ್ನತಿಗೆ ಹಲವಾರು ರೀತಿಯ ನೆರವನ್ನು ನೀಡುತ್ತಿದ್ದರು, ವಿಧವೆ ಹಾಗೂ ದುರ್ಬಲ ವರ್ಗದವರಿಗೆ ಆರ್ಥಿಕವಾಗಿ ಸಬಲರಾಗಲು ಹೈನುಗಾರಿಕೆಗೆ ಪ್ರೋತ್ಸಾಹ ಕೊಟ್ಟಿದ್ದಾರೆ. ಹೀಗೆ ನಾಗೇಗೌಡರು ಸಮಾಜ ಸೇವೆಯಲ್ಲಿ ತೊಡಗಿದ್ದರು.

ಕೆ.ಎನ್.ನಾಗೇಗೌಡರ ಮರಣದ ನಂತರ ಶಾಂತಿ ಶಿಕ್ಷಣ ಸಂಸ್ಥೆಯು ಪ್ರತಿವರ್ಷ ಅವರ ಪುಣ್ಯದಿನದ ಸ್ಮರಣಾರ್ಥ ಬಡಜನರಿಗೆ ಆದಿಚುಂಚನಗಿರಿಯು ಬಾಲಗಂಗಾಧರಸ್ವಾಮಿ ವೈದ್ಯಕೀಯ ಸಂಸ್ಥೆಯ ಸಹಯೋಗದೊಂದಿಗೆ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಳ್ಳುತ್ತಿದೆ ಕಣ್ಣಿನ ಶಸ್ತ್ರ ಚಿಕಿತ್ಸೆ ಕಾರ್ಯಕ್ರಮ ಉಚಿತ ಸಾಮೂಹಿಕ ವಿವಾಹ ಸಮಾರಂಭ ಹಾಗೂ ಗ್ರಾಮೀಣ ಸಮುದಾಯ ಉನ್ನತಿಗಾಗಿ ಹಲವು ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಕೆ.ಎನ್.ನಾಗೇಗೌಡರ ಒಡನಾಡಿಗಳು "ಯುವದನಿ ಸೇವಾ ಟ್ರಸ್ಟ್"ನ್ನು ರಚಿಸಿಕೊಂಡು ಕೆ.ಎನ್.ನಾಗೇಗೌಡರ ಹೆಸರನ್ನು ಚಿರಸ್ಥಾಯಿಗೊಳಿಸುವ ಸಲುವಾಗಿ ನಾಗೇಗೌಡರ ಮೆಚ್ಚಿನ ಕ್ಷೇತ್ರಗಳಾದ ನೀರಾವರಿ ಪಶುಸಂಗೋಪನಾ, ಕೃಷಿ ಕ್ಷೇತ್ರದ ಸಾಧಕರಿಗೆ ಕೆ.ಎನ್.ನಾಗೇಗೌಡರ ಪುಣ್ಯ ಸ್ಮರಣೆಯ ದಿನ ಪ್ರತಿವರ್ಷ ರಾಜ್ಯಮಟ್ಟದ ಕೆ.ಎನ್.ನಾಗೇಗೌಡ ಕೃಷಿ, ಪಶುಸಂಗೋಪನೆ, ನೀರಾವರಿ ಪ್ರಶಸ್ತಿ ನೀಡಲಾಗುತ್ತಿದೆ.

## ಅಡಿ ಟಿಪ್ಪಣಿಗಳು

1 ದೇ.ಜವರೇಗೌಡ – ಸುವರ್ಣ ಮಂಡ್ಯ – ಪುಟ 212

2 ಪಾರ್ಥ ಸಾರಥಿ (ಪ್ರ.ಸಂ) ಮಂಡ್ಯ ಗ್ಯಾಸೆಟಿಯರ್ 2003. ಪು 649

3 ದೇ ಜವರೇಗೌಡ ಪೂರ್ವೋಕ್ತ ಪುಟ 650

4 ಅದೇ, ಪುಟ 234

5 ಪಾರ್ಥ ಸಾರಥಿ (ಪ್ರ.ಸಂ) ಪೂರ್ವೋಕ್ತ ಪುಟ 652

6 ಡಿ.ಡಿ.ಪಿ.ಐ ಕಛೇರಿ ಮಂಡ್ಯ ಇವರ ಕೈಪಿಡಿ

7 ಪ್ರಶಾಂತಿ (ಬೆಳ್ಳಿಹಬ್ಬದ ಸ್ಮರಣ ಸಂಚಿಕೆ) ಶಾಂತಿ ಕಾಲೇಜು, ಮಳವಳ್ಳಿ. ಪುಟ 3

8 ಅದೇ, ಪುಟ 3

9 ಸಂದರ್ಶನ : ಸಂಶೋಧಕನಿಂದ, ಎಂ.ಹೆಚ್.ಕೆಂಪಯ್ಯ (ನಾಗೇಗೌಡರ ಒಡನಾಡಿ) ಮಳವಳ್ಳಿ, ದಿನಾಂಕ : 08.05.2012.

10 ಪ್ರಶಾಂತಿ ಸಂಚಿಕೆ ಪುಟ 7

11 ಸಂಸದೀಯ ಪಟುಗಳ ಮಾಲಿಕೆ, ಕೆ.ಎನ್.ನಾಗೇಗೌಡ, ಪುಟ 21

12 ಪ್ರಶಾಂತಿ ಪುಟ 6

13 ಸಂದರ್ಶನ : ಸಂಶೋಧಕನಿಂದ ಎಂ.ಕೆ.ನಾಗಮಣಿನಾಗೇಗೌಡರು (ನಾಗೇಗೌಡರ ಪತ್ನಿ) ದಿನಾಂಕ : 30.04.2012

14 ಶಾಂತಿ ಶಿಕ್ಷಣ ಟ್ರಸ್ಟಿನ ಬೈಲಾ.

# ಅಧ್ಯಾಯ – ಐದು

## ಉಪಸಂಹಾರ

ಕರ್ನಾಟಕ ಕಂಡ ಅಪರೂಪದ ರಾಜಕಾರಣಿಗಳಲ್ಲಿ ನಾಗೇಗೌಡರು ಒಬ್ಬರು ತಮ್ಮನ್ನು ಬಂಡಾಯ ಚಳುವಳಿಗಳಲ್ಲಿ ಗುರುತಿಸಿಕೊಂಡು ತಮ್ಮ ನಾಯಕತ್ವದ ಗುಣಗಳ ಮೂಲಕ ಕೆಳಸ್ತರದ ರಾಜಕಾರಣದಿಂದ ತಮ್ಮದೇ ಆದ ತತ್ವ ಸಿದ್ಧಾಂತ ಜನಪರ ಹೋರಾಟ ಮೂಲಕ ರಾಜಕಾರಣವನ್ನೇ ವೃತ್ತಿಯಾಗಿ ಸ್ವೀಕರಿಸಿ ವಿಧಾನ ಪರಿಷತ್, ವಿಧಾನ ಸಭಾ ಸದಸ್ಯರಾಗಿ, ರೈತ ಮತ್ತು ಜನಪರ ಖಾತೆಗಳಾದ ಪಶುಸಂಗೋಪನಾ, ಭಾರಿ ಮತ್ತು ಮಾಧ್ಯಮ ನೀರಾವರಿ ಖಾತೆಯ ಮಂತ್ರಿಯಾಗಿ ಕಾರ್ಯ ನಿರ್ವಹಿಸಿ ಜನಮನದಲ್ಲಿ ಉಳಿದಿರುವವರು ಕೆ.ಎನ್.ನಾಗೇಗೌಡರು.

ನಾಗೇಗೌಡರ ಪತ್ನಿ ನಾಗಮಣಿಯವರು ತಮ್ಮ ಪತಿಯ ರಾಜಕೀಯ ಏಳಿಗ್ಗೆ ಶಾಸಕರಾಗಿ ಸದನದಲ್ಲಿ ಪ್ರಸ್ತಾಪಿಸಿದ ವಿಷಯಗಳು ಸಚಿವರಾಗಿ ಅವರು ಕೈಗೊಂಡ ಅಭಿವೃದ್ಧಿ ಕಾರ್ಯಗಳನ್ನು ತಿಳಿಸಿದ್ದರು. ಅವರು ಸಮಾಜಸೇವೆಯಲ್ಲಿ ತೊಡಗಿಸಿಕೊಂಡು ಸಲಹೆ ಪಡೆಯುತ್ತಿದ್ದರ ಬಗ್ಗೆ ತಿಳಿಸಿದರು. ತಮ್ಮ ಪತಿಯ ಆದರ್ಶಗಳಾದ ಹಿಂದುಳಿದ ದೀನ ದಲಿತರ ಸೇವೆ ಮಾಡಬೇಕು ಹಿಂದುಳಿದವರಿಗೆ ಶಿಕ್ಷಣವನ್ನು ನೀಡುವುದರ ಮೂಲಕ ಅವರ ಅಭಿವೃದ್ಧಿಗೆ ಶ್ರಮಿಸಬೇಕು, ಗ್ರಾಮೀಣ ಜನರ ಬದುಕನ್ನು ಹಸನಾಗಿಸುವ ಹೈನುಗಾರಿಕೆಗೆ ಪ್ರೋತ್ಸಾಹಿಸಬೇಕೆಂದಿದ್ದರು. ನಾಗೇಗೌಡರ ಮಗ ಅರ್ಜುನ್‌ರವರು ತಂದೆಯ ಇಚ್ಛೆಯಂತೆ ರಾಜಕೀಯದಿಂದ ದೂರ ಉಳಿದು ವ್ಯಾಪಾರ ಮತ್ತು ವಹಿವಾಟುಗಳನ್ನು ನಡೆಸುತ್ತಾ ಜೀವನವನ್ನು ಕಂಡುಕೊಂಡಿದ್ದಾರೆ. ಮಗಳು ಅನಿತರವರು ಗಂಡ ಸಂಜೀವ್ ಹಾಗೂ ಇಬ್ಬರು ಮಕ್ಕಳೊಂದಿಗೆ ಗೃಹಿಣಿಯಾಗಿ ಜೀವನ ನಡೆಸುತ್ತಿದ್ದಾರೆ. ನಾಗೇಗೌಡರ ಒಡನಾಡಿಗಳಿಂದ ಹಲವು ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಿ ನಿಬಂಧ ರಚಿಸಲಾಗಿದೆ. ಅಲ್ಲದೆ ಮಳವಳ್ಳಿಯ ಶಾಂತಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲು ನಡೆಸಿದ ಹೋರಾಟದ ಬಗೆ ಹಾಗೂ ಅದರ ಉನ್ನತಿಗೆ ಶ್ರಮಿಸಿದ ಬಗ್ಗೆ ತಿಳಿಸಿದರು.

ಕೆ.ಎನ್.ನಾಗೇಗೌಡರು ಬಾಲ್ಯದಿಂದಲೂ ಚುರುಕುಮತಿಯಾಗಿ ತಂದೆಯ ಇಚ್ಛೆಯಂತೆ ಉನ್ನತ ವಿದ್ಯಾಭ್ಯಾಸವನ್ನು ಪಡೆದರು. ವಿದ್ಯಾಭ್ಯಾಸದ ಸಮಯದಲ್ಲಿ ಉತ್ತಮ ಸ್ನೇಹತ್ವ ಪ್ರಿಯತೆ, ಸಂಘಟನಾ ಸಾಮರ್ಥ್ಯ ವಿದ್ಯಾರ್ಥಿಗಳಿಗೆ ಆದ ಅನ್ಯಾಯದ ವಿರುದ್ಧ ಹೋರಾಟದ ಬಗ್ಗೆ ಮನೋಭಾವವನ್ನು ಬೆಳಸಿಕೊಂಡಿದ್ದರು. ತಮ್ಮದೆ ಆದ ಸ್ನೇಹಿತರ ಬಳಗವನ್ನು ನಿರ್ಮಿಸಿಕೊಂಡಿದ್ದರು. ವಿದ್ಯಾರ್ಥಿ ಜೀವನದಲ್ಲಿ ಪ್ರಜಾಪ್ರಭುತ್ವದ ತತ್ವಕ್ಕೆ ಬೆಲೆ ಕೊಟ್ಟವರು ವಿಚಾರ ವ್ಯವಹಾರ ವೈಚಾರಿಕತೆಯಿಂದ ಸೂಕ್ತವಾಗಿ ನಡೆದುಕೊಳ್ಳುತ್ತಿದ್ದಲ್ಲದೆ ಸ್ನೇಹ ಪ್ರಿಯ ಪಕ್ವತೆಯ ಪರಿಪೂರ್ಣತೆ ಮಾತುಗಳನ್ನಾಡುತ್ತಿದ್ದರು. ವೈವಾಹಿಕ ಜೀವನದಲ್ಲಿ ಸಂತೃಪ್ತಿ ಕಂಡ ನಾಗೇಗೌಡರು

ತಮ್ಮ ಮಡದಿಗೆ ಸಂಸಾರದ ಜವಾಬ್ದಾರಿ ವಹಿಸಿ ತಾವು ಸಾರ್ವಜನಿಕ ಸೇವೆಯಲ್ಲಿ ತೊಡಗಿ ರಾಜಕೀಯವನ್ನೇ ವೃತ್ತಿಯನ್ನಾಗಿಸಿಕೊಂಡರು.

ಕೆ.ಎನ್.ನಾಗೇಗೌಡರು ರಾಜಕಾರಣವನ್ನು ಪ್ರವೇಶಿಸಿ ತಾವು ಕ್ರಿಯಾಶೀಲತೆಯ ನಾಯಕತ್ವ ದೈತ್ಯ ಶಕ್ತಿಸಾಮರ್ಥ್ಯ ಪ್ರತಿಭೆಗಳ ಮೂಲಕ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಪಕ್ಷವನ್ನು ಸಂಘಟಿಸಿದರು. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜೊತೆಗೂಡಿ ಕೆಲಸ ಮಾಡುತ್ತಿದ್ದ ಅವರು ಪಕ್ಷದ ಸಂಘಟನೆಗೆ ದೃಡ ನಿಲುವನ್ನು ಹೊಂದಿದ್ದರು. ಖಂಡಿತವಾದಿಯಾಗಿ ಬುದ್ಧಿವಂತಿಗೆ ಯಿಂದ ಚತುರ ತಂತ್ರಗಾರಿಕೆಯಿಂದ ಹಿಡಿದ ಛಲಬಿಡದ ಆಂದೋಲನದ ಮತ್ತು ಬಂಡಾಯ ಪ್ರವೃತ್ತಿಯ ರಾಜಕೀಯ ಚಾಣಾಕ್ಷತನವನ್ನು ಹೊಂದಿದರು. ಶ್ರಮಜೀವಿ, ಆತ್ಮಿಯತೆ ಈ ಗುಣಗಳೇ ಅವರಿಗೆ ರಾಜಕೀಯ ಕ್ಷೇತ್ರದಲ್ಲಿ ವರವಾಗಿದ್ದವು ಸ್ನೇಹತ್ವಕ್ಕೆ ವಯಸ್ಸು ಮುಖ್ಯವಲ್ಲ ಮನಸ್ಸು ಎಂದು ಹಿರಿಯ ಹಾಗೂ ಕಿರಿಯರೊಂದಿಗೆ ಆತ್ಮೀಯತೆಯನ್ನು ಹೊಂದಿದ ಹೃದಯವಂತ ಗೆಳೆಯರಾಗಿದ್ದರು. ರಾಜಕಾರಣಿಯಾಗಿ ಸಾರ್ವಜನಿಕ ಜೀವನವನ್ನು ನಿರ್ಭಿತಿಯಿಂದ ನಿರ್ವಹಿಸಿದ ರಾಜಕೀಯ ಮುತ್ಸದಿಯಾಗಿದ್ದರು. ರೈತಪರ ಜನಪರ ಹೋರಾಟಗಾರರಾಗಿ, ರೈತಾಪಿ ವರ್ಗದವರ ಬಗ್ಗೆ ಕಳಜಿ ಉಳ್ಳವರು. ರಾಜಕಾರಣದಲ್ಲಿ ಸೋತರು ದೃತಿಗೆಡದ ನಾಯಕರು ನೈತಿಕ ನೆಲ್ಲಗಟ್ಟಿನಲ್ಲಿ ರಾಜಕಾರಣವನ್ನು ಕೆ.ಎನ್.ನಾಗೇಗೌಡರು ನಡೆಸಿದ್ದರು.

ಕೆ.ಎನ್.ನಾಗೇಗೌಡರು ವಿಧಾನ ಪರಿಷತ್ ಹಾಗೂ ವಿಧಾನಸಭೆ ಸದಸ್ಯರಾಗಿ ದೃಢ ನಿಲುವುಳ್ಳ ಸಂಸದೀಯ ಪಟುವಾಗಿದ್ದರು. ಸದನದಲ್ಲಿ ಅವರು ಸರ್ಕಾರದ ತಪ್ಪುಗಳಿದ್ದರೆ ಬೆರಳು ಮಾಡಿ ತೋರಿಸುತ್ತಿರುದಲ್ಲದೆ ಕರ್ನಾಟಕ ರಾಜ್ಯ ಹಣಕಾಸು ನಿಗಮ (ಕೆ.ಎಸ್.ಎಫ್.ಸಿ), ಎನ್.ಜಿ.ಇ.ಎಫ್, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಹಾಗ್ಯೆ ಕೈಗಾರಿಕೆ ಇಲಾಖೆಗಳ ಭ್ರಷ್ಟಚಾರದ ಬಗ್ಗೆ ಪ್ರಸ್ತಾಪಿಸುತ್ತಾ ಅಂಕಿಅಂಶಗಳ ಆಧಾರ ಸಹಿತ ಸದನ ಸರ್ಕಾರ ಹಾಗೂ ರಾಜ್ಯದ ಗಮನಸೆಳೆದಿದ್ದರು. ಜನ ಸಾಮಾನ್ಯರ ಸಮಸ್ಯೆಗಳಾದ ವಿದ್ಯುತ್ ಅಭಾವ ಹಾಲಿ ಉತ್ಪನ್ನಗಳ ಬೆಲೆ ಏರಿಕೆ, ನೀರಾವರಿ ಕ್ಷೇತ್ರದಲ್ಲಿನ ತೊಂದರೆ, ರೈತರ ಕಬ್ಬಿನ ಬಾಕಿ, ರೈತಚಳುವಳಿಯ ವಿಷಯಗಳನ್ನು ಸದಸನದಲ್ಲಿ ಪ್ರಸ್ತಾಪಿಸಿ ಆಡಳಿತದಲ್ಲಿದ್ದವರು ಗಮನ ಸೆಳೆಯುತ್ತಿದ್ದರು. ನಾಗೇಗೌಡರು ಸದನದಲ್ಲಿ ವಾಗ್ವಿಲಾಸವನ್ನು ತಮ್ಮ ಸ್ಪಂದನ ವ್ಯಂಗ್ಯ ಮಿಶ್ರಿತ ಹಾಸ್ಯ ಮಾತುಗಳನ್ನಾಡುತ್ತಿದ್ದರು. ಇದಕ್ಕೆ ಒಂದು ಉದಾಹರಣೆ ಎಂದರೆ ವಿಧಾನ ಮಂಡಲ ಅಧಿವೇಶನಕ್ಕೆ 18 ಜೂನ್ 2012ರಲ್ಲಿ 60 ವರ್ಷ ತುಂಬಿದ ಸಂದರ್ಭದಲ್ಲಿ ಪ್ರಜಾವಾಣಿ ಪತ್ರಿಕೆ ಪ್ರಕಟಿಸಿದ "ಮಾತಿನ ಮುತ್ತಿನ ಹಾರ ಕಟ್ಟಿದವರು"ಎಂಬ ಲೇಖನದಲ್ಲಿ ನಾಗೇಗೌಡರ ಭಾಷಣ ತುಣಕಾದ "ಅಧ್ಯಕ್ಷರೇ ಆಗಾಗ ಹೋಟೆಲ್ ಊಟ ಮಾಡಬೇಕು ದಿನಾಲು ಮನೆ ಊಟ ಮಾಡುತ್ತಿದ್ದರೆ ಬೇಜಾರು" ಎಂಬ ಮಾತಿನಲ್ಲಿ ದ್ವಂದ್ವ ವ್ಯಂಗ್ಯ ಹಾಸ್ಯದ ತಿರುಳನ್ನು ನೋಡಬಹುದು. ಜನಸಾಮಾನ್ಯರ

ಸಮಸ್ಯೆಗಳನ್ನು ಕೈಗೆತ್ತಿಕೊಂಡು ಆಳವಾಗಿ ಎಲ್ಲರ ಗಮನವನ್ನು ಸೆಳೆಯುತ್ತಿದ್ದರು. ಅಲ್ಲದೆ ಯಾವುದೇ ಒಳ್ಳೆಯ ಅಂಶಗಳಿಗೆ ವಿರೋಧ ಪಕ್ಷದಲ್ಲಿದ್ದರು ಆಡಳಿತ ಪಕ್ಷಕ್ಕೆ ಬೆಂಬಲ ನೀಡುತ್ತಿದ್ದರು. ಇದಕ್ಕೆ ಒಂದು ನಿದರ್ಶನ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾಯ್ದೆಗೆ ಬೆಂಬಲ ನೀಡಿದುದ್ದು. ಸದನದಲ್ಲಿ ಅತ್ಯುತ್ತಮ ಸಂಸದೀಯ ಪಟುಗಳಲ್ಲಿ ಒಬ್ಬರಾಗಿದ್ದಾರೆ. ಕಿರುಗಾವಲು ಕ್ಷೇತ್ರದ ಶಾಸಕರಾಗಿ ಇವರು ಮಾಡಿದ ಸಾಧನೆ ಇವರ ಪತ್ನಿ ಎಂ.ಕೆ.ನಾಗಮಣಿ ನಾಗೇಗೌಡರು ಸಂಯುಕ್ತ ಜನತಾದಳ ಪಕ್ಷದಿಂದ 2004ರಲ್ಲಿ ಕಿರುಗಾವಲು ವಿಧಾನ ಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ನಿರಾಯಾಸವಾಗಿ ಆಯ್ಕೆಯಾದರು.

ಕೆ.ಎನ್.ನಾಗೇಗೌಡರು ಕರ್ನಾಟಕ ಕಂಡ ಅಪೂರ್ವ ಮತ್ತು ದಕ್ಷ ಆಡಳಿತಗಾರರು ರೈತ ಪರ ಚಿಂತಕ ನಿರ್ಲಕ್ಷಿತವಾಗಿದ್ದು, ಪಶು ಸಂಗೋಪನಾ ಮತ್ತು ಪಶು ವೈದ್ಯಕೀಯ ಸಚಿವರಾಗಿ ಗ್ರಾಮ ಪಂಚಾಯಿತಿಗೆ ಒಂದು ಪಶು ಚಿಕಿತ್ಸಾ ಕೇಂದ್ರ ಎಂಬ ನೀತಿಯಿಂದ ರೈತರ ಪಾಲಿನ ಸಂಜೀವಿನಿಯಾಗಿದ್ದಾರೆ. ಕರ್ನಾಟಕದ ಹೈನುಗಾರಿಕೆಗೆ ಭದ್ರ ನೆಲಗಟ್ಟನ್ನು ಒದಗಿಸಿದರು. ನಾಗೇಗೌಡರಿಂದಲೆ ಪಶುಸಂಗೋಪನೆ ಇಲಾಖೆ ಹೆಸರು ಬಂದಿತ್ತು ಎನ್ನಬಹುದು. ಸ್ವತಹ ಸಿವಿಲ್ ಇಂಜಿನಿಯರಿಂಗ್ ಆಗಿದ್ದ ನಾಗೇಗೌಡರು ನೀರಾವರಿ ವಿಚಾರದಲ್ಲಿ ವಾಸ್ತವತೆಯ ಆಧಾರದ ಅದ್ಭುತ ಜ್ಞಾನಭಂಡಾರ ಅವರಲ್ಲಿತ್ತು. ನೀರಾವರಿ ಸಚಿವರಾಗಿ ವ್ಯರ್ಥವಾಗುತ್ತಿದ್ದ ಜಲಸಂಪತ್ತನ್ನು ರೈತರ ಹೊಲಕ್ಕೆ ಹರಿಸಿ ಅವರ ಹೊಲದ ಜೊತೆಗೆ ಅವರ ಬದುಕನ್ನು ಸಹ ಅಸನಾಗಿಸಿದ ಹಿಡಿದ ಕೆಲಸವನ್ನು ಬಿಡದೇ ಸಾಧಿಸುವ ಛಲಗಾರರಾಗಿದ್ದರು.

ಗ್ರಾಮೀಣ ಜನತೆಯ ಬಗ್ಗೆ ಪ್ರೀತಿ–ವಿಶ್ವಾಸ ಹೊಂದಿದ ನಾಗೇಗೌಡರು ರೈತರ ಜೀವನಮಟ್ಟ ಸುಧಾರಿಸದೇ ಹಳ್ಳಿಗಳು ಸುಧಾರಣೆಯಾದರೆ ದೇಶ ಪ್ರಗತಿಪರ ರಾಷ್ಟವಾಗುವುದಿಲ್ಲ ಎಂದು ಹೇಳುತ್ತಿದ್ದರು. ತಾವು ಸಚಿವರಾದ ಸಂದರ್ಭದಲ್ಲಿ ಭ್ರಷ್ಟಚಾರದ ಬಗ್ಗೆ ಟೀಕೆಗಳು ಉಂಟಾದಾಗ " ಟೀಕೆಗಳು ಸಾಯುತ್ತವೆ ಕೆಲಸಗಳು ಮಾತ್ರ ಉಳಿಯುತ್ತವೆ" ಎಂದು ಹೇಳುತ್ತಿದ್ದರು

ಕೆ.ಎನ್.ನಾಗೇಗೌಡರ ಶಿಕ್ಷಣ ಪ್ರೇಮಿಯಾಗಿ ಹಿಂದುಳಿದ ಪ್ರದೇಶದ ಜನತೆಗೆ ಶಿಕ್ಷಣವನ್ನು ನೀಡಲು ಹೋರಾಟದ ಮೂಲಕವೇ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಅದರ ಉನ್ನತಿಗೆ ಶ್ರಮಿಸಿದರು. ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯತೆ ನೀಡಿದಲ್ಲದೆ ಶಿಕ್ಷಣವೇ ಎಲ್ಲದಕ್ಕೆ ಪರಿಹಾರ ಎಂದು ಹೇಳುತ್ತಿದ್ದವರು ನಾವು ಹಳ್ಳಿಯಲ್ಲಿ ಹುಟ್ಟಿ ಹಳ್ಳಿಯ ಜನರಿಗೆ ಶಿಕ್ಷಣ ಕೊಡದೇ ಇದ್ದರೆ ಬೇರೆಯಾರು ಕೊಡಬೇಕು ಎಂದು ಹೇಳಿ ವಿದ್ಯಾ ಕ್ಷೇತ್ರ ಕೇವಲ ಪಟ್ಟಣದವರು ಪಾಲಗಬಾರದು ಎಂದು ಸಲಹೆ ನೀಡುತ್ತಿದ್ದರು. ಅಲ್ಲದೆ ನಾಗೇಗೌಡರು ತ್ಯಾಗ ಮತ್ತು ಸೇವೆ ಜೀವನದ ಧ್ಯೆಯವನ್ನಾಗಿಸಿಕೊಂಡು ಸಮಾಜಜೀವಿಯಾಗಿದ್ದರು. ಅವರು ಬಡಜನತೆಯ ಬಗ್ಗೆ ಕಳಜಿ ವಹಿಸಿದ್ದರು. ಸಮಾಜದಲ್ಲಿ ಸಾಮರಸ್ಯ ಮತ್ತು ಒಳ್ಳೆತನಕ್ಕೆ ಬೆಲೆ ಕೊಡುವ ಗುಣ ಪಕ್ಷಪಾತಿಯಾಗಿದ್ದರು.

ನಾಗೇಗೌಡರು ರಾಷ್ಟ್ರವನ್ನು ಉತ್ತಮವಾಗಿ ಕಟ್ಟಿ ಪ್ರಗತಿ ಪಥದತ್ತ ಕೊಂಡೊಯ್ಯಬೇಕು ಆದ್ದರಿಂದ ಈ ಸಮಾಜಕ್ಕೆ ಏನಾದರೂ ಕಿಂಚಿತ್ತು ಸೇವೆ ಮಾಡಿ ಋಣ ಪರಿಹಾರ ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದುದಲ್ಲದೇ, ಯುವಕರು ನಾಡು ಕಟ್ಟುವ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹೇಳುತ್ತಿದ್ದರು.

ಕೆ.ಎನ್.ನಾಗೇಗೌಡರ ಬಗ್ಗೆ ಹೇಳುವಾಗ ನಾಡಿನ ಚರಿತ್ರೆಯಲ್ಲಿ ಹಲವಾರು ಮಂದಿ ಕೆಳಸ್ತರದಲ್ಲಿ ಅಂದರೆ ರೈತರ ಜನಸಾಮಾನ್ಯರ ಹೋರಾಟದ ಮೂಲಕ ಬಂದು ರಾಜಕೀಯ ಪ್ರವೇಶಿಸಿ ನಾಡಿನ ರೈತ ಸಮುದಾಯದ ಏಳಿಗೆಗೆ ಶ್ರಮಿಸಿದ ವ್ಯಕ್ತಿಯಾದ ಕೆ.ಎನ್.ನಾಗೇಗೌಡ ಬಗ್ಗೆ ಅಧ್ಯಯನ ಕೈಗೊಂಡು ಸಂಶೋಧನೆ ನಡೆಸಿ ಪ್ರಬಂಧ ರಚಿಸಿರುವುದು ಸೂಕ್ತವೆನಿಸುತ್ತದೆ.

*********

# ಪರಾಮರ್ಶನ ಗ್ರಂಥಗಳು


I **Primary sources :**

- A Review of working of Karnataka State legislative Assembly (1994-1999)
- Annual report of Mysore Sugar company Ltd, Mandya (1976-1977)
- Karnataka State Legislative Assembly Debates (1982-1994)
- Karnataka State Legislative Assembly Debates (1996-1999)¸
- Karnataka State Legislative council Debates (1982-1994)

II **Interviews of K.N. Nagegowda's contemporaries :**

Sri. Kempaiah M.H Malavalli

Smt. M.K. Nagamani Nagegowda

Sri Thimmegowda H, Malavalli

Sri Rajashekarappa C.K, Chikkamalagudu

## ಅನುಷಂಗಿಕ ಆಕಾರಗಳು

## ಕನ್ನಡ ಆಧಾರ ಗ್ರಂಥಗಳು

1) ಕೃಷ್ಣೇಗೌಡ ಹುಸ್ಕೂರು – (ಪ್ರ.ಸಂ) – ಮಳವಳ್ಳಿ ಮುತ್ತು (ಮಳವಳ್ಳಿ ತಾಲ್ಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಹಲಗೂರು ಸ್ಮರಣ ಸಂಚಿಕೆ 2011) ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಮಳವಳ್ಳಿ– 2011

2) ಕೈಪಿಡಿ– ಭಾರೀ ನೀರಾವರಿ ಸಚಿವರಾಗಿ ಶಾಸಕರಾಗಿ ಕೆ.ಎನ್.ನಾಗೇಗೌಡರ ಕಿರುಗಾವಲು ಕ್ಷೇತ್ರ ಸಾಧನೆ – 1999.

3) ಗೋಪಾಲ್.ಆರ್ (ಸಂ)– ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಗಳ ನಿರ್ದೇಶನಾಲಯ, ಮೈಸೂರು–2008.

4) ಜವರೇಗೌಡ ದೇ – (ಪ್ರ.ಸಂ) ಸಿರಿಯೊಡಲು – 63ನೇ ಕನ್ನಡ ಸಾಹಿತ್ಯ ಸಮ್ಮೇಳನ ಸಮಿತಿ ಮಂಡ್ಯ – 1994.

5) ಜವರೇಗೌಡ ದೇ. (ಪ್ರ.ಸಂ) – ಸುವರ್ಣ ಮಂಡ್ಯ – 63ನೇ ಕನ್ನಡ ಸಾಹಿತ್ಯ ಸಮ್ಮೇಳನ ಸಮಿತಿ ಮಂಡ್ಯ 1994.

6) ಜವರೇಗೌಡ ದೇ – ಎಸ್.ಎಂ.ಕೃಷ್ಣ : ಬದುಕು–ಸಾಧನೆ ವನಶ್ರೀ ಪ್ರಕಾಶ. ಮೈಸೂರು 1999.

7) ಜವರೇಗೌಡ – ನಿತ್ಯಸಚಿವ (ಕೆ.ವಿ.ಶಂಕರಗೌಡರ ಜೀವನ ಚರಿತ್ರೆ) –ದೇಜಗೌ ಟ್ರಸ್ಟ್, ಮೈಸೂರು–1986.

8) ನಂಜೇಗೌಡ ಬಿ.ಎಂ.– ಮಂಡ್ಯ ಜಿಲ್ಲೆಯಲ್ಲಿ ಉನ್ನತ ಶಿಕ್ಷಣದ ಬೆಳವಣಿಗೆಯ ಅಧ್ಯಯನ, ಮೈಸೂರು ವಿಶ್ವವಿದ್ಯಾನಿಲಯ–1975.

9) ನಾಗರಾಜು ಎಂ.ಜಿ – ಕರ್ನಾಟಕದಲ್ಲಿ ರೈತ ಚಳುವಳಿ ಸತ್ಯಾಗ್ರಹಗಳು ಕರ್ನಾಟಕ ವಿಧಾನ ಮಂಡಲ ಗ್ರಂಥಾಲಯ ಸಮಿತಿ, ಬೆಂಗಳೂರು – 2006.

10) ಪಾರ್ಥ ಸಾರಥಿ (ಪ್ರ.ಸಂ) ಮಂಡ್ಯ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ಸರ್ಕಾರ–2003.

11) ಪ್ರಶಾಂತಿ (ಬೆಳ್ಳಿ ಹಬ್ಬ ಸ್ಮರಣ ಸಂಚಿಕೆ) – ಶಾಂತಿ ಶಿಕ್ಷಣ ಸಂಸ್ಥೆ, ಮಳವಳ್ಳಿ –1996

12) ಮುದ್ದೇಗೌಡ ಹೆಚ್.ಎಸ್., (ಸಂ) ಛಲಗಾರ (ಕೆ.ಎನ್.ನಾಗೇಗೌಡರ ಸಂಸ್ಮರಣ ಗ್ರಂಥ. ಯುವಧನ ಸೇವಾ ಪ್ರತಿಷ್ಠಾನ (ರಿ) ಮಂಡ್ಯ 2005.

13) ಮುದ್ದೇಗೌಡ ಹೆಚ್.ಎಸ್. – ಜೀವನಾಡಿ – ಹೆಬ್ಬಕವಾಡಿ ವೆಂಕಟೇಶ್ ಪ್ರಕಾಶನ, ಮಂಡ್ಯ – 2002.

14) ಮುದ್ದೇಗೌಡ ಹೆಚ್.ಎಸ್. – ಕೆ.ಎನ್.ನಾಗೇಗೌಡ ( ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ) – ಕರ್ನಾಟಕ ವಿಧಾನ ಮಂಡಲ ಗ್ರಂಥಾಲಯ ಸಮಿತಿ, ಬೆಂಗಳೂರು – 2006.

15) ರಾಜಶೇಖರ್ ಹೆಚ್.ಪಿ. (ಪ್ರ.ಸಂ) ನೇಗಿಲಭಾಗ್ಯ – (ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್ ದ್ವಿತೀಯ ವರ್ಷದ ಸ್ಮರಣ ಸಂಚಿಕೆ) – ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್ –2012.

16) ರಾಜಶೇಖರ ಪಿ.ಕೆ. (ಪ್ರ.ಸಂ.) – ಮಣ್ಣಿನ ಹಣತೆ – ಹೊನ್ನಾರು ಜಾನಪದ ಗಾಯಕರು, ಮೈಸೂರು – 2006.

17) ರಾಮೇಗೌಡ (ರಾಗೌ) (ಪ್ರ.ಸಂ) – ಅಪರಂಜಿ (ಜಿ.ಮಾದೇಗೌಡ ಅಭಿನಂದನ ಗ್ರಂಥ) ಭಾರತೀನಗರ, ಮಂಡ್ಯ ಜಿಲ್ಲೆ–2001.

18) ರಾಜೇಗೌಡ (ಪ್ರ.ಸಂ)–ಗ್ರಾಮಚೇತನ (ಹೆಚ್.ಡಿ.ಚೌಡಯ್ಯ ಅಭಿನಂದನ ಗ್ರಂಥ) ಮಂಡ್ಯ –2003.

19) ಲಿಂಗಯ್ಯ ಡಿ– ಹೆಚ್.ಕೆ.ವೀರಣ್ಣಗೌಡ (ಸಂಕ್ಷಿಪ್ತ ಜೀವನ ಚರಿತ್ರೆ), ಹೆಚ್.ಕೆ.ವಿ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು–1999.

20) ವೀರಣ್ಣಗೌಡ ಹೆಚ್.ಕೆ –ಬದುಕು–ಮೆಲುಕು (ಆತ್ಮಕಥನ), ಪ್ರಬುದ್ಧ ಪ್ರಕಾಶನ, ಮೈಸೂರು–1999.

21) ವೀರಪ್ಪ ಜಿ.ಟಿ. (ಸಂ)– ಪುಣ್ಣಕೋಟಿ–ಮಂಡ್ಯ ಜಿಲ್ಲಾ ಕ.ಸಾ.ಪ. ಮಂಡ್ಯ –1995.

22) ಸಂದೇಶ್ ಎಲ್. – ಕಾವೇರಿ ಕದನ (2002–03ರ ಕಾವೇರಿ ಹೋರಾಟದ ಸಮಗ್ರ ಚಿತ್ರಣ) ಪಾಮು ಕ್ರಿಯೇಷನ್ಸ್, ಮಂಡ್ಯ – 2003.

23) ಸುರೇಶ ಕೆ.ಜೆ.– ಮಂಡ್ಯ ಜಿಲ್ಲಾ ರೈತ ಚಳುವಳಿ ಒಂದು ಅಧ್ಯಯನ – ಅಪ್ರಕಟಿತ ಪ್ರೌಢ ಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ–1999.

24) ಶಿವರಾಮು ಎಸ್. –ಕೆ.ವಿ.ಶಂಕರಗೌಡ ಜೀವನ ಸಾಧನೆ – ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ, ಕರ್ನಾಟಕ ಸಂಘ (ರಿ) ಮಂಡ್ಯ 2008.

25) ಶಿವರಾಮು ಎಸ್.– ಮಂಡ್ಯ ಜಿಲ್ಲೆಯ ಜನಪರ ಚಳುವಳಿಗಳು–ಮನೋಜ್ ಪಬ್ಲಿಕೇಷನ್, ಬೆಂಗಳೂರು. 2011.


26) ಶಿವಲಿಂಗಯ್ಯ (ಪ್ರ.ಸಂ)– ಕಬ್ಬಿನಕಂಪು (ಮೈಸೂರು ಸಕ್ಕರೆ ಕಂಪನಿ ನಿಯಮಿತ ಮಂಡ್ಯ ವಜ್ರ ಮಹೋತ್ಸವ ಸ್ಮರಣ ಸಂಚಿಕೆ) 1994.

27) ಶ್ರೀನಿವಾಸಗೌಡ ಬಿ.ಟಿ. – ಕಾವೇರಿ ಕಣ್ಣೀರು ತಣ್ಣೀರು – ಅನಂತ ಪ್ರಗತಿ ಎಂಟರ್ ಪ್ರೈಸಸ್, ಬೆಂಗಳೂರು – 2007.

**ಪತ್ರಿಕೆಗಳು :**

- ಪ್ರಜಾವಾಣಿ
- ಪೌರವಾಣಿ
- ಸಂಯುಕ್ತ ಕರ್ನಾಟಕ

# ಕೆ.ಎನ್.ನಾಗೇಗೌಡರ ವಂಶವೃಕ್ಷ




# ಕೆ.ಎನ್.ನಾಗೇಗೌಡರ ಛಾಯಾಚಿತ್ರಗಳು



ಕೆ.ಎನ್.ನಾಗೇಗೌಡರು




ಶಾಂತಿ ಶಿಕ್ಷಣ ಸಂಸ್ಥೆಯ ಕಟ್ಟಡದ ಗುದ್ದಲಿ ಪೂಜೆ



ನಾಗೇಗೌಡರು ಮತ್ತು ಸೊಸೆಯೊಂದಿಗೆ ಕೆಂಪೇಗೌಡರು



ನಾಗೇಗೌಡರ ವಿವಾಹದಲ್ಲಿ ಮಂಡ್ಯ ಶಾಸಕರಾದ
ಶ್ರೀ ಜೆ.ದೇವಯ್ಯ ಮತ್ತು ಶ್ರೀ ಎ.ಸಿ.ಮಾದೇಗೌಡರವರು



ಕುರಿ ಸಾಕಾಣಿಕೆದಾರರ ಸಮ್ಮೇಳನದಲ್ಲಿ ನಾಗೇಗೌಡರು



ವರುಣಾ ನಾಲೆ ವಿರೋಧಿ ಚಳುವಳಿಯಲ್ಲಿ ನಾಗೇಗೌಡರು



ಮಂಡ್ಯ ಸಕ್ಕರೆ ಕಾರ್ಖಾನೆಯ ಸುವರ್ಣ ಮಹೋತ್ಸವದಲ್ಲಿ
ನಾಗೇಗೌಡರು



ಕಾವೇರಿ ವಿವಾದದಲ್ಲಿ ಬಂಧಿತರಾಗಿ ಧಾರವಾಡ ಜೈಲಿನಿಂದ
ಬಿಡುಗಡೆಯಾದ ನಾಗೇಗೌಡರು



ವರುಣಾ ನಾಲೆ ವಿರೋಧಿ ಚಳುವಳಿಯಲ್ಲಿ
ಹೆಚ್.ಡಿ.ಚೌಡಯ್ಯನವರೊಂದಿಗೆ ನಾಗೇಗೌಡರು